BUDGEST ESTIMATIES FOR 1976-77
DEMANDS F R GRANTS

Demand Nos. 39, 42, 45, 46, 40 and 47

SRI N. CHIKKE GOWDA (Minister for Agriculture and Animal Husbandry).—Madam, on the recommendation of the Governor, I beg to move·

"That a sum not exceeding Rs 23.79,67,000 be granted to the Government to defray the charges which will come in course of payment during the financial year ending 31st day of March 1977 in respect of Demand No· 39 "Agriculture (Excluding Horticu ture)"

"That a sum not exceeding Rs. 4,58.99.000 be granted to the Government to defray the charges which will come in course of payme t during the financial year ·n ing 31st day of March 1977 in respect of Demand No· 42 "Soil and Water Conservation."

"That a sum not exceeding Rs 5,42 66 000 be granted to the Government to defray the charges which will come in course of p·y-ment during the financial year ending 31st day of March 1977 in respect of Demand No. 45 "Animal Husbandry".

"That a sum not exceeding Rs. 9,53,99,000 be granted to the Government to defray the charges which will come in course of pay-ment during the financial year ending 31st day of March 1977 in respect of Demand No· 46 'Dairy Development."

SRI K. T. RATHOD (Minister of State for Fisheries and Horticulture).—Madam, on the recommendation of the Governor, I beg to Move,

"That a sum not exceeding Rs. 2,82 23,000 be granted to the Government to defrav the charges which will come in course of pay-ment during the financial year ending 31st day of March 1977 in respect of Demand No, 40 "Horticulture".

"That a sum not exceeding Rs 2,96 49,000 be granted to the Government to defray the charges which will come in course of pay-ment during the financial year ending 31st day of March 1977 in respect of Demand No 47. "Fisheries".

MADAM SPEAKAR ; Motion moved.

"That a sum not exceeding Rs. 23,79.67,000 be granted to the Government to defray the charges which will come in course of pay-ment during the financial year ending 31st day of March 1977 in respect of Demand No. 39 "Agriculture (Excluding Horticulture)."

Along with this Demand the other Demands *viz* 40, 42, 45, 46 and 47 are also opened for Debate.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಹಾಗೂ ಮಾನ್ಯ ಮೀನುಗಾರಿಕೆ ಹಾಗೂ ತೋಟಗಾರಿಕೆ ರಾಜ್ಯಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಷ್ಟ ಪಡುತ್ತೇನೆ. ನಮ್ಮ ದೇಶ ವ್ಯವಸಾಯ ಪ್ರಧಾನವಾದಂಥ ದೇಶ. ಶೇಕಡಾ 80ರಷ್ಟು ಜನರು ವ್ಯವಸಾಯದ ಕಸುಬಿನಲ್ಲಿ ನಿರತರಾಗಿದ್ದಾರೆ, ಮತ್ತು ವ್ಯವಸಾಯದಿಂದಲೇ ತಮ್ಮ ಜೀವನವನ್ನು ಮಾಡುತ್ತಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು 31 ವರ್ಷಗಳು ಕಳೆದಮೇಲೂ ಕೂಡ ಉತ್ತಮವಾಗಿಲ್ಲ ಮತ್ತು ಅವರು ಬೇಸಾಯ ಮಾಡುವ ಸ್ಥಿತಿಗತಿಗಳು ಯಾವ ವಿಧದಲ್ಲಿಯೂ ಬದಲಾವಣೆಯಾಗಿಲ್ಲ.

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ, ತಾವು ಅವರ ಭಾಷಣಕ್ಕೆ ಅಡ್ಡಿ ಮಾಡಬೇಡಿ: ಅವರು ಮಾತನಾಡಲಿ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರನ್ನು ಅರೆಸ್ಟ್ ಮಾಡಿರುವುದರಿಂದ ಮತ್ತು ಆ ಬಗ್ಗೆ ನಮಗೆ ಯಾವ ವಿಧವಾದಂಥ ನ್ಯಾಯ ದೊರಕದಿರುವುದರಿಂದ, ನಾನು ಅದನ್ನು ಪ್ರೊಟೆಸ್ಟ್ ಮಾಡಿ ವಾಕೌಟ್ ಮಾಡುತ್ತೇನೆ.

† ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಮತ್ತು ಪಶುಸಂಗೋಪನಾ ಮಂತ್ರಿಗಳು ಹಾಗೂ ತೋಟಗಾರಿಕೆ ಮತ್ತು ಮೀನುಗಾರಿಕೆ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ಸುಮಾರು 80 ಭಾಗದ ಜನತೆಯು ವ್ಯವಸಾಯದಿಂದಲೇ ಜೀವನ ನಡೆಸುತ್ತಿದ್ದಾರೆ ಕೇವಲ 20 ಭಾಗ ಮಾತ್ರ ಬೇರೆ ಉದ್ಯಮಗಳಿಂದ ಜೀವನ ನಡೆಸುತ್ತಿದ್ದಾರೆ. ಕಳೆದ ವರ್ಷದಲ್ಲಿ ವ್ಯವಸಾಯಗಾರರ ಶ್ರಮದಿಂದ ಮತ್ತು ಸರ್ಕಾರದವರು ಒದಗಿಸಿದಂತಹ ಅನೇಕ ಅನುಕೂಲಗಳಿಂದ ಹೆಚ್ಚಿಗೆ ಆಹಾರ ಉತ್ಪನ್ನಗಳು ಆಗಿವೆ. ಇದರಿಂದ ಆದ ಪ್ರಯೋಜನ ಏನು ಎಂದರೆ 140 ರೂಪಾಯಿಗೆ ಕ್ವಿಂಟಾಲ್‌ಗೆ ರಾಗಿ ಇದ್ದದ್ದು ಈಗ 70 ರೂಪಾಯಿ ಆಗಿದೆ. 160 ರೂಪಾಯಿ ಕ್ವಿಂಟಾಲ್ ಇದ್ದದ್ದು ಈಗ 95 ರೂಪಾಯಿ ಆಗಿದೆ. ಹುರುಳಿ 160 ರೂಪಾಯಿ ಇದ್ದದ್ದು ಈಗ 60 ರೂಪಾಯಿ ಆಗಿದೆ. ಬೆಲ್ಲ ಒಂದು ಕೆಜಿಗೆ 2-80 ಪೈಸೆ ಇದ್ದದ್ದು ಈಗ 85 ಪೈಸೆಯಾಗಿದೆ. ಇದು ರೈತರು ಶ್ರಮಪಟ್ಟು ಸರ್ಕಾರದವರು ಒದಗಿಸಿದಂತಹ ಪ್ರಯೋಜನಗಳನ್ನು ಪಡೆದು ಹಗಲು ರಾತ್ರಿ ಶ್ರಮಿಸಿ ಹೆಚ್ಚಿಗೆ ಬೆಳೆದರು. ಹಾಗೆ ಬೆಳೆದದ್ದಕ್ಕೆ ಏನು ಅನುಕೂಲ ಸಿಕ್ಕುತ್ತಾ ಇದೆ ಎಂದು ಈಗ ಜನತೆ ಹಗಲಿರುಳು ಯೋಚನೆ ಮಾಡುತ್ತಿದ್ದಾರೆ. ಒಂದು ಸಮಯದಲ್ಲಿ ವ್ಯವಸಾಯಗಾರರು ಇಷ್ಟು ತೊಂದರೆಗೆ ಸಿಕ್ಕಿದ್ದರೂ 20 ಪರ್ಸೆಂಟ್ ಏನು ಜನರು ಇದ್ದಾರೆ ಅವರು ಬೆಲೆ ಜಾಸ್ತಿಯೆಂದು ಹೇಳಿದಾಗ ಇಡಿ ಸರ್ಕಾರವೇ ಅದರ ಕಡೆಗೆ ಗಮನ ಕೊಡುತ್ತಾರೆ. ಬೆಲೆ ಇಳಿದುಹೋದಾಗ ಹಲವಾರು ಕಡೆ ಕೇಳಿದ್ದೇನೆ ಆಹಾರ ಉತ್ಪನ್ನಗಳ ಬೆಲೆ ಇಳಿದಿರುವುದಕ್ಕೆ ಅದು ಒಂದು ಸಂತೋಷದ ವಿಚಾರ. ಆದರೆ ನನಗೆ ಸಂಕಟವಾಗುತ್ತದೆ. ಎಷ್ಟು ಇಳಿಯಬೇಕು, ಎಷ್ಟು ಏರಬೇಕು ಎನ್ನುವುದರ ಬಗ್ಗೆ ಸರ್ಕಾರ ಗಮನ ಕೊಡಬೇಕು. ರೈತರು ಜಾಸ್ತಿ ಇಳಿದಿದೆಯೆಂದು ಹೇಳುತ್ತಿರುವಾಗ ಸರ್ಕಾರದವರು ಅವರು ಬೆಳೆದಿರುವ ಬೆಳೆಗೆ ಎಷ್ಟು ಖರ್ಚು ಬೀಳುತ್ತದೆ ಅವರಿಗೆ ಲಾಭ ಎಷ್ಟು ಬರಬೇಕು ಎಂಬುದನ್ನೆಲ್ಲಾ ಸರ್ಕಾರ ಯೋಚನೆ ಮಾಡಬೇಕು. ಅವನ ಸಂಸಾರದ ತಾಪತ್ರಯ ಮುಂದೆ ಭೂಮಿಯ ಅಭಿವೃದ್ಧಿ ಯೋಜನೆಗಳನ್ನೆಲ್ಲಾ ಯೋಚನೆಮಾಡಿ ಸರ್ಕಾರ ತೀವ್ರವಾಗಿ ಆಲೋಚನೆ ಮಾಡಬೇಕೆನ್ನುವುದೇ ನನ್ನ ಉದ್ದೇಶ. 74 ರೂಪಾಯಿಗೆ ರಾಗಿಯನ್ನು ಸರ್ಕಾರದವರು ಕೊಳ್ಳುತ್ತಿದ್ದಾರೆ ಬಹಳ ಸಂತೋಷ. ಇದನ್ನು ಗೊತ್ತು ಮಾಡಬೇಕಾದರೆ ಯಾವ ಆಧಾರದ ಮೇಲೆ ಗೊತ್ತು ಮಾಡಿದಿರಿ ಎಂದು ಮಾನ್ಯ ಮಂತ್ರಿಗಳು ತಿಳಿಸಿದರೆ ಒಳ್ಳೆಯದು. ಕೇಂದ್ರ ಸರ್ಕಾರದವರನ್ನು ಮಧ್ಯೆ ತೆಗೆದುಕೊಳ್ಳತಕ್ಕಥಾದ್ದು ಒಳ್ಳೆಯದಲ್ಲ. ನಾನು ಹೇಳುವುದು ಏನು ಎಂದರೆ ಇದಕ್ಕೆ ಒಂದು ಸಮಿತಿ ಮಾಡಿ ಅದರಲ್ಲಿ ಒಳ್ಳೆಯ ಅನುಭವವುಳ್ಳ ನಮ್ಮ ಡೈರೆಕ್ಟರ್ ಆಫ್ ಅಗ್ರಿಕಲ್ಚರ್, ಅಗ್ರಿಕಲ್ಚರಲ್ ಯೂನಿವರ್ಸಿಟಿ ಸೈನ್ಸ್‌ನಿಂದ ಒಬ್ಬ ಪ್ರತಿನಿಧಿ, ಫಾರ್ಮರ್ಸ್ ಫೋರಂನಿಂದ ಒಬ್ಬರನ್ನು ಸೇರಿಸಿಕೊಂಡು ಆಹಾರ ಪದಾರ್ಥಗಳ ಬೆಲೆಯನ್ನು ಗೊತ್ತು ಮಾಡಿದರೆ ಒಳ್ಳೆಯದು. ಅದು ಇಲ್ಲದೆ ನಿಮಗೆ ಮನಸ್ಸಿಗೆ ತೋಚಿದಂತೆ ಅರ್ಥವಿಲ್ಲದೆ ಗೊತ್ತು ಮಾಡಿದ್ದೀರಿ ? ಈ ಬೆಲೆಯನ್ನು

ಕೊಟ್ಟಿರುವುದು ಒಂದೇ ಕೊಡದೇ ಇರುವುದು ಒಂದೇ. ಮಾನ್ಯ ಅಧ್ಯಕ್ಷರೇ, ತಾವು ವ್ಯವಸಾಯದಲ್ಲಿ ನಿಪುಣರು ಎಲ್ಲಾ ಆಹಾರವನ್ನು ಬೆಳದಿರಬಹುದು. ನೆನ್ನೆ ಟೊಮೊಟೋವನ್ನು ಮಾರ್ಕೆಟಿಗೆ ತೆಗೆದುಕೊಂಡು ಹೋದಾಗ ಒಂದು ದೊಡ್ಡ ಪುಟ್ಟಿಗೆ 3 ರೂಪಾಯಿ ಕೊಟ್ಟರೆ ಏನು ? ಇದರಿಂದ ಹಲವಾರು ರೈತರಿಗೆ ಏನು ಕಷ್ಟ ಬಂದಿದೆ ಅದನ್ನು ಕೇಳುವವರೇ ಇಲ್ಲ. ಇದು ನನ್ನ ಮನಸ್ಸಿಗೆ ಬಂದ ದೊಡ್ಡ ಬಾಧೆ. ಈ ರೀತಿ ಬೆಲೆಗಳು ಆದರೆ ಬೆಳೆಯುತಕ್ಕಂಥ ರೈತನಿಗೆ ಇದನ್ನು ತಡೆಯುವ ಶಕ್ತಿ ಇರುವುದಿಲ್ಲ. ಅದೇ ಹೆಚ್ಚಿಗೆ ಬೆಳೆ ಬೆಳೆದು ಆಹಾರಪದಾರ್ಥದ ಉತ್ಪಾದನೆ ಮಾಡಿ ಅದರಿಂದ ಅವನ ಸಂಸಾರವನ್ನು ಸರಿದೂಗಿಸಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ದಯಮಾಡಿ ಸರ್ಕಾರದವರಿಗೆ ಒಂದು ಸೂಚನೆಯನ್ನು ಕೊಡಬಯಸುತ್ತೇನೆ. ಒಂದು ಬೆಲೆಯನ್ನು ಗೊತ್ತು ಮಾಡುವಾಗ ವ್ಯವಸಾಯಗಾರ ಏನು ಮುಂದೆ ಅವನು ಫಸಲು ತೆಗೆಯುತ್ತಾರೆ ಅದಕ್ಕೆ ಯಾವ ಬೆಲೆಯನ್ನು ಕೊಡುತ್ತೇವೆಂದು ತಿಳಿಸದೆ ಇದ್ದರೆ ನಾವು ನಮ್ಮ ರಾಜ್ಯದಲ್ಲಿ ಬಹಳ ಕಷ್ಟವನ್ನು ಎದುರಿಸಬೇಕಾಗುತ್ತದೆ. ರೈತರಿಗೆ ಮುಂದೆ ಏನು ಮಾಡಬೇಕೆನ್ನುವ ಮಾರ್ಗವೇ ಇಲ್ಲದಂತಾಗಿದೆ. ಜನತೆಯಲ್ಲಿ ಒಂದು ಏನು ಭಯ ಇದೆ ಅದನ್ನು ನಿವಾರಿಸಬೇಕಾದರೆ ಸರ್ಕಾರ ಮೇ ಮುಂದಿನ ತಿಂಗಳಿನೊಳಗೆ ಯಾವುದಾದರೂ ಒಂದು ತೀರ್ಮಾನಕ್ಕೆ ಬರಬೇಕೆಂದು ಬಹಳ ಕಳಕಳಿಯಿಂದ ಸರ್ಕಾರಕ್ಕೆ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಈಗ ಗೊಬ್ಬರ ಏನು ಸರ್ಕಾರ ಒದಗಿಸುತ್ತಿದೆ ಅದಕ್ಕೆ ಸರ್ಕಾರಕ್ಕೆ ವಂದಿಸಬೇಕಾಗಿದೆ. ಇಲಾಖೆಯವರು ಗೊಬ್ಬರದ ಅಭಾವವಿಲ್ಲದಂತೆ ಮಾಡಿದ್ದಾರ ಎಲ್ಲಿ ಬೇಕಾದರೂ ಗೊಬ್ಬರ ಸಿಕ್ಕುತ್ತಿದೆ. ಆದರೆ ಹಿಂದೆ ಏನು ಬೆಲೆ ಇತ್ತೋ ಅದೇ ಬೆಲೆ ಇದೆ. ಅದೇನು ಕಡಿಮೆಯಾಗಿಲ್ಲ. ಕಡಿಮೆಯಾಗುವ ಸಂಭವವಿದೆ ಅದು ಆದರೆ ಬಹಳ ಸಂತೋಷ. ಗೊಬ್ಬರದಲ್ಲಿ ಪ್ರತಿಯೊಂದು ಕೆಜಿಗೂ ಸರಿಯಾಗಿ ಎನ್ ಪಿ ಕೆ ಪರ್ಸಂಟೇಜ್ ಇದೆಯೋ ಎಂದು ಸರ್ಕಾರದವರು ಗಮನಿಸಬೇಕು. ಅಧಿಕಾರಿಗಳು ಸಪ್ಲೈಯರ್ಸ್‌ಗೆ ಸಂಬಂಧಪಟ್ಟ ಹಾಗೆ ಒಂದು ಚೀಲದಲ್ಲಿ 50 ಕೆಜಿ ಇರಬೇಕಾದರೆ ಅದರಲ್ಲಿ ಸುಮಾರು ಅರ್ಧ ಅಥವಾ ಮುಕ್ಕಾಲು ಕೆಜಿ ಕಡಿಮೆ ಬರುತ್ತವೆಂದು ಹೇಳುತ್ತಾರೆ ಅದನ್ನು ನೋಡಬೇಕು. ತೂಕದಲ್ಲಿ ಮತ್ತು ಪರ್ಸಂಟೇಜ್‌ನಲ್ಲಿ ಈ ರೀತಿ ನಷ್ಟವಾದರೆ ಇದು ರೈತರ ಶೋಷಣೆಯಾಗುತ್ತದೆ. ಆದ್ದರಿಂದ ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಇಂತಹ ದುರ್‌ವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು ಅಂಥವರ ಮೇಲೆ ತೀಕ್ಷ್ಣವಾಗಿ ಕ್ರಮತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

2-30 P. M

ಈಗ ನಮಗೆ ಒದಗಿಸಿರತಕ್ಕ ಅಂಕಿಅಂಶಗಳಲ್ಲಿ ಸಾಯಿಲ್ ಕನ್‌ಸರ್‌ವೇಷನ್ನಿಗೆ ಹಣವನ್ನು ಸರಿಯಾಗಿ ಒದಗಿಸಿಲ್ಲವೆಂದು ನನಗೆ ಬಹಳ ದುಃಖವಾಗಿದೆ. ನಮ್ಮ ಪ್ರದೇಶಗಳಲ್ಲಿ ಇತ್ತೀಚೆಗೆ ಕೆರೆಗಳು ಮುಚ್ಚಿಹೋಗಿ ಮಳೆ ಒಂದೊಂದು ವರ್ಷ ಬರುತ್ತದೆ. ಒಂದೊಂದು ವರ್ಷ ಮಳೆ ಬರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಳೆ ಬಂದರೂ ಬೆಳೆಯಾಗುವುದಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಮಳೆ ಬಾರದೇ ಇದ್ದರೂ ಬೆಳೆಯಾಗುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಹಿಂದೆ ಕೆಲವು ಮಂದಿ ಮಹಾಪುರುಷರು ಅದರಲ್ಲಿಯೂ ಯೋಗೀಶ್ವರರು ಬರೆದಂಥ ಪುಸ್ತಕಗಳನ್ನು ನಾನು ಓದಿ ನೋಡಿದ್ದೇನೆ. ಅವರು ಒಂದು ಕಡೆ ಒಂದು ಮಾತನ್ನು ಹೇಳಿದ್ದಾರೆ. ಮಳೆ ಬಂದರೂ ಬರ, ಮಳೆ ಬಂದು ಬೆಳೆಯಾಗಲಿಲ್ಲ ಎಂದರೂ ಬರ, ಬೆಳೆಯಾದರೂ ಮತ್ತು ಮಳೆ ಬಾರದೇ ಇದ್ದರೂ ಬರ ಎಂಬುದಾಗಿ ಬರೆದಿರುವುದನ್ನು ನಾನು ನೋಡಿದ್ದೇನೆ. ಹೀಗೆ ಬೆಳೆ ಬೆಳೆದರೂ ಬರ, ಬೆಳೆ ಬೆಳೆಯದಿದ್ದರೂ ಬರ ಇದ್ದೇ ಇದೆ. ಒಂದು ಕ್ವಿಂಟಾಲ್ ರಾಗಿಗೆ ಈಗ 60-70 ರೂಪಾಯಿಗಳು ಆದರೆ ನಿಜವಾಗಿಯೂ ಅವನ್ನು ಬೆಳೆದವರಿಗೆ ಬರ ಅಲ್ಲವೇ ? ಮತ್ತು ಅದನ್ನು ಬೆಳೆಯದಿದ್ದವರಿಗಂತೂ ಎಂದೂ ಬರ ಇದ್ದೇ ಇದೆ. ಪರಮಾತ್ಮನ ಕೃಪೆ ಭೂಮಿಯ ಮೇಲೆ ಇರಬೇಕು. ಮಳೆ ಚೆನ್ನಾಗಿ ಬರಬೇಕು. ಮಾನ್ಯ ಶ್ರೀ ಚಿಕ್ಕೇಗೌಡರು ನಮಗೆ ಮಂತ್ರಿಗಳು ಆಗಿರುವುದು ನಮ್ಮ ಪುಣ್ಯ. ಅವರು ಪರದೇಶಗಳಲ್ಲಿ ಪ್ರವಾಸಮಾಡಿ ಅಲ್ಲಿನ ಹವಾಗುಣ, ಭೂಮಿ ಗುಣ, ಬೆಳೆಗಳನ್ನು ಬೆಳೆಯುವವರ ಕಷ್ಟಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಬಂದಿದ್ದಾರೆ. ಅವರು ಮಂತ್ರಿಗಳಾಗಿ ಬಂದಮೇಲೆ ಬಹಳವಾಗಿ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ಡೈರಿಡೆವಲಪ್‌ಮೆಂಟ್ ಕಾರ್ಪೊರೇಷನ್, ಫಾಡರ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ವುಲ್ ಡೆವಲಪ್‌ಮೆಂಟ್

ಕಾರ್ಪೊರೇಷನ್ ಮತ್ತು ಷೀಪ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಂತಾದ ಅನೇಕ ಕಾರ್ಪೊರೇಷನ್‌ಗಳನ್ನು ಅವರ ಕಾಲದಲ್ಲಿ ರಚನೆ ಮಾಡಿರುತ್ತಾರೆ. ಅವರ ಒಂದು ಹಾಲೋಟಿ ಮತ್ತು ಮೇಲ್ವಿಚಾರಣೆಯಲ್ಲಿ ಇಂತಹ ಅನೇಕ ಅನುಕೂಲಗಳನ್ನು ಮಾಡಿದ್ದಾರೆ. ಒಣ ಬೇಸಾಯ ಮಾಡುವ ಕಡೆ ಮಳೆಯ ನೀರನ್ನು ಅಡ್ಡಕಟ್ಟೆ ಮಾಡಿ ನಿಲ್ಲಿಸುವುದೂ ಸಹ ಆಗಿದೆ. ಅವರ ಕಾಲದಲ್ಲಿ ಹಣವಿಲ್ಲ, ಅದಕೋಸ್ಕರ ಕೆಲಸ ಮಾಡಿಲ್ಲವೆಂದು ಹೇಳಿದರೆ ಹೇಗೆ ? ಅವರ ಜ್ಞಾನ ಏನಿದೆಯೋ ಅದನ್ನು ಎಲ್ಲರೂ ಮೆಚ್ಚುವವರ ಗಿದ್ದಾರೆ. ಅವರು ವ್ಯವಸಾಯದಲ್ಲಿ ಪದವೀಧರರಾಗಿದ್ದಾರೆ. ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿ ಹತ್ತಾರು ವರ್ಷಗಳ ಕಾಲ ಕೆಲಸಮಾಡಿ ಬೋರ್ಡ್ ಆಫ್ ರೀಜೆಂಟ್ಸ್‌ನಲ್ಲಿ ಹೆಚ್ಚಿನ ಅನುಭವವನ್ನು ಪಡೆದು ಅನೇಕ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಅಂತಹವರು ಮಂತ್ರಿಗಳಾಗಿರುವುದು ನಮ್ಮ ಪುಣ್ಯ. ಅಂತಹ ಮಹನೀಯರು ಈಗ ಸಾಯಿಲ್ ಕನ್‌ಸರ್ವೇಷನ್ನಿಗೆ ಹಣವಿಲ್ಲವೆಂದು ಹೇಳಿದರೆ ನನಗೆ ಬಹಳ ನಾಚಿಕೆಯಾಗುತ್ತದೆ. ಎಲ್ಲಾ ಇತರ ಕಾರ್ಯಕ್ರಮಗಳನ್ನು ತೆಗೆದುಹಾಕಿದರೂ ಸಾಯಿಲ್ ಕನ್‌ಸರ್ವೇಷನ್ನಿಗೆ ಹೆಚ್ಚು ಹಣವನ್ನು ಒದಗಿಸಿ ಸಾಯಿಲ್ ಟೆಸ್ಟ್ ಮಾಡಿಸಿ ಯಾವ್ಯಾವ ರೈತರಿಗೆ ಯಾವ್ಯಾವ ಬೆಳೆಗಳಿಗೆ ಅನುಕೂಲ ಒದಗಿಸುವ ವ್ಯವಸ್ಥೆಮಾಡುವುದು ಬಹಳ ಮುಖ್ಯವಾಗಿದೆ. ಅದನ್ನು ಸರ್ಕಾರದವರು ಗಮನಿಸಿ ನಮಗೆ ತುಂಬಾ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಅಗ್ರಿಕಲ್‌ಚರಲ್ ಯೂನಿವರ್ಸಿಟಿಯಲ್ಲಿಯೂ ಕೆಲಸ ಮಾಡಲು ನನಗೆ ಸರ್ಕಾರ ಅವಕಾಶವನ್ನು ಕೊಟ್ಟಿದೆ. ಇಡೀ ರಾಷ್ಟ್ರದಲ್ಲಿ ಬಹಳ ಉತ್ತಮವಾಗಿ ಕೆಲಸಮಾಡಿರತಕ್ಕ ಯೂನಿವರ್ಸಿಟಿಯಾಗಿದೆ. ಆದರೆ ಮಾನ್ಯ ಶ್ರೀ ಚಿಕ್ಕೇಗೌಡರು ಈಗ ಅಧಿಕಾರ ವಹಿಸಿಕೊಂಡಮೇಲೆ ಬಜೆಟ್ಟಿನಲ್ಲಿ ಇದಕ್ಕೆ ಮೊದಲು 144 ಲಕ್ಷ ಇದ್ದುದನ್ನು ಈಗ 231 ಲಕ್ಷದವರೆಗೂ ಏರಿಸಿದ್ದಾರೆ. ಅದು ಸಾಲದು. ಈಗ ತಜ್ಞರ ಕೆಲಸ ತಮಗೆ ತಿಳಿದೇ ಇದೆ. ಏಕೆಂದರೆ ನೀವು ಪ್ರಪಂಚವನ್ನೇ ನೋಡಿರುವವರು. ನೀವು ನೋಡದೇ ಇರುವ ಕಂಟ್ರಿ ಇಲ್ಲ. ಇಲ್ಲಿ ಇವತ್ತು ಸ್ಪೀಕರ್ ಆಗಿದ್ದೀರಿ ವ್ಯವಸಾಯದ ವಿಷಯದಲ್ಲಿ ನೀವು ಬಹಳ ಚೆನ್ನಾಗಿ ತಿಳಿದಿದ್ದೀರಿ ಅದನ್ನು ನಾನು ಇಲ್ಲಿ ಹೇಳಿದ್ದರೆ ತಪ್ಪಾಗುತ್ತದೆ. ಆದರೆ ಈ ಯೂನಿವರ್ಸಿಟಿಯಲ್ಲಿ ಅನೇಕ ತಜ್ಞರು ಇದ್ದಾರೆ. ಅಂತಹವರು ಅಲ್ಲಿ ಕೆಲಸಮಾಡುತ್ತಿರುವಾಗ ಅವರಿಗೆ ಸಾಕಷ್ಟು ಅನುಕೂಲಗಳನ್ನು ಕಲ್ಪಿಸಿಲ್ಲ. ಅಲ್ಲಿ ಸಾಕಷ್ಟು ಗ್ರಾಂಟ್ ಕೊಡುತ್ತಾ ಇಲ್ಲ. ಡೆವಲಪ್ ಗ್ರಾಂಟ್ ಹೋದ ತಿಂಗಳಲ್ಲಿ ಒಂದು ನೂರು ಲಕ್ಷ ಕೊಡುತ್ತೇವೆಂದು ಭರವಸೆ ಕೊಟ್ಟಿತ್ತು. ಜನವರಿಯಲ್ಲಿ 60 ಲಕ್ಷ ಕೊಡುತ್ತೇವೆಂದು ಪತ್ರ ಬರೆದಿದ್ದಾರೆ. ಆ ರೀತಿಯಾಗಿ ಭರವಸೆ ಕೊಟ್ಟು ಪುನಃ ಸ್ವಲ್ಪ ಹಣವನ್ನು ಹಿಂದಕ್ಕೆ ಕೇಳುವ ಧರ್ಮ ಮಾನ್ಯ ಶ್ರೀ ಚಿಕ್ಕೇಗೌಡರಿಗೆ ಹುಟ್ಟಿತಲ್ಲಾ ಎಂದು ನಾನು ಪಶ್ಚಾತ್ತಾಪ ಪಡಬೇಕಾಗಿದೆ.

ಶ್ರೀ ಎನ್. ಚಿಕ್ಕೇಗೌಡ.—ಬ್ಲಾಕ್‌ಗ್ರಾಂಟ್ ಹೆಚ್ಚು ಮಾಡಿದ್ದಕ್ಕೆ ನೀವು ಏನೂ ಹೇಳಲೇ ಇಲ್ಲ.

ಶ್ರೀ ಜಿ. ರಾಮೇಗೌಡ.—265 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದೇವೆ. ಅದನ್ನು ನೀವು ಕೊಡುತ್ತೀರೆಂದು ನಂಬಿಕೆ ಇದೆ ಅವರ ಬಗ್ಗೆ ನಮಗೆ ಕಾನ್‌ಫಿಡೆನ್ಸ್ ಸಹ ಇದೆ. ಆದರೆ ಡೆವಲಪ್‌ಮೆಂಟ್ ಗ್ರಾಂಟ್ ಇಂತಹ ಡೆವಲಪ್‌ಮೆಂಟ್ ರಾಜ್ಯಕ್ಕೆ ಎಲ್ಲಾ ಕಂಟ್ರಿಗಳು ಈಗ ಡೆವಲಪ್ ಆಗುತ್ತಿರುವಾಗ ಅದರಲ್ಲಿಯೂ ಡೆವಲಪ್‌ಮೆಂಟ್ ಯೂನಿಟ್‌ಗಳು ಬೆಳೆಯುವುದಕ್ಕೆ ಕೊಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಅದಕ್ಕೆ ಸಹಾಯ ಮಾಡದಿದ್ದರೆ ಬೇರೆ ಇನ್ನು ಯಾವುದಕ್ಕೆ ಸಹಾಯ ಮಾಡುತ್ತೀರಿ ? ಈಗಾಗಲೇ ನಮ್ಮ ಮೇಲೆ ಎಷ್ಟೋ ತೆರಿಗೆಯ ಹೊರೆಯನ್ನು ಹಾಕಿದ್ದೀರಿ. ಈ ವರ್ಷ ಇನ್‌ಕಂಟ್ಯಾಕ್ಸ್ ಜಾಸ್ತಿಮಾಡುತ್ತಿದ್ದಾರೆ ಮಾನ್ಯ ಶ್ರೀ ಮೊರಾರ್ಜಿಯವರು ವ್ಯವಸಾಯಗಾರರು ಇಂಡಸ್ಟ್ರಿಯಲಿಸ್ಟ್ ಇಂಡಸ್ಟ್ರೀಸ್‌ಗೆ ಎಷ್ಟು ಸುಂಕ ಹಾಕುತ್ತಿರೋ ಅದೇ ಸುಂಕವನ್ನು ವ್ಯವಸಾಯಕ್ಕೂ ಹಾಕಿದರೆ ಹೇಗೆ ? ಲಾಭದೃಷ್ಟಿ ವ್ಯವಸಾಯದಮೇಲೆ ಬೇಡ ಅವರಿಗೆ 500ಎಕರೆ, ಸಾವಿರಎಕರೆ ಜಮೀನು ಇರುವುದರಿಂದ ಲಾಭ ಯಾವುದರಿಂದ ಎಷ್ಟು ಬಂತು ಎಂಬುದು ನನಗೆ ಗೊತ್ತಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಲಾಭದಾಯಕವಾಗಿ ಕೆಲಸ ಮಾಡುವ ವಿಚಾರವನ್ನು ಸರಿಯಾಗಿ ತಜ್ಞರು ಪರಿಶೀಲನೆಮಾಡಿ ಅದಕ್ಕೆ ತಕ್ಕ ಪರಿಹಾರ ಕೊಡುವುದು ಒಳ್ಳೆಯದು. ಯೂನಿವರ್ಸಿಟಿಗೆ ಈ ತಿಂಗಳೇ ಗ್ರಾಂಟ್ ಕೊಡಬೇಕು ಬೇಕಾದರೆ ಇನ್ನಷ್ಟು ಟ್ಯಾಕ್ಸ್ ಇಂಡಸ್ಟ್ರೀಸ್ ಮೇಲೆ ಹಾಕಿ. ತೆಗೆದುಕೊಳ್ಳಿ. ಜನಗಳು ಕೆಲವು ಸಂದರ್ಭಗಳಲ್ಲಿ ಕತ್ತೆ ಇದ್ದಹಾಗೆ ಆಗಿದೆ. ಏಕೆಂದರೆ ತೆರಿಗೆ ಹೇರುತ್ತಾ ಇದ್ದರೆ ಅವರು ಬಿದ್ದು ಹೋಗುವವರೆಗೂ ಅದನ್ನು ಬೇಡವೆಂದು ಹೇಳುವು

ದಿಲ್ಲ. ಕಾಗದ ತಿಂದು ತೆರಿಗೆ ಹೇರುವ ಜನಗಳು ಅದ್ದರಿಂದ ಎಷ್ಟಾದರೂ ನಮ್ಮ ಮೇಲೆ ತೆರಿಗೆ ಹೊರಿಸಿ. ಆದರೆ ಯೂನಿವರ್ಸಿಟಿಗೆ ಹಣ ಕಡಿಮೆ ಮಾಡಬೇಡಿ. ಇಡೀ ರಾಜ್ಯದಲ್ಲಿ ಒಣಬೇಸಾಯ ಕ್ಕೆ ಬೇಕಾದಂಥ ಜಮೀನಿನಲ್ಲಿ ಹಿಂದೆ ಮೂರು ಪಲ್ಲ ಬೆಳೆಯುತ್ತಿದ್ದವರು ಈಗ 8-12 ಕ್ವಿಂಟಾಲ್ ಬೆಳೆಯುತ್ತಿದ್ದಾರೆ ಅಂತಹ ಸಂಶೋಧನೆಗಳನ್ನು ತಜ್ಞರು ಕಂಡ ಹಿಡಿದಿದ್ದಾರೆ. ರಾಗಿ ಕ್ರಾಪ್‌ನ್ನು ಎಷ್ಟರಮಟ್ಟಿಗೆ ಫಸಲು ಆಗಿದೆಯೆಂಬುದನ್ನು ನೀವು ನೋಡಬಹುದು. ಜನರ ಪ್ರತಿನಿಧಿಗಳು ನಾವು ಬಂದು ಕೇಳಿದರೆ, ಬಡ್ಜೆಟ್ಟಿನಲ್ಲಿ ಖೋತಾ ಆಗಿದೆ ಖೋತಾ ಆಗಿದೆ, ಎಂಬುದಾಗಿ ಹೇಳಬೇಡಿ. ಅಲ್ಲಿ ಖೋತಾ ಮಾಡಿದ್ದನ್ನು ಸರಿದೂಗಿಸಿಕೊಳ್ಳುವುದಕ್ಕೆ ಅದನ್ನು ರೈತರ ಮೇಲೆ ಹೇರಬೇಡಿ. ನಿನ್ನೆ ಮಾನ್ಯ ಶ್ರೀ ಗುಂಡೂರಾವ್ ಅವರು ಒಂದು ಮಾತನ್ನು ಹೇಳಿದರು ರೈತರಲ್ಲಿ ಶೇಕಡ 85ರಷ್ಟು ಜನಗಳಿಗೆ ಏನಾದರೂ ಮಾತನಾಡಿದರೆ ಸರಿಯಾಗಿ ಅರ್ಥವಾಗುವುದಿಲ್ಲವೆಂದು. ಅಂತಹವರು ಫಸಲನ್ನು ಬೆಳೆಯುವವರು. ಇಂತಹ ಅನೇಕ ವಿಚಾರಗಳನ್ನು ಅವರಿಗೆ ಸಿನಿಮಾಗಳಲ್ಲಿ ತೋರಿಸಿ ಹೇಳಬೇಕು. ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಮಾಡುತ್ತೇನೆ. ನೀವು ಇದುವರೆಗೆ ಇಲ್ಲಿ ಯಾವುದಾದರೂ ವ್ಯವಸಾಯದ ಬಗ್ಗೆ ಸಿನಿಮಾವನ್ನು ತೆಗೆದಿದ್ದೀರಾ ? ಏನೋ ಪಿಕ್ಚರ್‌ನಲ್ಲಿ ಒಂದೆರಡು ತೋರಿಸುವುದು; ಅದನ್ನು ನೋಡಿಕೊಂಡು ಅವರು ಅಲ್ಲಿಂದ ಎದ್ದು ಹೋಗುವುದು ಆಗಿದೆಯಷ್ಟೇ: ವ್ಯವಸಾಯದ ವಿಧಾನಗಳು ಏನಿವೆ, ತಜ್ಞರು ಏನೇನು ವ್ಯವಸಾಯದಲ್ಲಿ ಸಂಶೋಧನೆ ಮಾಡಿದ್ದಾರೆ ಏನೇನು ಹೊಸದಾಗಿ ಕಂಡುಹಿಡಿದಿದ್ದಾರೆಂಬುದನ್ನು ಅವರಿಗೆ ಸಿನಿಮಾ ಮೂಲಕ ತೋರಿಸಬಹುದು. ಯಾವ ರೀತಿಯಲ್ಲಿ ಇದರಿಂದ ಲಾಭ ಬರುತ್ತಾ ಇದೆ ಎಂಬುದು ಅವರಿಗೆ ಆಗ ಗೊತ್ತಾಗುತ್ತದೆ. ಅದನ್ನು ಈ ಸರ್ಕಾರ ಮಾಡಿಲ್ಲ ಬರೀ ಸಿನಿಮಾಗಳು ಎಕ್ಸ್‌ಟೆಂಡ್ ಆಗುತ್ತಾ ಇವೆ. ಅಲ್ಲಿ ಬರೀ ಬಾಯಿಮಾತು. ಪ್ರತ್ಯಕ್ಷವಾಗಿ ವ್ಯವಸಾಯದಲ್ಲಿ ನೋಡುವಂತಹ ಹಾಗೂ ಅಭ್ಯಾಸಮಾಡುವಂತಹ ವ್ಯವಸ್ಥೆಯಂಗಳಿಲ್ಲ ಸಿನಿಮಾಗಳು ಇಲ್ಲ. ಬರವಣಿಗೆ ಹಾಗೂ ಓದು ಬಾರದ ರೈತರು ಇನ್ನು ಯಾವ ರೀತಿಯಲ್ಲಿ ವ್ಯವಸಾಯದಲ್ಲಿ ಹೆಚ್ಚಿಗೆ ಪರಿಣಿತರಾಗುವುದಕ್ಕೆ ಸಾಧ್ಯ ? ಮಾನ್ಯ ಮಂತ್ರಿಗಳನ್ನು ಉತ್ತರ ಪ್ರದೇಶಕ್ಕೆ ಕಳುಹಿಸಿದರೆ, ಅಲ್ಲಿ ಪಂಥ್ ನಗರದಲ್ಲಿರುವ ಅಗ್ರಿಕಲ್‌ಚರಲ್ ಯೂನಿವರ್ಸಿಟಿಯನ್ನು ನೋಡಿದರೆ ಸುಮಾರು 8 ತಿಂಗಳಾದರೂ ಇವರು ಅಲ್ಲಿಂದ ಬಿಟ್ಟು ಬರುವುದಿಲ್ಲ. ಅಂತಹ ಉತ್ತಮ ವ್ಯವಸ್ಥೆ ಅಲ್ಲಿದೆ ಸಾಮಾನ್ಯವಾಗಿ ಮನುಷ್ಯನಿಗೆ ಮನಸ್ಸು ವಿಕಾಸವಾಗಬೇಕಾದರೆ ಇವೆಲ್ಲವನ್ನೂ ಒಂದು ವ್ಯವಸ್ಥಿತ ರೀತಿಯಲ್ಲಿ ಏರ್ಪಾಡು ಮಾಡಬೇಕು. ಆದ್ದರಿಂದ ಈ ಬಾಬಿಗೆ ಸರ್ಕಾರದವರು ಹೆಚ್ಚಿನ ಹಣವನ್ನು ಕೊಡಬೇಕು. ಹಣಕಾಸಿನ ಮಂತ್ರಿಗಳು ಒಂದು ವೇಳೆ ಆ ರೀತಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ತಾವು ಅವರೊಡನೆ ಹೊಡೆದಾಡಿ ಅದನ್ನು ತೆಗೆದುಕೊಳ್ಳುವ ಶಕ್ತಿಯನ್ನು ಪಡೆದಿರುವುದರಿಂದ ಈ ವರ್ಷ ಈ ಯೂನಿವರ್ಸಿಟಿಗೆ 265 ಲಕ್ಷ ರೂಪಾಯಿಗಳಷ್ಟು ಜನರಲ್ ಗ್ರಾಂಟ್ ಕೊಟ್ಟು ಇನ್ನು ಡೆವಲಪ್ ಗ್ರಾಂಟನ್ನು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ, ಉತ್ತಮ ಅಧಿಕಾರಿಗಳು ಇರುವಂತಹ ಈ ಯೂನಿವರ್ಸಿಟಿಯಲ್ಲಿ ಇನ್ನೂ ಹೆಚ್ಚಿಗೆ ಕೆಲಸಗಳನ್ನು ಮಾಡಿ ನಮ್ಮ ವ್ಯವಸಾಯದಲ್ಲಿ ಈಗ ಇರತಕ್ಕ ತೊಂದರೆಗಳನ್ನು ನಿವಾರಣೆ ಮಾಡುವುದಕೆ ಸಹಾಯವಾಗುತ್ತದೆ ಅದಕ್ಕಾಗಿ ಸರ್ಕಾರದವರು ದುಡ್ಡು ಕೊಡುವುದರಲ್ಲಿ ಹಿಂದೆಗೆಯಬಾರದೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಸಾಯಿಲ್ ಟೆಸ್ಟಿಂಗ್ ವಿಚಾರ. ಇದರ ಬಗ್ಗೆ ನಾನು ಉತ್ತರ ಪ್ರದೇಶದಲ್ಲಿ ನೋಡಿದಾಗ ಪ್ರತಿದಿನವೂ ಘಂಟೆಗಳ ಕಾಲ ಅಲ್ಲಿರುವ ತಜ್ಞರು ರೈತರ ಜಮೀನುಗಳಲ್ಲಿರತಕ್ಕ ಮಣ್ಣನ್ನು ತೆಗೆದುಕೊಂಡು ಪರೀಕ್ಷೆ ಮಾಡುತ್ತಾ ಇದ್ದುದರಿಂದ ಅಲ್ಲಿ ಕ್ರಮವಾಗಿ ಈಗ ಸಾಕಷ್ಟು ಗೊಬ್ಬರ ಹಾಕಿ ಚೆನ್ನಾಗಿ ಬೆಳೆಯನ್ನು ಬೆಳೆಯುತ್ತಿದ್ದಾರೆ ಮಾನ್ಯ ಮಂತ್ರಿಗಳು ಈ ಒಂದು ಅಧಿಕಾರವನ್ನು ವಹಿಸಿಕೊಂಡಮೇಲೆ ಇತ್ತೀಚೆಗೆ ಜಿಲ್ಲೆಗೊಂದರಂತೆ ಆ ರೀತಿಯಾಗಿ ಏರ್ಪಾಡುಮಾಡಿದ್ದಾರೆ. ಆದರೆ ಜನಗಳಿಗೆ ಪ್ರೋತ್ಸಾಹವಿಲ್ಲ. ಅಧಿಕಾರಿಗಳ ಕಥೆಯೇ ಬೇರೆ. ಅವರು ಅಷ್ಟಾಗಿ ಇತ್ತಕಡೆ ಗಮನ ಕೊಡುತ್ತಾ ಇಲ್ಲ. ಆದರೆ ನಮ್ಮ ಮಂತ್ರಿಗಳು ಅಧಿಕಾರಿಗಳು ಹೇಳಿದಹಾಗೆ ಕೇಳದೆ ತನ್ನದೇ ಆದ ಶಕ್ತಿಸಾಮರ್ಥ್ಯಗಳಿಂದ ತೀರ್ಮಾನ ತೆಗೆದುಕೊಳ್ಳುವ ಶಕ್ತಿ ಇರುವ ಮಾನ್ಯ ಮಂತ್ರಿಗಳಾಗಬೇಕು. ಆಗ ಈ ಕೆಲಸಕಾರ್ಯಗಳು ಸುಗಮವಾಗಿ ನಡೆಯುತ್ತವೆ ಒಟ್ಟಿನಲ್ಲಿ ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದೇನೆಂದರೆ, ಈಗ ಸಾಯಿಲ್ ಕನ್‌ಸರ್‌ವೇಷನ್ನಿನಲ್ಲಿ ಕೆಲಸಮಾಡುತ್ತಾ ಇರುವವರನ್ನು ಹೆಚ್ಚಿಗೆ ಹತೋಟಿಯಲ್ಲಿ ತರಬೇಕು. ಯಾವ ರೈತ ಬಂದರೂ ಅವರೊಡನೆ ಪ್ರೀತಿ

ಪೂರ್ವಕವಾಗಿ ಮಾತನಾಡಿ ಎಷ್ಟು ಜಾಗ್ರತೆಯಾಗಿ ಅವರು ತರತಕ್ಕ ಮಣ್ಣನ್ನು ಟೆಸ್ಟ್ ಮಾಡಿ ಕೊಡಬೇಕೋ ಅಷ್ಟು ಜಾಗ್ರತೆಯಾಗಿ ಅದನ್ನು ಜಾಗರೂಕತೆಯಿಂದ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಸಾಯಿಲ್ ಕನ್‌ಸರ್‌ವೇಷನ್ ಟೆಸ್ಟನ್ನು ಕೆಲವು ಭೂಮಿಗಳ ಮಣ್ಣನ್ನು ತರಿಸಿ ಮಾಡುತ್ತಾರೆ. ಗೋಮಾಳದ ಭೂಮಿಗೂ ಸಾಯಿಲ್ ಕನ್‌ಸರ್‌ವೇಷನ್ ಮಾಡುತ್ತಾರೆ. ಅದು ಏಕೆ ಆ ರೀತಿ ಮಾಡುತ್ತಾರೋ ನನಗೆ ಗೊತ್ತಿಲ್ಲ. ಇದರ ಬಗ್ಗೆ ಈ ಸರ್ಕಾರದಲ್ಲಿ ಒಂದು ರಿವ್ಯೂ ಕಮಿಟಿಯನ್ನು ರಚನೆ ಮಾಡಿಲ್ಲವೆಂದು ಕಾಣುತ್ತದೆ. ಅಲ್ಲಿಗೆ ಇದಕ್ಕಾಗಿ ಬೇಕಾದಂಥ ಅಧಿಕಾರ ವರ್ಗವನ್ನು ಇಡಬೇಕು. ಅದನ್ನೂ ಸಹ ಇಟ್ಟಿಲ್ಲ.

ತೆಂಗಿನ ತೋಟಗಳನ್ನು ಮಾಡುವುದಕ್ಕೆ ಕಾಯಂ ಮಾಡಲೇಬೇಕಾಗಿದೆ. ಅದು ಮಾಡದಿದ್ದರೆ ತುಂಬಾ ತೊಂದರೆಯಾಗುತ್ತದೆ. ತೆಂಗಿನ ತೋಟವನ್ನು ಮಳೆ ನೀರಿನಿಂದ ಬೆಳೆಯುತ್ತಾರೆ. 5 ವರ್ಷಗಳ ನಂತರ ಯಾವ ಮೇಲೆ ಅದಕ್ಕೆ ಯಾರು ಹೆಚ್ಚಾಗಿ ನೀರು ಹಾಕುವುದಕ್ಕೆ ಹೋಗುವುದಿಲ್ಲ. ಅಲ್ಲಿ ಸಾಯಿಲ್ ಕನ್ಸರ್ವೇಷನ್ ಮಾಡುವುದರಿಂದ ಒಂದಕ್ಕೆ ಎರಡರಷ್ಟು ಫಲ ಕೊಡುವಂಥ ಶಕ್ತಿ ಬರುತ್ತದೆ. ಆದುದರಿಂದ ಸಾಯಿಲ್ ಕನ್ಸರ್ವೇಷನ್ನಿನ ಒಂದು ಭಾಗವನ್ನಾದರೂ ಈ ತೆಂಗಿನ ತೋಟಗಳಿಗೆ ಬಂಡ್‌ನ್ನು ಹಾಕುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ಕಾಂಟೂರ್ ಬಂಡನ್ನು ನೂತನ ರೀತಿಯಲ್ಲಿ ಈಗ ಮಾಡುತ್ತಿದ್ದಾರೆ. 3 ಅಡಿ ಪಾಟ ಕೊಡುವುದಿಲ್ಲ. ಒಂದು ಅಂಗುಲ ಪಾಟಕ್ಕೆ ಸರಿಯಾಗಿ 33 ಅಡಿ ಅಗಲದ ವ್ಯವಸ್ಥೆ ಮಾಡಿ ನಿಲ್ಲಿಸುತ್ತಾರೆ. ಆದ್ದರಿಂದ ಒಂದಕ್ಕೆ ಒಂದೂವರೆಯಷ್ಟು ಪ್ರತಿಫಲ ಬಂದಿರುತ್ತದೆ. ಅದನ್ನು ಅವರು ಮಾಡಿ ತೋರಿಸಿದ್ದಾರೆ, ಅದನ್ನು ನಿಮ್ಮ ಇಲಾಖೆಯವರೂ ಸಹ ಹಳ್ಳಿಗಳಲ್ಲಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ, ಅದರ ಖರ್ಚು ಸುಮಾರು 350 ರೂಪಾಯಿಗಳು ಒಂದು ಎಕರೆಗೆ ಬೀಳುತ್ತದೆ ಯಾವ ರೈತನಿಗೂ ಅಷ್ಟೊಂದು ಹಣವನ್ನು ಕೊಟ್ಟು ಮಾಡಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇಷ್ಟೇ ಅಲ್ಲ ಇದರಲ್ಲಿ ಇನ್ನೊಂದು ವಿಷಯವನ್ನು ತಾವು ಗಮನಿಸಿದ್ದೀರೋ ಇಲ್ಲವೋ ಗೊತ್ತಾಗಲಿಲ್ಲ ಬಹಳ ದುಃಖದಿಂದ ಹೇಳಬೇಕಾಗಿದೆ. ಈ ಸಾಯಿಲ್ ಕನ್ಸರ್ವೇಷನ್‌ಗೆ ಹೆಚ್ಚು ಹಣ ಸಾಲದೇನೇ ಹೆಚ್ಚು ಕೆಲಸವನ್ನು ಈ ವರ್ಷ ಮಾಡಲಿಲ್ಲ ಎಂದು ಹೇಳಿದ್ದಾರೆ. ಹಿಂದೆ ಮಾಡಿದರ ಬಗ್ಗೆ ವಸೂಲ ಮಾಡುವುದಕ್ಕೆ ಯಾರ ಮೇಲೆ ಎಷ್ಟೆಷ್ಟು ಖರ್ಚಾಗಿದೆ ಎನ್ನುವ ಬಗ್ಗೆ ಅಂಕಿಅಂಶಗಳನ್ನು ಕಲೆಕ್ಟ್ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಈಗಲೇ ರೈತರಿಗೆ ಉಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ, ವಾಟರ್ ರೇಟ್ ಒಂದಕ್ಕೆ ಎರಡರಷ್ಟು ಹಾಕಿದ್ದೀರಿ, ಇದರ ಜೊತೆಗೆ ಸಾಯಿಲ್ ಕನ್ಸರ್ವೇಷನ್ ಮಾಡಿಸಿದ್ದು. ವಾಟರ್ ರೇಟ್ 15 ವರ್ಷದ್ದು ಬಾಕಿ ಎಲ್ಲವನ್ನೂ ಒಟ್ಟಿಗೆ ನೀವು ಕಲೆಕ್ಟ್ ಮಾಡುತ್ತೇವೆಂದು ಹೋದರೆ, ಅವನು ನಿಮಗೆ ಸಿಕ್ಕುವುದೇ ಇಲ್ಲ. ಆದುದರಿಂದ ಈ ಎಲ್ಲಾ ತೆರಿಗೆಗಳ ಜೊತೆಗೆ ಈ ಸಾಯಿಲ್ ಕನ್ಸರ್ವೇಷನ್‌ನ್ನು ಹಾಕಿಬಿಟ್ಟರೆ ಯಾರನ್ನು ಕೇಳುತ್ತೀರಿ ಆದುದರಿಂದ ಇದರಲ್ಲಿ ಮೂಲಭೂತವಾಗಿರತಕ್ಕಂಥ ಸ್ಟ್ಯಾಟಿಸ್ಟಿಕ್‌ನ್ನು ಏನು ಕಲೆಕ್ಟ್ ಮಾಡುತ್ತೇವೆಂದು ಹೇಳಿದ್ದೀರಿ ಅದನ್ನು ಕಲೆಕ್ಟ್ ಮಾಡುವುದಕ್ಕೇ ಹೋಗಬೇಡಿ ರೈತ ಚೆನ್ನಾಗಿ ಬೆಳೆ ಬೆಳೆಯುವುದನ್ನು ಕಲಿತುಕೊಂಡಾದ ಮೇಲೆ ಅವನಿಂದ ಬೇಕಾದರೆ ವಸೂಲ ಮಾಡಿ. ಪ್ರತಿಯೊಬ್ಬರೂ ಒಂದು ಫೇಸ್ಡ್ ಪ್ರೋಗ್ರಾಂ ಎಂದು ಹಾಕಿಕೊಂಡಿದ್ದಾರೆ. ಆದರೆ ಬಡ ರೈತರ ಬಗ್ಗೆ ಯಾವ ಒಂದು ಫೇಸ್ಡ್ ಪ್ರೋಗ್ರಾಂ ಕೂಡ ಇಲ್ಲ ಇದಕ್ಕೆ ಮಾತ್ರ ಏತಕ್ಕೆ ಫೇಸ್ಡ್ ಪ್ರೋಗ್ರಾಂ ಹಾಕಿಲ್ಲವೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳುತ್ತೇನೆ. ಇವತ್ತು ರೈತ ಕಂದಾಯವನ್ನು ಕಟ್ಟಲಿಲ್ಲವೆಂದರೆ ಆಟೊಮ್ಯಾಟಿಕ್ ಆಗಿ ಪಂಪನ್ನು ಕಿತ್ತುಕೊಂಡು ಹೋಗಿ ಬಿಡುತ್ತಾರೆ, ಮನೆಗಳಲ್ಲಿ ಹಸುಗಳನ್ನು ಕಟ್ಟಿದ್ದರೆ ಅದರ ಮೂಗುದಾರ ಸಮೇತ ಕಿತ್ತುಕೊಂಡು ಹೋಗಿಬಿಡುತ್ತಾರೆ. ಮಾನ್ಯ ಸಚಿವರಲ್ಲಿ ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ತಾವು ದಯಮಾಡಿ ಇನ್ನು 3 ವರ್ಷಗಳ ಕಾಲ ಯಾವ ಅಂಕಿಅಂಶಗಳನ್ನೂ ಸಹ ಕಲೆಕ್ಟ್ ಮಾಡುವುದಕ್ಕೆ ಹೋಗಬೇಡಿ. ಅದನ್ನು ಮುಂದಕ್ಕೆ ಹಾಕಿ ಎಂದು ಕೇಳಿಕೊಳ್ಳುತ್ತೇನೆ. ಮತ್ತೆ, ಮಾನ್ಯ ಚಿಕ್ಕೇಗೌಡರವರು ಮಂತ್ರಿಗಳಾಗಿ ಬಂದ ಮೇಲೆ ಸರ್ಕಾರದವರು ಟ್ರ್ಯಾಕ್ಟರ್‌ಗಳಿಗೆ ಕೊಟ್ಟಿರತಕ್ಕಂಥ ಹಣದ ಮೇಲೆ ಪೀನಲ್ ಇಂಟ್ರೆಸ್ಟ್ ಹಾಕುತ್ತಿದ್ದರು ಅದನ್ನು ನಿಲ್ಲಿಸಿ ಬಿಟ್ಟಿದ್ದಾರೆ ಇದರಿಂದ ಬಡ ರೈತರಿಗೆ ನಿಜವಾಗಿಯೂ ತುಂಬ ಅನುಕೂಲವಾಗಿದೆ. ಬರೀ ಬಡವರಿಗೇ ಅಲ್ಲ

ಕೆಲವು ಸಾಹುಕಾರರಿಗೂ ಅನುಕೂಲವಾಗಿದೆ. ರೈತರಲ್ಲಿ ಸಾಹುಕಾರರು ಯಾರಿದ್ದಾರೆ ಎಂಬುದು ನನಗಂತೂ ಗೊತ್ತಿಲ್ಲ. ಅವರಲ್ಲಿ ಕೆಲವರು ಪಂಚಾಯಿತಿ ಚುನಾವಣೆಗೋ, ಮತ್ತೆ ಇನ್ನಾವುದಾದರೂ ಚುನಾವಣೆಗಳಿಗೆ ಅವರು ನಿಂತುಕೊಂಡಿರುತ್ತಾರೆ. ಅವರಲ್ಲಿ ಯಾರು ಸಾಹುಕಾರರಿದ್ದಾರೆ ಎಂಬುದು ನನಗೆ ಗೊತ್ತಿಲ್ಲ ಸಾಹುಕಾರರು ಎನ್ನುವುದಕ್ಕೆ ಡೆಫಿನೀಷನ್ ಏನೂ ಎನ್ನುವುದು ಸಹ ನನಗೆ ಗೊತ್ತಿಲ್ಲ ತಾವು ಪೀನಲ್ ಇಂಟ್ರೆಸ್ಟ್ ವಜಾ ಮಾಡಿರುವುದು ತುಂಬಾ ಅನುಕೂಲವಾಗಿದೆ ಆದರೆ ನಿಮ್ಮ ಆಗ್ರೋ ಇಂಡಸ್ಟ್ರೀಸ್‌ನವರು ಕೊಟ್ಟಿರತಕ್ಕಂಥ ಟ್ರ್ಯಾಕ್ಟರ್‌ಗಳ ಮೇಲೆ ಪೀನಲ್ ಇಂಟ್ರೆಸ್ಟನ್ನು ವಜಾ ಮಾಡಿಲ್ಲ. ಸರ್ಕಾರ ಬೇರೆ ಅಲ್ಲ, ಆಗ್ರೋ ಇಂಡಸ್ಟ್ರೀಸ್ ಬೇರೆ ಅಲ್ಲ. ಎರಡೂ ಸಹ ಒಂದು ಮೂಲಿಂಗಿ ಇದ್ದಹಾಗೆ. ಸರ್ಕಾರ ಬಡವಾದರೆ ಕೊನೆ ಆಗ್ರೋ ಇಂಡಸ್ಟ್ರೀಸ್ ಎರಡೂ ಸಹ ಒಂದೇ ಸರ್ಕಾರದ ಆಡಳಿತದಲ್ಲಿರುವಾಗ ಒಬ್ಬರು ಅನುಕೂಲ ಮಾಡಿಕೊಟ್ಟು ಇನ್ನೊಬ್ಬರು ಅನುಕೂಲವನ್ನು ಒದಗಿಸಿಕೊಡದಿದ್ದರೆ ಅದು ನಿಜವಾಗಿಯೂ ಆಶ್ಚರ್ಯದ ವಿಷಯವಾಗಿದೆ. ಆದುದರಿಂದ ಈ ಅನುಕೂಲವನ್ನು ಆಗ್ರೋ ಇಂಡಸ್ಟ್ರೀಸ್ ಮುಖಾಂತರ ತೆಗೆದುಕೊಂಡಿರತಕ್ಕಂಥವರಿಗೂ ಒದಗಿಸಿಕೊಟ್ಟು, ಇದೇ ರೀತಿ ಇನ್ನಿತರ ಸಲಕರಣೆಗಳನ್ನು, ವ್ಯವಸಾಯ ಉಪಕರಣಗಳನ್ನು ತೆಗೆದುಕೊಂಡಿದ್ದರೆ ಅದಕ್ಕೂ ಸಹ ಅನುಕೂಲತೆಯನ್ನು ಒದಗಿಸಿಕೊಡಬೇಕೆಂದು ನಿಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಷ್ಟು ವಿಚಾರವನ್ನು ಹೇಳಿ ಇನ್ನು ಮುಂದೆ ಅನಿಮಲ್ ಹಸ್ಬೆಂಡ್ರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ರೈತ ವರ್ಗದವರು ಮಾನ್ಯ ಚಿಕ್ಕೇಗೌಡರವರಿಗೆ ತುಂಬಾ ಅಭಾರಿಯಾಗಿದ್ದಾರೆ. ಅದರಲ್ಲೂ ಕೂಡ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಒಂದು ಆಶಾದಾಯಕವಾದ ಮಾರ್ಗವನ್ನು ಕಂಡು ಹಿಡಿದಿದ್ದೀರಿ. ಇದಕ್ಕಾಗಿ ಅವರು ತುಂಬಾ ಅಭಾರಿಯಾಗಿದ್ದಾರೆ. ತಾವು ಇದಕ್ಕಾಗಿ ಒಂದು ಯೋಜನೆ ತಯಾರು ಮಾಡಿ ಆ ಪ್ರಕಾರವಾಗಿ ಮಾಡುವುದಕ್ಕೆ ಪ್ರಯತ್ನಿಸುತ್ತೇವೆಂದು ಹಿಂದೆ ಹೇಳಿದ್ದೀರಿ. ಈ ರೀತಿ ಆನಂದ ಮಾದರಿಯಲ್ಲಿ, ಯಾರು ಹಾಲು ಉತ್ಪಾದನೆ ಮಾಡುತ್ತಾನೋ ಅವರೇ ನೇರವಾಗಿ ತೆಗೆದುಕೊಂಡು ಬಂದು ಸೊಸೈಟಿಗೆ ಒಂದು ಲೀಟರ್, ಅರ್ಧ ಲೀಟರ್ ಕೊಟ್ಟರೂ ಕೂಡ ತೆಗೆದುಕೊಳ್ಳುತ್ತೇವೆಂದು ಹೇಳಿ, ಅವರ ಫ್ಯಾಕ್ಟ್ ಮುಂತಾದ ನಿಬಂಧನೆಗಳ ಪ್ರಕಾರ ಅವರಿಗೆ ನೀವು ಧಾರಣೆಯನ್ನು ಕೊಡುತ್ತಿದ್ದೀರಿ. ಅವಾಗ 2 ದಿವಸಕ್ಕೊಮ್ಮೆ, 3 ದಿವಸಕ್ಕೊಮ್ಮೆ ಅವರು ಕೇಳಿದಾಗಲೂ ಸಹ ಅವರ ಹಣವನ್ನು ಅವರಿಗೆ ಸಕಾಲದಲ್ಲಿ ಕೊಡುವ ವ್ಯವಸ್ಥೆ ಮಾಡಿದ್ದೀರಿ. ಮಾನ್ಯ ಚಿಕ್ಕೇಗೌಡರವರು ಹಿಂದೆ ಒಂದು ಮಾತನ್ನು ಹೇಳುತ್ತಿದ್ದರು, ಪ್ರತಿಯೊಬ್ಬ ರೈತನ ಮನೆಯಲ್ಲೂ ಹಸು ಕಟ್ಟಿಸಿ ಉದ್ಧಾರ ಮಾಡುತ್ತೇವೆಂದು. ಆದರ ಬಗ್ಗೆ ಸ್ವಲ್ಪ ಪ್ರಯತ್ನ ನಡೆದಿದ್ದರೂ ಕೂಡ ಈ ಅಧಿಕಾರಿಗಳ ಗಲಾಟೆ ಇದ್ದೇ ಇದೆ. ದೊಡ್ಡಬಳ್ಳಾಪುರದಲ್ಲಿ 12 ಮಾಡಿದರೆ ಶಿಡ್ಲಘಟ್ಟದಲ್ಲಿ 7 ಮಾಡಿದ್ದೀರಿ, ತುಮಕೂರಿನಲ್ಲಿ 3 ಮಾಡಿದ್ದೀರಿ, ಆದರೆ ಇವತ್ತು ಅಧಿಕಾರಿಗಳ ಮಾತುಗಳನ್ನು ಕೇಳುವುದಕ್ಕೇ ಆಗುವುದಿಲ್ಲ ಅವರನ್ನು ಸ್ವಲ್ಪ ಕಂಟ್ರೋಲ್‌ನಲ್ಲಿ ಇಡುವುದಕ್ಕೆ ಪ್ರಯತ್ನ ಮಾಡಿ. ಕೆಲವು ಕಡೆಯೇನೋ ಅನುಕೂಲ ಮಾಡಿಕೊಟ್ಟಿದ್ದೀರಿ ಆದರೆ ಇನ್ನು ಕೆಲವು ಕಡೆ ಆಗುತ್ತಿರುವ ಅನಾನುಕೂಲವನ್ನು ನೋಡುವುದಕ್ಕಾಗುವುದಿಲ್ಲ. ಮಧ್ಯಸ್ತಗಾರರ ಬಡ ರೈತರ ತಲೆಯನ್ನು ಬಡೆಯುತ್ತಿದ್ದಾರೆ ಆದುದರಿಂದ ಎಲ್ಲಾ ಕಡೆಗೂ ಸಹ ಈ ಮಧ್ಯಸ್ತಗಾರರ ಹಾವಳಿಯನ್ನು ತಪ್ಪಿಸಿ ಜನರಿಗೆ ಅನುಕೂಲವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಪ್ರತಿಯೊಬ್ಬರ ಮನೆಯಲ್ಲೂ ಹಸು ಮೇಯಿಸುವುದಕ್ಕೆ, ಎಮ್ಮೆ ಮೇಯಿಸುವುದಕ್ಕೆ ಅನುಕೂಲವನ್ನು ಮಾಡಿಕೊಡಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಬೇಡಿಕೊಳ್ಳುತ್ತೇನೆ. ಹಿಂದೆ ಒಂದು ಸಾರಿ ತಾವು ಮಾತನಾಡುವಾಗ ನನಗೆ ಮರವೇ ಇಲ್ಲವೆಂದು ಹೇಳಿದ್ದೀರಿ. ಆದರೆ ಈಗ ಸ್ವಲ್ಪ ಮರೆವು ಬಂದ ಹಾಗೆ ಕಾಣುತ್ತಿದೆ. ಅದು ಏತಕ್ಕೋ ಬಂತೋ ಗೊತ್ತಿಲ್ಲ. ಈ ಕಾಫ್ ರೇರಿಂಗ್ ಸೆಂಟರ್ ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಎಲ್ಲಿ ಮಾಡಿದ್ದಾರೋ ಗೊತ್ತಿಲ್ಲ. ಮತ್ತೆ ಕ್ಯಾಟಲ್ ಮಾರ್ಕೆಟ್ ಮಾಡಿಕೊಡುತ್ತೇವೆಂದು ಹೇಳಿದ್ದೀರಿ, ಆದರೆ ಬೆಂಗಳೂರಿನಲ್ಲಿ ಎಲ್ಲೋ ಅದಕ್ಕಾಗಿ ಸ್ಥಳವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ, ಅದನ್ನು ಕೇಳಿ ಬಹಳ ಸಂತೋಷವಾಯಿತು. ಈಗಲೂ ಸಹ ನಾವು ಹಸುಗಳನ್ನು ಮಾರಬೇಕಾದರೆ ಇಲ್ಲ ಕೊಂಡುಕೊಳ್ಳಬೇಕಾದರೆ ಅವರ ಮನೆಗಳನ್ನು ಹುಡಿಕಿಕೊಂಡು ಹೋಗಬೇಕಾಗಿದೆ. ಆದುದರಿಂದ ಇದರ ಬಗ್ಗೆ ಕೂಡಲೇ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಫುಡ್ ಅಂಡ್ ಮೌತ್ ಕಾಯಿಲೆ ಬಂದಾಗ ಅರ್ಧ ಬೆಲೆಯನ್ನು ಕೊಡುತ್ತಿದ್ದಿರಿ. ಎಲ್ಲೆಲ್ಲೂ ರೈತರು ಇದರ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ಕೆಲವು ಕಡೆ ಅದರ ಬಗ್ಗೆ ನಿಲ್ಲಿಸಿಬಿಟ್ಟಿದ್ದಾರೆ. ಪ್ರತಿಯೊಬ್ಬರೂ ಫುಡ್ ಅಂಡ್ ಮೌತ್ ಡಿಸೀಜ್ ಎಂದು ಹೇಳುವುದಿಲ್ಲ ಚಿಕ್ಕೇಗೌಡರವರ ಡಿಸೀಜ್ ಎಂದು ಹೇಳುತ್ತಾರೆ. ಏತಕ್ಕೆಂದರೆ ಯಾವುದು ಜನರಿಗೆ ಒಳ್ಳೆಯದು ಆಗುತ್ತೋ ಆಗ ಅವರ ಹೆಸರಿಂದ ಹಳ್ಳಿಯಲ್ಲಿ ಹೇಳುವುದು ರೂಢಿ. ಆದುದರಿಂದ ಜನಗಳು ಆ ಕಾಯಿಲೆ ಬಂದರೆ ಚಿಕ್ಕೇಗೌಡರವರ ಕಾಯಿಲೆ ಬಂದಿದೆ ಎಂತಲೇ ಹೇಳುತ್ತಾರೆ. ಫುಡ್ ಅಂಡ್ ಮೌತ್ ಡಿಸೀಜ್‌ನ್ನು ನಿವಾರಿಸಿದವರು ಒಬ್ಬರೂ ಇಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಯಾರೂ ಈ ರೀತಿ ಮಾಡಿರಲಿಲ್ಲ. 10 ರೂಪಾಯಿಗಳ ಇದ್ದುದನ್ನು 3 ರೂಪಾಯಿ ಚಾರ್ಜ್ ಮಾಡುವ ಹಾಗೆ ಮಾಡಿ ರೈತರಿಗೆ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ಅವರೆಲ್ಲಾ ತುಂಬಾ ಅಭಾರಿಯಾಗಿದ್ದಾರೆ, ಅದನ್ನು ಜಾರಿಗೆ ತಂದು ಇನ್ನು 1-2-3 ವರ್ಷಗಳಾಗಿಲ್ಲ ಆಗಲೇ ಆ ಅನುಕೂಲತೆಯನ್ನು ನಿಲ್ಲಿಸತಕ್ಕಂಥದ್ದು ಸರಿಯಲ್ಲ, ಅದರ ಅನುಕೂಲತೆ ಎಲ್ಲರಿಗೂ ದೊರೆಯುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಉಲ್ಲನ್ ಡೆವಲಪ್‌ಮೆಂಟ್‌ಗೆ ಮತ್ತು ಷೀಪ್ ರೇರಿಂಗ್‌ಗೆ ಒಂದು ಕಾರ್ಪೊರೇಷನ್ ಮಾಡಿದ್ದೇವೆಂದು ಹೇಳಿ ಅದರಿಂದ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ನನ್ನದೊಂದು ಸಲಹೆ ಇದೆ; ಇವತ್ತು ಷೀಪ್ ರೀಸರ್ಚ್ ಸೆಂಟರ್‌ಗಳಲ್ಲಿ, ಉಲ್ಲನ್ ಡೆವಲಪ್‌ಮೆಂಟ್ ಬಗ್ಗೆ ಒಂದು ರೀಸರ್ಚ್ ಸೆಂಟರ್ ಇಲ್ಲ. ಹಿಂದೆ ಮೆರಿನೋ ಕುರಿಗಳನ್ನು ತರಿಸಿಕೊಟ್ಟರು. ಆದರೆ ಅವುಗಳು ತಾಪಕ್ಕೆ ತಡೆಯಲಾರದೆ ಸತ್ತು ಹೋದವು. ಆ ಕುರಿಗಳು ಇಂದು ಒಂದೂ ಕೂಡ ಇಲ್ಲ. ಬನ್ನೂರಿನಲ್ಲಿ ಒಂದು ಅನಿಮಲ್ ಫುಡ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ ಅದು ಬಹಳ ಉತ್ತಮವಾದ ಕೆಲಸ ಮಾಡುತ್ತಿದ್ದೆವೆಂದು ಹೇಳಿದ್ದಾರೆ. ಇಂಥವುಗಳನ್ನು ಇನ್ನು 6-7 ಕಡೆಯಲ್ಲಾದರೂ ಕೂಡ ಉತ್ತಮವಾದಂಥ ಶಾಶ್ವತವಾದಂಥವುಗಳನ್ನು ಮಾಡಬೇಕೆಂದು ಹೇಳುತ್ತೇನೆ. ಹಾಗೂ ಈ ಡೆವಲಪ್‌ಮೆಂಟ್ಸ್ ಬಗ್ಗೆ ಒಂದು ಅತ್ಯಾವಶ್ಯಕವಾಗಿ ಒಂದು ರೀಸರ್ಚ್ ಯುನಿಟ್ಸ್‌ಗಳಿರಬೇಕು ಎಂದು ನನ್ನ ಆಶೆ. ಚಳ್ಳಕೆರೆಯಲ್ಲಿ 10 ಸಾವಿರ ಎಕರೆ ಭೂಮಿಯನ್ನು ತೆಗೆದುಕೊಂಡು 2-3 ಸಾವಿರ ಕುರಿಗಳನ್ನು ಇಟ್ಟಿದ್ದೀರಿ. ಈ ರೀತಿ ಯಾರು ಸಹ ಮಾಡಿರಲಿಲ್ಲ. ಉಲ್ಲನ್ ಡೆವಲಪ್‌ಮೆಂಟ್ ಬಗ್ಗೆ ಒಂದು ಕಾರ್ಪೊರೇಷನ್ ಮಾಡಿದ್ದೀರಿ, ಅದರ ಕೆಲಸ ಕಾರ್ಯಗಳನ್ನು ನಾವು ಕಾದು ನೋಡಬೇಕಾಗಿದೆ.

ಚಳ್ಳಕೆರೆಯ ಕುರಿಯ ಪೋಷಣೆ ಕೇಂದ್ರದಲ್ಲಿ ಯುನಿವರ್ಸಿಟಿ ಕೊಲಾಬ್ರೇಷನ್ ತೆಗೆದುಕೊಂಡು ಕೆಲವು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ರಿಸರ್ಚ್ ಸೆಂಟರನ್ನು ಸ್ಥಾಪನೆ ಮಾಡಬೇಕು. ದಯವಿಟ್ಟು ಇಂಥಾ ಉತ್ತಮ ಕಾರ್ಯವನ್ನು ಮಾಡಬೇಕು. ಇದಕ್ಕೆ ಹಣ ಇಲ್ಲ ಎಂದರೆ ಈ ಇಲಾಖೆಯಲ್ಲಿರುವ ಜಾಯಿಂಟ್ ಡೈರೆಕ್ಟರನ್ನು ಕಡಿಮೆ ಮಾಡಿ ಅವರಿಗೆ ಖರ್ಚು ಮಾಡತಕ್ಕ ಹಣವನ್ನು ಈ ರಿಸರ್ಚ್ ಸೆಂಟರಿಗೆ ಖರ್ಚು ಮಾಡಬೇಕು, ಒಬ್ಬ ಜಾಯಿಂಟ್ ಡೈರೆಕ್ಟರಿಗೆ 20 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಏತಕ್ಕೆ ಇಂಥಾ ದೊಡ್ಡ ಅಧಿಕಾರಿಗಳಲ್ಲಿ ಇಲ್ಲಿ ಇಟ್ಟಿದ್ದಾರೆಯೋ ಗೊತ್ತಾಗುವುದಿಲ್ಲ, ಕುರಿಗಳಿಗೆ ಬರತಕ್ಕ ರೋಗವನ್ನು ತಡೆಗಟ್ಟುವ ಬಗ್ಗೆ ಗಮನ ಕೊಡಬೇಕು. ಇಲ್ಲದೆ ಹೋದರೆ ಷೀಪ್ ಡೆವಲಪ್‌ಮೆಂಟ್ ಆಗುವುದಿಲ್ಲ. ಆದ್ದರಿಂದ ಇವನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಹೆಚ್ಚು ಅನುಕೂಲ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ.

ಇಂಡೋಡ್ಯಾನಿಷ್ ಫಾರಂನಲ್ಲಿ ಬೆಳೆಸಿದಂತಹ ಹಸುಗಳಿಗೆ ಆನೆ ಮೈಕ್ಯ ಇತ್ತು. ಅವು ಈಗ ಯಾವರೀತಿ ಆಗಿವೆ ಎಂದರೆ ಅವುಗಳು ಹಾಲನ್ನೇನೋ ಕರೆಯುತ್ತಿವೆ. ಆದರೆ ಅವುಗಳ ಕೆಚ್ಚಲನ್ನು ಬಗ್ಗಿ ನೋಡಬೇಕು. ಅವು ಅಷ್ಟು ಬಡವಾಗಿವೆ. ಆ ತಳಿ ಅಷ್ಟು ಕ್ಷೀಣವಾಗ ಬಾರದು. ಅವುಗಳನ್ನು ಅಭಿವೃದ್ಧಿ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಇದ್ದಿದ್ದರೆ ಅದನ್ನು ತೆಗೆಯಬೇಕು, ಇಲ್ಲದಿದ್ದರೆ ಅನುಕೂಲ ಮಾಡಿಕೊಡಬೇಕು. ಇಂಡೋಡ್ಯಾನಿಷ್ ತಳಿಯ ಒಂದು ಕರುವಿನ ಬೆಲೆ 3 ತಿಂಗಳ ಕರುವಿನ ಬೆಲೆ 500 ರೂಪಾಯಿಗಳಾಗುತ್ತವೆ. ಮಾನ್ಯ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಹೆಚ್ಚು ಶ್ರದ್ಧೆಯಿಂದ ಅನೇಕ ಉಪಯುಕ್ತವಾದ ಕೆಲಸಗಳನ್ನು ಮಾಡಿದ್ದಾರೆ. ಶ್ರೀಮಾನ್ ಲಕ್ಷ್ಮಣಯ್ಯ ಎನ್ನುವವರು ಹೊಸ ರಾಗಿ

ತಳಿಯನ್ನು ಕಂಡುಹಿಡಿದ ಮೇಲೆ ಬೆಳೆ ಎಷ್ಟು ಹೆಚ್ಚಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆ. ಹಲವಾರು ಕಡೆ ಈ ಬಗ್ಗೆ ಹೇಳಿದ್ದಾರೆ, ಮತ್ತು ರೈತರು ತಮ್ಮ ಸಂತೋಷ ವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಮಾನ್ಯ ಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ಜರ್ಸಿ ಫಾರಂ ಇದೆ. ಆದರೆ ಅದು ಇತ್ತೀಚೆಗೆ ಬಂದದ್ದು, ಅಮೃತಮಹಲ್ ಮತ್ತು ಹಳ್ಳಿ ಕಾರ್ ಈ ಎರಡು ಜಾತಿಯ ತಳಿಗಳನ್ನು ಅಭಿವೃದ್ಧಿಪಡಿಸಬೇಕು, ನಮ್ಮದೇಶದಲ್ಲಿ ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ನಲ್ಲಿ ಉಳುಮೆ ಮಾಡತಕ್ಕ ರೈತರು ಕಡಿಮೆ ಇದ್ದಾರೆ. ಪ್ರತಿಯೊಂದು ಹಳ್ಳಿಕಾರ್ ಮತ್ತು ಅಮೃತಮಹಲ್ ಜಾತಿಯ ಹಸುಗಳಲ್ಲಿ ಹುಟ್ಟಿದ ಒಂದು ಜೊತೆಯ ಕರುಗಳು ಒಂದೊಂದು ಪವರ್ ಟಿಲ್ಲರಿಗೆ ಸಮಾನವಾಗಿರುತ್ತವೆ. ಈ ದೃಷ್ಟಿಯಿಂದ ಈ ನಮ್ಮ ಅಮೃತಮಹಲ್ ಮತ್ತು ಹಳ್ಳಿಕಾರ್ ಜಾತಿಯ ತಳಿಯ ಹಸುಗಳನ್ನು ಕಳಿಯಬಾರದು. ಆ ಜಾತಿಗೆ ಬೇಕಾದರೆ ಚಿಕ್ಕೇಗೌಡರ ಜಾತಿ ಎಂದಾದರೂ ಇಡಿ. ಅಭ್ಯಂತರವಿಲ್ಲ. ಆದರೆ ಹಳ್ಳಿಕಾರ್ ಮತ್ತು ಅಮೃತ ಮಹಲ್ ತಳಿಗಳನ್ನು ಉಳಿಸಿಕೊಂಡು ಬರಬೇಕು. ಚಿಕ್ಕ ಚಿಕ್ಕ ರೈತರಿಗೆ ಹಳ್ಳಿಕಾರ್ ಮತ್ತು ಅಮೃತಮಹಲ್ ಜಾತಿಯ ಎತ್ತುಗಳನ್ನು ಸರ್ಕಾರದವರು ಬೆಳೆಸಿ ಕೊಡಬೇಕಾಗುತ್ತದೆ, ಸರ್ಕಾರದ ಫಾರಂನಲ್ಲಿಯೇ ಈ ತಳಿಗಳನ್ನು ಬೆಳೆಸಿ ಕರುಗಳನ್ನು ಬೆಳೆಸಿ ಎತ್ತುಗಳಾಗಿ ಕನ್‌ವರ್ಟ್ ಮಾಡಿ ಪ್ರತಿಯೊಂದು ಚಿಕ್ಕ ರೈತ ಕುಟುಂಬಕ್ಕೂ ಒಂದೊಂದು ಜೊತೆ ಎತ್ತುಗಳನ್ನು ಒದಗಿಸಬೇಕು. ರೈತರ ಮನೆಯಲ್ಲಿ ಈ ಜಾತಿಯ ಒಂದು ಜೊತೆಯ ಎತ್ತುಗಳು ಇದ್ದರೆ ಮೂರು ಸಾವಿರ ರೂಪಾಯಿಗಳ ಒಂದು ಆಸ್ತಿ ಇದ್ದಹಾಗೆ. 5 ಎಕರೆ, 3 ಎಕರೆ ಜಮೀನನ್ನು ಹೊಂದಿರತಕ್ಕ ಪ್ರತಿ ರೈತ ಕುಟುಂಬಕ್ಕೆ ಸರ್ಕಾರದವರು ಒಂದೊಂದು ಹಳ್ಳಿಕಾರ್, ಅಮೃತಮಹಲ್ ಎತ್ತು ಗಳನ್ನು ಕೊಡಬೇಕು.

ಮತ್ತು ಎರಡು ಎಕರೆ ಮೂರು ಎಕರೆ ಜಮೀನುಗಳಿಗೆ ಒಂದೊಂದು ಪ್ಲಾಟ್ ಮಾಡಿ ಕೊಂಡು ಒಡ್ಡುಗಳನ್ನು ಕಾಂಟೂರ್ ಬಂಡ್‌ಗಳನ್ನು ಹಾಕಿಸಿಕೊಟ್ಟರೆ ರೈತರಿಗೆ ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಇದರ ಜೊತೆಗೆ ವ್ಯವಸಾಯಕ್ಕೆ ಬೇಕಾದ ಗೊಬ್ಬರ ಬೀಜ ಮತ್ತು ವ್ಯವಸಾಯದ ಸಲಕರಣೆಗಳನ್ನು ಒದಗಿಸಬೇಕು, ಇದರ ಜೊತೆಗೆ ರೈತ ಬೆಳೆದ ಮಾಲಿಗೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು. ಆಹಾರದ ಖಾತೆಯನ್ನು ಮಾನ್ಯ ವ್ಯವಸಾಯ ಮಂತ್ರಿಗಳಿಗೆ ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಅವರು ನನಗೆ ಒಂದು ವ್ಯವಸ್ಥೆ ಮಾಡಿ ಕೊಡಬೇಕು. ಆಹಾರದ ಇಲಾಖೆಯಿಂದ ನಮ್ಮ ರಾಜ್ಯಕ್ಕೆ 5 ಕೋಟಿ ರೂಪಾಯಿಗಳು ನಷ್ಟ ವಾಗುತ್ತದೆ. ಆಹಾರ ಇಲಾಖೆಯಲ್ಲಿ ಬೇಕಾದಷ್ಟು ಸಿಬ್ಬಂದಿ ಇದೆ, ಆಹಾರ ಹಂಚಿಕೆಯ ಲೆಕ್ಕ ವನ್ನು ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಬರೆಯುತ್ತಾರೆ; ಇದರಲ್ಲಿ ಉತ್ಪತ್ತಿ ಯಾವುದೂ ಇಲ್ಲ. ಆಹಾರ ಇಲಾಖೆಯಿಂದ ನಮ್ಮ ರಾಜ್ಯಕ್ಕೆ 5 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ ಆ 5 ಕೋಟಿ ರೂಪಾಯಿಗಳಲ್ಲಿ ಅಮೃತಮಹಲ್ ತಳಿಯನ್ನು ಅಭಿವೃದಿ ಮಾಡಿ ಪ್ರತಿಯೊಬ್ಬ ರೈತನಿಗೂ ಒಂದು ಜೊತೆ ಎತ್ತು ಕೊಟ್ಟು ವ್ಯವಸಾಯಕ್ಕೆ ಬೇಕಾದ ಗೊಬ್ಬರ ಬೀಜ ಮತ್ತು ವ್ಯವಸಾಯದ ಸಲಕರಣೆಗಳನ್ನು ಒದಗಿಸುವುದಾದರೆ ನಾವು ಹೊರಗೆ ಆಹಾರ ಧಾನ್ಯವನ್ನು ಕೊಂಡುಕೊಳ್ಳುವುದಕ್ಕೆ ಖರ್ಚಾಗತಕ್ಕ ಹಣವನ್ನು ಉಳಿಸಬಹುದು. ನಮ್ಮ ದೇಶದಲ್ಲೇ ಆಹಾರ ಉತ್ಪತ್ತಿಯನ್ನು ಹೆಚ್ಚಿಸಬಹುದು. ಮರದ ನೇಗಿಲನ್ನು ಭೂಮಿಗೆ ಒಬ್ಬ ರೈತನೂ ಹಾಕಬಾರದು. ಕೋಲಾರದ ನೇಗಿಲು 15 ರೂಪಾಯಿಗಳಿಂದ 60 ರೂಪಾಯಿ ಗಳವರೆಗೆ ಇದೆ, ಒಟ್ಟಿನಲ್ಲಿ ರೈತರು ಮರದ ನೇಗಿಲಿನಲ್ಲಿ ಉಳುವುದನ್ನು ತಪ್ಪಿಸಿ ಎಲ್ಲರೂ ಕಬ್ಬಿಣದ ನೇಗಿಲಿನಲ್ಲಿ ಉಳುವಂತೆ ಮಾಡಬೇಕು; ಐ.ಡಿ.ಎಲ್ ಎ. ಡಿ. ಸ್ಕೀಮು ಬರುತ್ತದೆ. ಅದು ಉತ್ತಮವಾಗಿ ನಡೆಯುತ್ತದೆ ಎಂದು ನಾವೆಲ್ಲರೂ ನಿರೀಕ್ಷಣೆ ಮಾಡಿದ್ದೆವು, ಅದರಲ್ಲಿ ಎಲ್ಲಾ ಅನ್ಯಾಯ ನಡೆಯುವುದಿಲ್ಲ ಎಂದು ನಾವು ತಿಳಿದುಕೊಂಡಿದ್ದೆವು. ಹೋದವರ್ಷ ಐ;ಡಿ.ಎಲ್.ಎ ಡಿ ಸ್ಕೀಮಿನಲ್ಲಿ 42 ಸಾವಿರ ರೂಪಾಯಿಗಳು ವ್ಯವಸಾಯದ ಉಪಕರಣಗಳಿಗೆ ಸಬ್ಸಿಡಿ ಕೊಡು ವಂಥಾದ್ದು ಲ್ಯಾಪ್ಸ್ ಆಗಿದೆ. ಅದಕ್ಕಾಗಿ ಅಧಿಕಾರಿಗೆ ಶಿಕ್ಷೆ ಕೊಡಬೇಕು. ಇದು ಕೇಂದ್ರ ಸರ್ಕಾರದಿಂದ ಬರತಕ್ಕ ಹಣ. ಇದನ್ನು ಲ್ಯಾಪ್ಸ್ ಮಾಡಿದ್ದಾರೆ, ಈ 42 ಸಾವಿರ ರೂಪಾಯಿ ಗಳನ್ನು ರೈತರಿಗೆ ಕೊಟ್ಟಿದ್ದರೆ ಯಾವ ತೊಂದರೆಯೂ ಆಗುತ್ತಾ ಇರಲಿಲ್ಲ. ಈ ಹಣ ರೈತ ರಿಗೆ ಕೊಟ್ಟಿದ್ದರೆ ಅವರಿಗೆ ಪರಮಾನಂದವಾಗುತ್ತಿತ್ತು. ಈ ಯೋಜನೆ ಐ.ಡಿ.ಎಲ್.ಎ.ಡಿ ಗೆ

ಬದಲಾಗಿ ಐಡಲ್ ಲೇಡಿ ಆಗಿದೆ, ಎಲ್ಲರೂ ಮಲಗಿದ್ದಾರೆ ಒಬ್ಬರಾ ಕೆಲಸ ಮಾಡುತ್ತಿಲ್ಲ. ವ್ಯವಸಾಯ ಮಂತ್ರಿಗಳು ಇದನ್ನು ಗಮನಿಸಿದ್ದರೆ ಈ ರೀತಿಯ ಅನ್ಯಾಯ ಆಗುತ್ತಾ ಇರಲಿಲ್ಲ. ರೈತರಿಗೆ ಅನುಕೂಲ ಆಗುವುದನ್ನು ಯಾವರೀತಿಯಿಂದಲೂ ಲ್ಯಾಪ್ಸ್ ಆಗುವುದಕ್ಕೆ ಅವಕಾಶವನ್ನು ಕೊಡಬಾರದು

ವ್ಯವಸಾಯದ ದೃಷ್ಟಿಯಿಂದ ಇರಿಗೇಷನ್ ಬಹಳ ಪ್ರಾಮುಖ್ಯವಾದುದು. ಬಾವಿಗಳಲ್ಲಿ ಬೋರ್ ಹಾಕುವಾಗ ಕೆಲವು ರಿಗ್ಸ್‌ಗಳು ಹೊರಗಡೆ ಕೆಲಸ ಮಾಡುತ್ತವೆ. ಆದರೆ ಒಳಗಡೆ ಹೋಗುವುದಿಲ್ಲ. ಮತ್ತು ರಿಗ್ಸ್‌ಗಳನ್ನು ಬುಕ್ ಮಾಡಿದರೆ ಅವು ಬರುವುದಕ್ಕೆ 3 ತಿಂಗಳು ಗುತ್ತದೆ. ಆದ್ದರಿಂದ ರೈತರಿಗೆ ಭಾವಿಯನ್ನು ಕೊರೆಯುವುದಕ್ಕೆ ಅನುಕೂಲವಾಗುವಂತೆ ಒಳ್ಳೆಯ ರಿಗ್‌ಗಳನ್ನು ತರಿಸಿಕೊಡಬೇಕು. ಮತ್ತು ವ್ಯವಸಾಯಕ್ಕೆ ಬೇಕಾದ ಒಳ್ಳೆಯ ಉಪಕರಣಗಳನ್ನು ತರಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಭಾವಿ ಒಳಗಡೆ ಕೆಲಸ ಮಾಡತಕ್ಕ ಜನ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಆಗಬೇಕು. ಯಾವ ರೈತ ಕೇಳಿದರೂ 8 ದಿನಗಳೊಳಗೆ ರಿಗ್ಸನ್ನು ಕೊಡತಕ್ಕ ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕು. Implementation of technology on dry farming are a ಇವೆರಡನ್ನು ಮಾಡಿಕೊಡಿ. ಬರವಣಿಗೆಯಲ್ಲಿ ಇದನ್ನು ಇಟ್ಟಿದ್ದೀರಿ ಕಾರ್ಯರೂಪಕ್ಕೆ ಇವೆರಡನ್ನೂ ಮಾಡಿಕೊಡಿ. ಬೆಂಗಳೂರು ಜಿಲ್ಲೆಯಲ್ಲಿ 11 ./. ಇರಿಗೇಟೆಡ್ ಏರಿಯಾ ಇರುವುದು. ಹಗಲು ಮಳೆ ಬಂದರೆ ರಾತ್ರಿ ನೀರು ನಿಂತು ಮಾರುದಿನ ಹಗಲನಲ್ಲಿ ಒಣಗಿ ಹೋಗುವಂಥದ್ದು ಇದರಲ್ಲಿ ಸೇರಿವೆ.

3-00 P.M.

ತುಮಕೂರು, ಚಿತ್ರದುರ್ಗ, ಕೋಲಾರ, ಬೆಂಗಳೂರು ಮುಂತಾದ 7 ಜಿಲ್ಲೆಗಳಲ್ಲಿ ಡ್ರೈ ಫಾರ್ಮಿಂಗ್ ಇಂಟೆನ್ಸಿವ್‌ವಾಗಿ ಮಾಡಬೇಕು. ನಮ್ಮ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಇದರ ಮೇಲೆ ಹೆಚ್ಚು ರಿಸರ್ಚ್ ನಡೆಯಬೇಕು. ಕಡಲೇಕಾಯಿ ಬಿತ್ತನೆ ಬರಲಿಲ್ಲ. ಪಲ್ಸಸ್‌ನ್ನು ಇನ್ನೂ ಡೆವಲಪ್‌ಮೆಂಟ್ ಮಾಡಿಲ್ಲ, ಇದರ ಬಗ್ಗೆ ಒಂದು ಕಮಿಟಿ ಮಾಡಿದ್ದಾರೆ. ಆ ಕಮಿಟಿ ಯಾವಾಗಲೂ ಅಸೆಂಬ್ಲಿ ಸೇರಿದಾಗ ಸೇರುತ್ತದೆ. ಏಕೆಂದರೆ ನಮಗೆ ಟಿ.ಎ ಡಿ.ಎ. ಕೊಡಬೇಕಾಗುತ್ತದೆ. ನಾವು ಅಲ್ಲಿಗೆ ಹೋಗುವುದೋ, ಇಲ್ಲಿಗೆ ಹೋಗುವುದೋ ಗೊತ್ತಾಗಿಲ್ಲ ನಮಗೆ ಟಿ.ಎ. ಬೇಡ ಕೂತು ಚರ್ಚೆ ಮಾಡುವುದಕ್ಕೆ 2 ತಿಂಗಳಿಗೆ 3 ತಿಂಗಳಿಗೆ ಅಥವ ಸೀಸನ್‌ನಲ್ಲಿ ಕಮಿಟಿ ಸಭೆ ಸೇರುವಂತೆ ಮಾಡಬೇಕು. ಪಲ್ಸಸನ್ನು ಡೆವಲಪ್‌ಮೆಂಟ್ ಮಾಡಬೇಕು ಟನ್‌ಗಳಷ್ಟು ಉತ್ಪತ್ತಿ ಮಾಡುತ್ತೇವೆ ಎಂದು ಹೇಳುತ್ತೀರಿ. ಒಬ್ಬ ರೈತ 5 ಟನ್‌ನಷ್ಟು ಡೆವಲಪ್ ಮಾಡುತ್ತಾನೆ ಎಂದು ಹೇಳಿದರೆ ಸಮಾಧಾನವಾಗುತ್ತದೆ. ಸನ್ ಫ್ಲವರ್ ಷಾ ಫ್ಲವರ್ ಎಂದು ಇದೆ. ಅದು ಧಾರವಾಡದಲ್ಲಿ ಚೆನ್ನಾಗಿ ಬಂದಿದೆ ಅದು ಡ್ರೈ ಮೆಥೆಡ್‌ನಲ್ಲಿ ಕಲ್ಟಿವೇಷನ್ ಮಾಡಿದರೆ ಸರಿಹೋಗುತ್ತದೆ ಅಥವಾ ಇಲ್ಲ ಎನ್ನುವುದನ್ನು ಎಕ್ಸ್‌ಪರಿಮೆಂಟ್ ಮಾಡಿ ಕೊಟ್ಟರೆ ಒಳ್ಳೆಯದು, ಸನ್ ಫ್ಲವರ್ ಎಣ್ಣೆಗಿಂತ, ಸಾ ಫ್ಲವರ್ ಎಣ್ಣೆಯಲ್ಲಿ ಕೊಬ್ಬು ಕಡಿಮೆ ಅದು ನನಗೆ ನಿಮಗೆ ಉತ್ತಮ ಎಂದು ಹೇಳುತ್ತಾರೆ ಯಾರಿಗೆ ಸ್ಥೂಲ ಶರೀರ ಇರುತ್ತದೊ ಹಾರ್ಟ್ ಕಂಪ್ಲೇಂಟ್ ಇರುತ್ತದೋ ನಿಮಗಲ್ಲ ನನಗೆ ಇದೆ, ಅವರಿಗೆ ಉತ್ತಮ ಎಂದು ಹೇಳುತ್ತಾರೆ. ಇಂಥಾದ್ದನ್ನು ಚೆನ್ನಾಗಿ ಬೆಳೆಸಿದರೆ ಒಳ್ಳೆಯದು. ಕಡಲೆಕಾಯಿ ಎಣ್ಣೆಗಿಂತ ಇದು ಒಳ್ಳೆಯದು, ಇದನ್ನು ಹೆಚ್ಚು ಅಭಿವೃದ್ಧಿ ಮಾಡಿದರೆ ಒಳ್ಳೆಯದು ಪತ್ರಿಕೆಗಳಲ್ಲಿ ಇದರ ಬಗ್ಗೆ ಬಹಳ ಚೆನ್ನಾಗಿ ಬರೆದಿದ್ದಾರೆ. ಅಷ್ಟೇ ತೃಪ್ತಿ. ಸೀಡ್ಸ್ ಇಲ್ಲ. ಇದನ್ನು ಇಂಟೆನ್ಸೀವಾಗಿ ಮಾಡಬೇಕು. ಮೊನ್ನೆ ಹೈದರಾಬಾದ್ ತೊಗರಿ ಎಂದು ಕೊಟ್ಟಿದ್ದಾರೆ. ಅದು ಕೆಟ್ಟ ಸೀಡ್ಸ್. ಒಂದೂ ಹುಟ್ಟಿಲ್ಲ. ಆದುದರಿಂದ ತೊಗರಿಯಲ್ಲಿ ಬೇರೆ ವಿಧಾನದಲ್ಲಿ ಉತ್ತಮವಾದ ಬೀಜಗಳನ್ನು ಮಾಡಿ ಡ್ರೈ ಫಾರ್ಮಿಂಗ್‌ನಲ್ಲಿ ಆಸಕ್ತಿವಹಿಸುವಂತೆ ತಮ್ಮ ಅಧಿಕಾರವರ್ಗದವರಿಗೆ ವಿವೇಕ ಹೇಳಿ ಹೆಚ್ಚಾಗಿ ಅನುಕೂಲವಾಗುವಂತೆ ಮಾಡಿಕೊಡಬೇಕು. 99 ಪರ್ಸೆಂಟ್ ಡ್ರೈ ಏರಿಯಾ ಇದೆ. ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುವಂತೆ ಮಾಡಬೇಕು. ಬಜೆಟ್‌ನಲ್ಲಿ ಇದಕ್ಕೆ ಹೆಚ್ಚು ಅವಕಾಶ ಕಲ್ಪಿಸಬೇಕು. ಡ್ರೈಫಾರ್ಮಿಂಗ್‌ಗೆ ಹಣ ಕೊಡುವುದಿಲ್ಲ ಎಂದು ಹೇಳುವ

ದಿಲ್ಲ, ಕೊಡುತ್ತಾರೆ,ಆದರೆ ಅಧಿಕಾರಿಗಳಿಗೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಹೊಸಹೊಸದಾಗಿ ಹತ್ತಿಯಲ್ಲಿ ಕಂಡುಹಿಡಿದಿದ್ದೀರಿ. ರಾಗಿಯಲ್ಲಿ ಕಂಡುಹಿಡಿದಿದ್ದೀರಿ ಅದೇ ರೀತಿ ಒಣ ಬೇಸಾಯದಲ್ಲೂ ಕೂಡ ಹೆಚ್ಚು ಉತ್ಪತ್ತಿಯಾಗುವಂತೆ ವ್ಯವಸ್ಥೆ ಮಾಡಬೇಕು. ಇವತ್ತು ಮಾನ್ಯ ಚಿಕ್ಕೇಗೌಡರು ಅವರ ಒಂದು ಅನುಭವವನ್ನು ಕಾರ್ಯರೂಪಕ್ಕೆ ತರಬೇಕು. ಈಅಸೆಂಬ್ಲಿಯಲ್ಲಿ ಇರತಕ್ಕ ಎಲ್ಲ ಮೆಂಬರ್‌ಗಳಿಗಿಂತಲೂ ಅವರು ಹೆಚ್ಚು ವ್ಯವಸಾಯ ಮಾಡಿದ್ದಾರೆ ಮತ್ತು ಅದರಲ್ಲಿ ಹೆಚ್ಚಿನ ಅನುಭವವನ್ನು ಹೊಂದಿದ್ದಾರೆ. ಅವರು ಹೇಳುವುದಿಲ್ಲ ಅಷ್ಟೆ, ಹೇಳಿದರೆ ಎಲ್ಲಿ ನನಗೆ ತೊಂದರೆ ಬರುತ್ತದೋ ಎನ್ನುವ ಅನುಮಾನ ಅವರಿಗೆ ಇದೆ. ನನ್ನ ಕೈಯಲ್ಲಿ ಆಗುವುದನ್ನು ಹೇಳಬೇಕು, ಆಗದ್ದನ್ನು ಹೇಳಬಾರದು ಎಂದು ಅವರಿಗೆ ಇದೆ. ಅವರ ಜೊತೆಯಲ್ಲಿ ಹಲವಾರು ಸಾರಿ ಚರ್ಚೆಮಾಡಿದಾಗ ನನಗೆ ಯಾವುದು ಸಾಧ್ಯವಿರುತ್ತದೋ ಅದನ್ನು ಮಾಡಿ ತೋರಿಸಬೇಕು, ಸುಮ್ಮನೆ ಹೇಳುತ್ತಾ ಹೋದರೆ ಏನೂ ಪ್ರಯೋಜನವಿಲ್ಲ ಎಂದು ಹೇಳಿದರು. ಇದರ ಬಗ್ಗೆ ಅವರು ಸ್ವಲ್ಪ ಮಟ್ಟಿಗೆ ವ್ಯವಸ್ಥೆ ಮಾಡಿಕೊಡಬೇಕು.

ಕಡೆಯದಾಗಿ ಉತ್ತಮವಾದ ಹಸುಗಳ ತಳಿಯನ್ನು ಮಾಡಿದ್ದಾರೆ.ಅದರಲ್ಲಿ 25ಪರ್ಸೆಂಟ್ ಹಸುಗಳಿಗೆ ರೋಗ ಇದೆ. ಯಾವುದೆಂದರೆ ಕ್ಷಯ ಕ್ಯಾನ್ಸರ್ ಮುಂತಾದ ರೋಗಗಳು ಇದೆ. ಆದುದರಿಂದ ಪ್ರತಿಯೊಂದು ಅನಿಮಲನ್ನು ಟೆಸ್ಟ್ ಮಾಡಿ,ಅದರ ಹಾಲನ್ನು ಉಪಯೋಗಿಸತಕ್ಕ ವ್ಯವಸ್ಥೆ ಮಾಡಬೇಕು.ಕೆಲವು ಹಸುಗಳಿಗೆ ಗರ್ಭನಿಲ್ಲುವುದಿಲ್ಲ, ಕರು ಹಾಕುವುದಿಲ್ಲ, ಅವನ್ನು ದೇವರಿಗೆ ಹರಕೆ ಕಟ್ಟಿ ಕಟ್ಟುತ್ತಾರೆ. ಅಂತಹವುಗಳನ್ನು ತೆಗೆಸಬೇಕು ನಾನು ಆನಂದಕ್ಕೆ ಹೋಗಿದ್ದಾಗ ಅಲ್ಲಿ ವರ್ಷಕ್ಕೊಂದು ಸಲ ಪರೀಕ್ಷೆಮಾಡಿ ಇಂಥಾದನ್ನು ತೆಗೆದು ಹಾಕತಕ್ಕ ಕಲ್ಲಿಂಗನ್ನು ಮಾಡುತ್ತಾರೆ ಇದರ ಸ್ಟ್ಯಾಟಿಸ್ಟಿಕ್‌ನ್ನು ನಾನು ಕಲೆಕ್ಟ್ ಮಾಡಿದ್ದೇನೆ, ಬುಚರ್ ಷಾಪಿಗೆ 10 ಎಮ್ಮೆಗಳನ್ನಾದರೂ ಅಲ್ಲಿ ಕಳಿಸುತ್ತಾರೆ, ನಮ್ಮಲ್ಲಿ ಒಂದು ಹಸುವನ್ನೂ ಕಳಿಸುವುದಿಲ್ಲ. ಬುಚರ್‌ಷಾಪ್ ಕೆಟ್ಟದ್ದೇನೂ ಅಲ್ಲ. ಎಂದು ಹಾಲು ಕಡಿಮೆಯಾಗುತ್ತದೋ, ಎಂದು ರೋಗ ಬರುತ ದೋ ರೋಗಬರಬಹದು ಎಂಬ ಚಿಹ್ನೆ ಇರುತ್ತದೋ ಆಗ ಕಿಲ್ಲಿಂಗ್‌ಮಾಡಿ ಕಡಿಮೆಮಾಡುತ್ತಾರೆ. ಮೆಂಟನನ್ಸ್ ಚಾರ್ಜಸ್ಸನ್ನು ರೈತರ ಮೇಲೆ ಹಾಕುವುದನ್ನು ಕಡಿಮೆ ಮಾಡಬೇಕು ಬಹು ಮುಖ್ಯವಾಗಿ, ಹಸುವಿನ ಹಾಲಿನಲ್ಲಿ ಇರತಕ್ಕ ಫುಡ್ ಕಂಟೆಂಟ್ಸ್‌ಗೆ ಒಂದಕ್ಕೆರಡರಷ್ಟು ಬೆಲೆ ಬರುತ್ತದೆ. ನಾನು ಸಾಧಾರಣವಾಗಿ ಹೇಳುವುದಾದರೆ ಒಂದು ಕೆ ಜಿ. ಹಾಲಿಗೆ 6ರೂಪಾಯಿ ಬೆಲೆ ಬಂದಿರತಕ್ಕ ಉದಾಹರಣೆ ನಮ್ಮ ರಾಜ್ಯದಲ್ಲಿದೆ. ಮತ್ತು ಹಸುವಿನ ಹಾಲನ್ನು ಮತ್ತು ಎಮ್ಮೆ ಹಾಲನ್ನು—ಎರಡನ್ನೂ ಸೇರಿಸಿ ಮಾರಿದರೆ ಕೆ. ಜಿ ಗೆ ಎರಡು ರೂಪಾಯಿ ಸಿಗುತ್ತದೆ ಮಾನ್ಯ ಚಿಕ್ಕೇಗೌಡರು ಒಳ್ಳೆಯ ಎಮ್ಮೆಗಳನ್ನು ತರಿಸಿ ಇಟ್ಟು, ನಮ್ಮ ಎಮ್ಮೆಗಳಿಗೆ ಕ್ರಾಸ್ ಮಾಡಿಸಿದ್ದೇ ಆದರೆ ಉತ್ತಮ ತಳಿ ಬಂದರೆ ಅನುಕೂಲವಾಗುತ್ತದೆ. ಧಾರವಾಡದಲ್ಲಿ ಮೆಹಾಸೀನ್ ಜಾತಿ ಎಮ್ಮೆಯನ್ನು ಕ್ರಾಸ್ ಮಾಡಿದ್ದಾರೆ 15 ಕೆ. ಜಿ. ಅವರಿಗೆ ಹಾಲನ್ನು ಕೊಡುವ ಹಾಗೆ ಮಾಡಿದ್ದಾರೆ. ಅದೇ ರೀತಿ ನಮ್ಮವರಿಗೂ ಅವಕಾಶ ಕಲ್ಪಿಸಿಕೊಡಿ. ಇಲ್ಲಿರತಕ್ಕ ಎಮ್ಮೆಗಳಿಗೂ ಧಾರವಾರದಲ್ಲಿರತಕ್ಕ ಎಮ್ಮೆಗಳಿಗೂ ಸ್ವಲ್ಪ ವ್ಯತ್ಯಾಸ ಇದೆ. ಅಲ್ಲಿರುವ ಹಾಗೆ ನಾವು ಮಾಡುವುದಾದರೆ ಇನ್ನೂ ಚೆನ್ನಾಗಿ ಮಾಡಬಹುದು. ಆಮೇಲೆ ಹಾಲಿನ ಡೈರಿಯನ್ನು ಉತ್ತಮಮಾಡಬೇಕು ಎಂದು ಬಹಳ ಶ್ರಮ ಪಡುತ್ತಿದ್ದೀರಿ. ಪ್ರತಿಯೊಂದು ತಾಲ್ಲೂಕಿನಲ್ಲೂ ಇದರ ಒಂದು ಸೌಲಭ್ಯ ಸಿಗಬೇಕು ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಂಪೂರ್ಣವಾಗಿ ಏರ್ಪಾಟು ಮಾಡಿದರೆ ತುಂಬ ಅನುಕೂಲವಾಗುತ್ತದೆ ಈಗ ಬೆಂಗಳೂರು ಡೈರಿಗೆ 15 ಲಕ್ಷ ಲೀಟರ್ಸ್ ಹಾಲು ಏನು ಕೊಡುತ್ತಿದ್ದಾರೆ. ಕೋಲಾರ: ತುಮಕೂರು, ಬೆಂಗಳೂರು—ಈ ಪ್ರದೇಶದಿಂದ ಬರತಕ್ಕ ಹಾಲೇ ಸಾಕು. ಬೆಂಗಳೂರು ಡೈರಿಗೆ ಸಪ್ಲೈ ಮಾಡುವುದಕ್ಕೆ ಮುಂದೆ ಹಾಲಿಗೆ ನೀರನ್ನು ಬೆರೆಸಿ ಕುಡಿಯುವ ಕಾಲ ಬರಬಾರದು. ಹಾಲು ಗಟ್ಟಿ ಎಂದು. ನೀರನ್ನು ಬೆರಸಿ ಕುಡಿಯುವ ಕಾಲ ಬರಬಹುದು ಡೈರಿ ಟ್ರಾನ್ಸ್‌ಪೋರ್ಟ್ ಬಗ್ಗೆ ಹೇಳುವುದಾದರೆ, ಇದರಲ್ಲಿ ಕೆಲವು ತೊಂದರೆಗಳಿವೆ ಬಸ್‌ಗಳನ್ನು ಲಾರಿಗಳನ್ನು ಓಡಿಸುವಾಗ ಹಗಲು ರಾತ್ರಿ ಕೂಡ ಓಡಿಸಬೇಕು ಬಿಸಿಲು ಕಾಲದಲ್ಲಿ ಸ್ವಲ್ಪ ತೊಂದರೆಯಾಗುತ್ತದೆ, ಮಾನ್ಯ ಸಚಿವರು ಈ ಎಲ್ಲಾ ವಿಷಯಗಳ ಕಡೆ

ಅನುಕೂಲವಾಗುವಂತೆ ಮನಸ್ಸು ಮಾಡಿದರೆ, ಒಳ್ಳೆಯ ಸಾಧನೆಯನ್ನು ಸಾಧಿಸಬಹುದು ಎಲ್ಲರೂ ತಮ್ಮನ್ನು ದೇವರಂತೆ ನೆನಸಿಕೊಳ್ಳುತ್ತಾರೆ, ನಮ್ಮಲ್ಲಿ ಕೆಲವು ಹಸುಗಳಿವೆ, ಅವು ಒಂದು ದಿವಸಕ್ಕೆ 14 ಲೀಟರ್ ಹಾಲನ್ನು ಕೊಡುತ್ತವೆ.

ಇದು ಹೇಗೆ ಬಂತು ಎಂದು ನಾನು ಅವರನ್ನು ಕೇಳಿದೆ. ಅಕಸ್ಮಾತ್ ಬಂದಿದೆ ಮಾನ್ಯ ಚಿಕ್ಕೇಗೌಡರು ಮಾತನಾಡತಕ್ಕವರು ಎಂದು ಅವರು ತಿಳಿದುಕೊಂಡಿದ್ದಾರೆ. ಸಾರ್ವಜನಿಕರಿಗೆ ಇದು ಅರ್ಥವಾಗಬೇಕು, ಇದು ಅವರೊಬ್ಬರಿಗೆ ಅನುಕೂಲವಾದರೆ ಸಾಲದು ಎಲ್ಲರಿಗೂ ಅನುಕೂಲವಾಗಬೇಕು ಎಂದು ನಾನು ಹೇಳುತ್ತೇನೆ. ಬೆಂಗಳೂರಿನಲ್ಲಿ ಸುಮಾರು 24 ಡೈರಿಗಳು ಇವೆ ನಾನು ಒಂದು ವರ್ಷದಿಂದ ಇವರೆಲ್ಲರ ಮೇಲೆ ಒಂದು ಕಂಟ್ರೋಲ್ ಇಡಿ ಎಂದು ಕೇಳಿಕೊಳ್ಳುತ್ತಿದ್ದೇನೆ, ಹಾಲಿಗೆ ನೀರು ಹಾಕಿ ಕೊಡುತ್ತಾರೆ, ಎಮ್ಮೆ ಹಾಲು ಹಸುವಿನ ಹಾಲು ಬೆರಸಿ ಕೊಡುತ್ತಾರೆ, ಪೇಕೆ ಹಾಲು ಕೊಡುತ್ತಾರೆ, ಇವರ ಮೇಲೆ ಕಂಟ್ರೋಲ್ ಮಾಡಲಿಕ್ಕಾಗುವುದಿಲ್ಲವೇ ? ರೈತರಿಗೆ ಇದ್ದ ಭೂಮಿಯ ಮೇಲೆ ಕಂಟ್ರೋಲ್ ಮಾಡಿದ್ದೀರಿ, ಅರ್ಬನ್ ಪ್ರಾಪರ್ಟಿ ಮೇಲೆ ಕಂಟ್ರೋಲ್ ಮಾಡಿದ್ದೀರಿ, ಮನೆಯಲ್ಲಿದ್ದವರಿಗೆ ಮನೆ ಎಂದು ಮಾಡಿದರೂ ನನಗೆ ಸಂತೋಷ. ಆದರೆ ಹಾಲಿಗೆ ನೀರಿಕೆ ಮಾಡತಕ್ಕವರ ಮೇಲೆ ನೀವು ಏಕೆ ಕಂಟ್ರೋಲ್ ಮಾಡಲಿಲ್ಲವೋ ? ಇಂತಹವರನ್ನು ಹಿಡಿದು ಸ್ವಲ್ಪ ತಪಬಂದಿಗೆ ತೆಗೆದುಕೊಂಡು ಬನ್ನಿ ಎಂದು ನಾನು ಹೇಳುತ್ತೇನೆ ಇದರಿಂದ ಕ್ವಾಲಿಟಿ ಕಂಟ್ರೋಲ್ ಮಾಡಿದಹಾಗೆ ಆಗುತ್ತದೆ. ಕ್ವಾಲಿಟಿ ಕಂಟ್ರೋಲ್‌ಗೋಸ್ಕರ ನೀವು ಒಂದು ಕಾನೂನು ಮಾಡಿದರೂ ಸರಿಯಾಗಿಲ್ಲ. ಇಲ್ಲವೇ ಹೋದರೆ ಕ್ವಾಲಿಟಿ ಕಂಟ್ರೋಲ್ ಅಥಾರಿಟಿ ಎಂದು ಮಾಡಿ, ಅವರನ್ನಾದರೂ ದಿನೇ ದಿನೇ ನೋಡಿಕೊಂಡು ಬರುವ ಹಾಗೆ ಮಾಡಬೇಕು. ಡೈರಿಗೆ ಹಾಲನ್ನು ಸಪ್ಲೈ ಮಾಡತಕ್ಕ ರೈತರು ಇಷ್ಟೇ ಮಾಡಬೇಕು ಎಂದು ಮಾಡಬೇಡಿ, ರೈತ ತಾನು ತಿಂದು, ಮಿಕ್ಕದ್ದನ್ನು ಕೊಟ್ಟರೂ ಅನುಕೂಲವಾಗುತ್ತದೆ. ಇಲ್ಲಿ ಎಲ್ಲರೂ ರೈತನ ಮಕ್ಕಳು ಎಂದು ಹೇಳಿಕೊಳ್ಳುತ್ತಾರೆ ಯಾರು ತನಗೂ ಇಲ್ಲದೆ ಎಲ್ಲವನ್ನೂ ಬೇರೆಯವರಿಗೆ ಕೊಟ್ಟು ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ಹೊಲದಲ್ಲಿ ಕೆಲಸ ಮಾಡುತ್ತಾರೋ ಅವರೇ ರೈತರ ಮಕ್ಕಳು. ಇವರಿಗೆ ಅನುಕೂಲ ಮಾಡುವುದನ್ನು ಬಿಟ್ಟು ತಿಂಗಳ ಸಂಬಳ ತೆಗೆದುಕೊಳ್ಳುವವರಿಗೆ ಡಿ.ಎ. ಜಾಸ್ತಿ ಮಾಡಿದ್ದೀರಿ. ಇವರಿಗೂ ಜಾಸ್ತಿ ಮಾಡಿ ಆದರೆ ರೈತನಿಗೆ ತಾನು ಉತ್ಪತ್ತಿ ಮಾಡತಕ್ಕ ವಸ್ತುಗಳ ಬೆಲೆ ಇಳಿದಾಗ ಅವನಿಗೂ ಸ್ವಲ್ಪ ಸಹಾಯ ಮಾಡಬೇಕು. ಡೈರಿಗೆ ಹಾಲನ್ನು ಹಾಕುವುದನ್ನು ನಾನು ಎನ್‌ಕರೇಜ್ ಮಾಡಬೇಕು ಎಂದು ಹೇಳುತ್ತೇನೆ. ಆದರೆ ನೇರವಾಗಿ ತಂದುಕೊಟ್ಟರೆ ಹತ್ತು ಪೈಸೆ ಜಾಸ್ತಿ ಕೊಡುತ್ತಾರೆ. ಈ ರೀತಿಯಾಗಿ ಡೈರಿಗೆ ಸುಮಾರು 20 ಸಾವಿರ ಲೀಟರ್ ಹಾಲು ಬರಬೇಕಾಗುತ್ತದೆ. ಆದ್ದರಿಂದ ಇದನ್ನು ತಾವು ದಯವಿಟ್ಟು ಮಾಡಬೇಡಿ. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎನ್ನುವ ಹಾಗೆ ಮಾಡಬೇಡಿ ತಾವು ಈ ರೀತಿ ಮಾಡಿದರೆ ರೈತ ದುರ್ಬಲನಾಗಿ, ಅವನ ಆರ್ಥಿಕ ಪರಿಸ್ಥಿತಿ ತುಂಬಾ ತೊಂದರೆಯಾಗುತ್ತದೆ. ತಾವು ಒಂದು ಟಾರ್ಗೆಟ್ ಅನ್ನು ಫಿಕ್ಸ್ ಮಾಡಿ, ರೈತ ಇಷ್ಟು ಹಾಲನ್ನು ಡೈರಿಗೆ ಕೊಡಬೇಕು ಎಂದು ಮಾಡಿದ್ದೀರಿ. ಅವನ ದಿನದ ಉತ್ಪತ್ತಿ ಹದಿನೈದು ಲೀಟರ್ ಹಾಲು ಆದರೆ ನಿಮಗೆ ಹತ್ತು ಲೀಟರ್ ಹಾಲು ಕೊಟ್ಟು ಇನ್ನು ಉಳಿದ ಐದು ಲೀಟರ್ ಹಾಲನ್ನು ಅವನು ಯಾರಿಗೆ ಕೊಡಬೇಕು ? ಈ ವರ್ಷವೂ ಇಂಥ ಒಂದು ಕಂಡೀಷನ್ ಅನ್ನು ಇಟ್ಟಿದ್ದೀರಿ. ಈಗಲಾದರೂ ಇದನ್ನು ತೆಗೆದುಹಾಕಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದನ್ನು ತೆಗೆದು ಯಾವ ಯಾವ ರೈತ ತನಗೆ ಎಷ್ಟೆಷ್ಟು ಶಕ್ತಿ ಇದೆಯೋ ಅಷ್ಟು ಹಾಲನ್ನು ಉತ್ಪತ್ತಿ ಮಾಡಿ ತನಗೆ ಬೇಕಾದಷ್ಟು ಇಟ್ಟುಕೊಂಡು, ಮಿಕ್ಕಿದ್ದನ್ನು ಕೊಟ್ಟರೆ ಡೈರಿಗೆ ಕೊಟ್ಟರೆ ಸಂತೋಷ, ಇದನ್ನು ನೀವು ಮಾಡಿಕೊಡುವ ಇಂಥ ಒಂದು ವ್ಯವಸ್ಥೆಯನ್ನು ಜಾರಿಯಲ್ಲಿ ತರಬೇಕು. ಸದಸ್ಯರಾದವರಿಗೆ ಹತ್ತು ಪೈಸೆ ಜಾಸ್ತಿ ಕೊಡುವುದು, ಸದಸ್ಯರಲ್ಲದವರಿಗೆ ಹತ್ತು ಪೈಸೆ ಕಡಿಮೆ ಕೊಡುವುದು, ಇದನ್ನು ತಾವು ನಿಲ್ಲಿಸಬೇಕು. ಡೈರಿಗೆ ಲಾಭ ಬರುತ್ತದೆ. ಇದು ಸತ್ಯವಾದ ಮಾತು. ಆದರೆ ಈಗಿರುವ ಜನರು ಡೈರಿಯಲ್ಲಿರುವವರಿಗೆ ಡೈರಿಗೆ ಲಾಭ ಬರುವುದಿಲ್ಲ ಲಾಭ ಬಂದರೂ ಕೂಡ ಅಪ್ರೂವ್ಡ್ ಲಾಸ್ ಇರುತ್ತದೆ. ಇದನ್ನು ತಾವು ಇನ್ನೂ ತೀರ್ಮಾನ ಮಾಡುವುದಕ್ಕೆ ಆಗಿಲ್ಲ. ಅಲ್ಲಿ ದಿನಕ್ಕೆ 12 ಸಾವಿರ ಬಾಟಲುಗಳು ಒಡೆದು ಹೋಗುತ್ತವೆ. ಇದರಿಂದ ದಿನಕ್ಕೆ 12 ಸಾವಿರ ರೂಪಾಯಿ ಲಾಸ್ ಅಲ್ಲದಿದ್ದರೂ 5 ಸಾವಿರ ರೂಪಾಯಿಗಳ ಲಾಸ್ ಖಂಡಿತವಾಗಿಯೂ ಬರುತ್ತದೆ.

ಇದರಲ್ಲಿ ಲಾಭವನ್ನು ತಾವು ಹೇಗೆ ಸಂಪಾದನೆ ಮಾಡುತ್ತೀರಿ ? ಲಾಭವನ್ನು ಸಂಪಾದಿಸುವುದು ಕಷ್ಟವಾಗುತ್ತದೆ ಹೆಚ್ಚಿನ ಹಾಲು ಬಂದಾಗ ಹಾಲುಪುಡಿ ಮಾಡುತ್ತೇವೆಂದು ಹೇಳುತ್ತೀರಿ. ದಿವಂಗತ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಇದನ್ನು ಉದ್ಘಾಟನೆ ಮಾಡಿದಾಗ ಅವರ ಹತ್ತಿರ ನಾನು ಕುಳಿತ್ತಿದ್ದೆ ಅವರು ಹೇಳಿದರು, ಇದನ್ನು ಮಾಡುವುದರಿಂದ ನಾಗರೀಕರಿಗೆ ತುಂಬಾ ಸಂತೋಷವಾಗಿದೆ, ನಾಡಿನಲ್ಲಿ ಮೂಲೆ ಮೂಲೆಯಲ್ಲಿ ರೈತನ ಜೇಬಿನಲ್ಲಿ ಮೂರು ಕಾಸು ಒರುವ ಹಾಗೆ ಮಾಡಿರಿ ಎಂದು ಹೇಳಿದರು, ಅದರಂತೆ ನಾನು ಹೇಳುವುದು, ರೈತನಿಗೆ ಬರತಕ್ಕ ಲಾಭವನ್ನು ಮಾತ್ರ ತಪ್ಪಿಸಬಾರದು. ಡೈರಿಗೆ ನಷ್ಟವಾಗುತ್ತದೆಂದು ಉತ್ಪತ್ತಿ ಮಾಡುವವರಿಗೆ ಬೆಲೆಯನ್ನು ಕಡಿಮೆ ಮಾಡಿದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ತಾವು ಇದನ್ನು ವಹಿಸಿಕೊಂಡಮೇಲೆ 30 ಪರ್ಸೆಂಟ್ ಚಾರ್ಜಸ್ ಅನ್ನು ಕಡಿಮೆ ಮಾಡಿದ್ದೀರಿ. ಆದರೆ ಇದು ಸಾಲುವುದಿಲ್ಲ ಇನ್ನೂ ಚೆನ್ನಾಗಿ ಇದರ ವ್ಯವಸ್ಥೆಯನ್ನು ತಾವು ಮಾಡಿದರ ಇದು ಸರಿಹೋಗುತ್ತದೆ ಎಂದು ನನ್ನ ಭಾವನೆ.

ನಿಮ್ಮ ಡೈರಿಯಲ್ಲಿ 2–3 ಜನ ತಜ್ಞರು ಇದ್ದಾರೆ. ಇಲ್ಲಿ ಒಂದು ಮಾರ್ಗವನ್ನು ತಮಗೆ ನಾನು ಹೇಳುತ್ತೇನೆ. ಹಾಲನ್ನು ಟೆಸ್ಟಿಗೆ ಎರಡು ಸಿ. ಸಿ. ತೆಗೆದುಕೊಂಡಾಗ ಒಂದು ಪರ್ಸೆಂಟ್ ದ್ರಾವಕ ಬರುತ್ತದೆ. ಒಂದು ಸಿ ಸಿ ತೆಗೆದುಕೊಂಡರೆ ಒಂದು ಪರ್ಸೆಂಟ್ ದ್ರಾವಕ ಬರುತ್ತದೆ. ಇದರ ಬಗ್ಗೆ ತಾವು ವಿವರವಾಗಿ ಉತ್ತರದಲ್ಲಿ ಹೇಳಬೇಕು. ಇದನ್ನೇ ಮಾಡಿ ಕಡಿಮೆ ಹಾಲನ್ನು ತೆಗೆದುಕೊಂಡರೆ ರೈತನಿಗೆ ಒಂದು ಲೀಟರ್ ಹಾಲಿಗೆ ಐದು ಪೈಸೆ ಕಡಿಮೆಬರುತ್ತದೆ. ದಯಾಮಿಟ್ಟು ಇದನ್ನು ಮಾಡುವುದನ್ನು ನಿಲ್ಲಿಸುವಂತೆ ತಾವು ತಿಳಿಸಬೇಕು. ಇದರಿಂದ ರೈತರ ಶೋಷಣೆಯಾಗುತ್ತದೆ. ನೀವು ಹೇಳಿದಹಾಗೆ ಕೇಳತಕ್ಕವನು ರೈತ. ಈ ಒಂದು ಟೆಕ್ನಿಕಲ್ ಪಾಯಿಂಟಿನಿಂದ ರೈತನಿಗೆ ಲುಕ್ಸಾನು ಮಾಡುವುದನ್ನು ತಪ್ಪಿಸಬೇಕು ಹಾಗೆ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಮಾನ್ಯ ಚಿಕ್ಕೇಗೌಡರು ಹೊಸ ಡೈರಿ ಕಾರ್ಪೊರೇಷನ್ ಮಾಡಿದ ಮೇಲೆ ಸೊಸೈಟಿಗಳಿಗೆ ಎಷ್ಟು ಲಾಭದಾಯಕವಾಗಿದೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ.

ಶ್ರೀ ಎನ್. ಚಿಕ್ಕೇಗೌಡ.—ತಾವು ಹೇಳಿದ ರೀತಿಯಲ್ಲಿ ಹಾಲನ್ನು ಟೆಸ್ಟ್ ಮಾಡತಕ್ಕದ್ದು ಯಾವ ಡೈರಿಯಲ್ಲಿ ?

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಡೈರಿಯಲ್ಲಿ ನಾನು ನೋಡಿದ್ದೇನೆ. ತಜ್ಞರನ್ನೂ ನಾನು ಕೇಳಿದ್ದೇನೆ. ತಾವು ಕೇಳಿದರೆ ಗೊತ್ತಾಗುತ್ತದೆ. ದೊಡ್ಡಬಳ್ಳಾಪುರದ ಒಂದು ಸೊಸೈಟಿಯಲ್ಲಿ ಬರೀ ಸ್ಯಾಂಪಲ್ ಅನ್ನು ಹರಾಜು ಮಾಡಿದ ಮೇಲೆ ದಿನಕ್ಕೆ 40 ರೂಪಾಯಿಗಳ ಲಾಭ ಬಂತು. ಒಂದು ತಿಂಗಳಿಗೆ 1200 ರೂಪಾಯಿಗಳ ಲಾಭ ಆಯಿತು. ಇಲ್ಲಿ ಇವರು ಟೆಸ್ಟ್ ಮಾಡಿದ ಮೇಲೆ ಈ ರೀತಿಯಾಗಿ ಬಂದಂಥ ಲಾಭ ಎಲ್ಲಿಗೆ ಹೋಯಿತೋ, ಗೊತ್ತಿಲ್ಲ ಟೆಸ್ಟ್ ಮಾಡಿ, ಮಿಕ್ಕ ಹಾಲಿನಿಂದ ಸಹಕಾರ ಸಂಘಗಳಿಗೆ 1200 ರೂಪಾಯಿಗಳ ಲಾಭ ತಿಂಗಳಿಗೆ ಬಂತು ಎಂದರೆ ಡೈರಿಗೆ ಎಷ್ಟು ಲಾಭ ಬರಬೇಕು ? ಇಂಥ ಒಂದು ಸರಿಯಾದ ವ್ಯವಸ್ಥೆಯನ್ನು ತಾವು ಮಾಡಬೇಕು. ಇಂಥ ಲಾಭವನ್ನು ಡೈರಿಯು ಪಡೆದರೆ ನಾವೆಲ್ಲರೂ ಸಂತೋಷವನ್ನು ಪಡಬೇಕಾಗುತ್ತದೆ ಉತ್ತಮ ತಳಿಗಳನ್ನು ಕೊಡುವುದು, ಉತ್ತಮ ಹಾಲನ್ನು ಕೊಡುವುದು ಇವು ಮುಖ್ಯವಾದ ಅಂಶಗಳು. ಸರಿಯಾದ ರೀತಿಯಲ್ಲಿ ಎಲ್ಲರಿಗೂ ಉತ್ತಮ ಹಾಲು ಸಿಕ್ಕುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು ಈ ರೀತಿ ವ್ಯವಸ್ಥೆಯಾದರೆ ಡೈರಿಯು ಚೆನ್ನಾಗಿ ನಡೆಯುತ್ತದೆ. ಸ್ವಲ್ಪ ಸ್ವಲ್ಪ ಲಾಭ ಬಂದರೆ, ಹನಿ ಹನಿಗೂಡಿದರೆ ಹಳ್ಳ ಎನ್ನುವ ಹಾಗೆ ಡೈರಿಗೆ ಉತ್ತಮ ಲಾಭವನ್ನು ನೀವು ದೊರಕಿಸಿ ಕೊಡಬಹುದು. ಆದರೆ ಯಾವ ದೃಷ್ಟಿಯಲ್ಲಿಯೂ ತೊಂದರೆಯಾಗಬಾರದು, ಎನ್ನುವುದು ನನ್ನ ಆಶೆ. ಇವತ್ತು ಡೈರಿ ಕಾರ್ಪೊರೇಷನ್‌ನಲ್ಲಿ ಫುಡ್ ಸಪ್ಲೈ ಮಾಡಲಿಕ್ಕೆ ನಿಮ್ಮಲ್ಲಿ ಬೇಕಾದಷ್ಟು ಹಣ ಇದೆ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಕಡೆ ಫುಡ್ ಸಪ್ಲೈ ಫ್ಯಾಕ್ಟರಿಯನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಇವತ್ತು ಬೆಂಗಳೂರಿನಿಂದ ಮಂಡ್ಯಕ್ಕೆ ಜೋಳ, ವೀಟ್ ಬ್ರಾನ್, ತೌಡು ಇಂಥಾ ರಾ ಮೆಟೀರಿಯಲ್ಸ್ ಎಲ್ಲಾ ಹೋಗಿ ಅಲ್ಲಿ ಮಿಕ್ಸ್ ಆಗುತ್ತದೆ. ಅದನ್ನು ಅಲ್ಲಿಂದ ಮತ್ತೆ ಬೆಂಗಳೂರಿಗೆ ತಂದು, ಇಲ್ಲಿಂದ ದೊಡ್ಡಬಳ್ಳಾಪುರಕ್ಕೆ ಹೋಗಬೇಕು, ಮತ್ತೆ ಅಲ್ಲಿಂದ ಇನ್ನಾವುದೋ ಹಳ್ಳಿಗೆ ಹೋಗಬೇಕು ಆಷ್ಟು ಹೊತ್ತಿಗೆ ಎಷ್ಟು ಟ್ರಾನ್ಸ್‌ಪೋರ್ಟೇಷನ್ ಛಾರ್ಜಸ್ ಲೋಡಿಂಗ್ ಅನ್‌ಲೋಡಿಂಗ್ ಛಾರ್ಜಸ್, ಹಾಗೂ ಇತರೇ ಛಾರ್ಜಸ್ ಎಷ್ಟು ಅದರ ಮೇಲೆ

ಬೀಳುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಒಂದು ಜಿಲ್ಲೆಗೆ 5–6 ಫ್ಯಾಕ್ಟರಿಗಳನ್ನು ಇಟ್ಟರೆ ಆಗ ಅಲ್ಲಿ ಸುತ್ತಮುತ್ತ ಅಂದರೆ ಆ ಏರಿಯಾದಲ್ಲಿ ಬೆಳೆದ ಪದಾರ್ಥಗಳನ್ನು ಅಲ್ಲಿಯೇ ತಯಾರು ಮಾಡಿಕೊಟ್ಟರೆ ಆಗ ಜನರಿಗೆ ಬಹಳ ಅನುಕೂಲವಾಗುತ್ತದೆ. ಹೀಗೆ ಮಾಡಿದರೆ ಒಂದು ಹಸುವಿಗೆ 1 ಕೆ. ಜಿ. ಕೊಡುವುದಕ್ಕೆ ಬದಲು 2 ಕೆ. ಜಿ. ಫುಡ್ ಕೊಡಬಹುದು. ಈ ಯೋಚನೆ ನಿಮ್ಮ ಪ್ಲಾನ್‌ನಲ್ಲಿ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ ಆದರೆ ಇದನ್ನು ಜಾರಿಗೆ ತರುವುದರಲ್ಲಿ ಸ್ವಲ್ಪ ನಿಧಾನವಾಗಿದೆ ಆದ್ದರಿಂದ ತಾವು ಈ ಒಂದು ಕಾರ್ಯವನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ತಾವು ನನಗೆ ಬಹಳ ಉದಾರವಾಗಿ ಕಾಲಾವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ನಾನು ಅಭಾರಿಯಾಗಿದ್ದೇನೆ ಇನ್ನು ಕೊನೆಯದಾಗಿ ಹೇಳುವುದಾದರೆ ಆನಂದ್‌ನಲ್ಲಿ ಹಾಲು ಹಂಚಿಕೆಗೆ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ, ಏನೆಂದರೆ ಅಲ್ಲಿ ಒಂದು ಬಾಕ್ಸ್ ಇಟ್ಟಿದ್ದಾರೆ. ಅಂದರೆ ಅದು ಒಂದು ಯಂತ್ರ ನಮಗೆ ಅರ್ಧ ಕೆ.ಜಿ ಏನಾದರೂ ಬೇಕೆಂದು ದುಡ್ಡು ಹಾಕಿದರೆ ಅದು ತಕ್ಷಣ ಅಷ್ಟು ಬರುತ್ತದೆ ಅದೇ ರೀತಿಯಲ್ಲಿ ನೀವೂ ಕೂಡ ವ್ಯವಸ್ಥೆ ಮಾಡಬೇಕು ಇದನ್ನು ನಮ್ಮ ವಿಧಾನ ಸೌಧದ ಪಕ್ಕದಲ್ಲಿಯೋ, ಅಥವಾ ರೇಸ್‌ಕೋರ್ಸ್ ಪಕ್ಕದಲ್ಲಿಯೋ, ಜನತಾ ಬಜಾರ್ ಪಕ್ಕದಲ್ಲಿಯೋ ಅಥವಾ ಇನ್ನೂ ಎಲ್ಲಾದರೂ ಒಂದೊಂದು ಗೊತ್ತಾದ ಸ್ಥಳಗಳಲ್ಲಿ ಇಡಿ. ಇನ್ನು ಈ ಮಿಲ್ಕ್ ಬಾಟಲ್‌ಗಳು ಒಡೆಯುವುದನ್ನು ತಪ್ಪಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಈಗ ಏನು ಮನೆಮನೆಗೂ ಹಾಲನ್ನು ವ್ಯಾನ್‌ಗಳ ಮೂಲಕ ತೆಗೆದುಕೊಂಡು ಹೋಗಿ ಹಂಚಿ ಉಳಿದ ಹಾಲನ್ನು ವಾಪಸ್ಸು ತೆಗೆದುಕೊಂಡು ಹೋಗುವ ಪದ್ಧತಿ ಏನಿದೆ ಅದನ್ನು ತಪ್ಪಿಸುವುದಕ್ಕೋಸ್ಕರವಾಗಿ ಅಲ್ಲಲ್ಲೇ ಕೆಲವು ಸ್ಥಳಗಳಲ್ಲಿ 500 ಬಾಟಲ್‌ಗಳು ಹಿಡಿಯುವಂತಹ ಒಂದೊಂದು ಕೋಲ್ಡ್ ಸ್ಟೋರೇಜ್‌ಗಳನ್ನು ಪ್ರಾರಂಭ ಮಾಡಿದರೆ ಆಗ ಟ್ರಾನ್ಸ್‌ಪೋರ್ಟೇಷನ್ ಛಾರ್ಜ್ ಮತ್ತು ಬಾಟಲ್‌ಗಳು ಒಡೆಯುವುದು ಕಡಿಮೆಯಾಗುತ್ತದೆ. ಆದರೆ ತಾವು ಇದುವರೆಗೂ ಕೂಡ ಒಂದು ಕೋಲ್ಡ್ ಸ್ಟೋರೇಜನ್ನು ಓಪನ್ ಮಾಡಿಲ್ಲ. ಯಾರು ಬಂದರೂ 1 ಲೀಟರ್ ಹಾಲು, 1 ಮೊಟ್ಟೆ ಸಿಕ್ಕುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ತಾವು ಈ ರೀತಿ ವ್ಯವಸ್ಥೆ ಮಾಡಿದರೆ ಸರ್ಕಾರಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ವರಮಾನ ಬರುವುದಕ್ಕೆ ಅವಕಾಶವಾಗುತ್ತದೆಂದು ಹೇಳಬಯಸುತ್ತೇನೆ ರೈತರು ನಿಮ್ಮ ಕಾಲದಲ್ಲಿ ಸುಖವನ್ನು ಅನುಭವಿಸಿದರೆ ನಿಮಗೂ ಒಂದು ಒಳ್ಳೆಯ ಹೆಸರು ಬರುತ್ತದೆಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(MR. DEPUTY SPEAKER : *in the Chair.*)

† ಶ್ರೀ ಎಂ. ನಂಜೇಗೌಡ (ಗಂಡಸಿ) :— ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ಸಭೆಯ ಮುಂದಿಟ್ಟಿರುವ ವ್ಯವಸಾಯ, ತೋಟಗಾರಿಕೆ, ಮತ್ತು ಮೀನುಗಾರಿಕೆ ಇಲಾಖೆಗಳ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚನೆ ಮಾಡುತ್ತಾ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ದೇಶದಲ್ಲಿ ಬೆಳೆ ಬಹಳ ಸಮೃದ್ಧವಾಗಿ ಆಗಿದೆ ಕೊಂಡು ತಿನ್ನುವವರಿಗೆ ಒಂದು ರೀತಿಯ ಸಂತೋಷವನ್ನುಂಟುಮಾಡಿದೆ. ಆದರೆ ಆಹಾರ ಧಾನ್ಯಗಳನ್ನು ಬೆಳೆದು ಮಾರುವ ರೈತನ ಪರಿಸ್ಥಿತಿ ಇವತ್ತಿನ ದಿವಸ ತುಂಬಾ ಚಿಂತಾಜನಕವಾಗಿದೆ. ಇವತ್ತು ರೈತ ಗಾಬರಿಗೊಂಡಿದ್ದಾನೆ. ಇವತ್ತಿನ ಧಾರಣೆಯಲ್ಲಿ ತಾನು ಬೆಳೆದಿರುವ ಬೆಳೆಯನ್ನು ಮಾರಾಟಮಾಡಿ ತಮ್ಮ ಸಂಸಾರವನ್ನು ಯಾವ ರೀತಿಯಲ್ಲಿ ಸಾಕಬೇಕೆಂಬ ಚಿಂತೆ ಇವತ್ತು ರೈತಬಾಂಧವರಲ್ಲಿ ಕಾಡುತ್ತಿದೆ. ಇಷ್ಟೇ ಅಲ್ಲದೆ ರೈತರ ಮೇಲೆ ಹೊಸ ಹೊಸ ರೀತಿಯಲ್ಲಿ ಬೀಳುತ್ತಿರುವ ತೆರಿಗೆಗಳು ಇನ್ನೂ ಜಾಸ್ತಿಯಾಗುತ್ತಿವೆ. ಮತ್ತು ಸಾಲಗಳನ್ನು ತ್ವರಿತವಾಗಿ ವಸೂಲ್ಮಾಡುವ ಹಿನ್ನಲೆಯಲ್ಲಿ ರೈತರಲ್ಲಿದ್ದ ನಿಬಿರವಾದ ಭಾವನೆಗಳು ಇವತ್ತು ದೂರವಾಗುತ್ತಿವೆ. ಆದುದರಿಂದ ರೈತ ಬೆಳೆದ ಬೆಳೆಗಳಿಗೆ ಒಂದು ನಿಗಧಿಯಾದ ಬೆಲೆಯನ್ನು ಕೊಡುವಂತೆ ಸರ್ಕಾರ ಒಂದು ಸೂಕ್ತವಾದ ಯೋಜನೆಯನ್ನು ಕೈಗೊಳ್ಳದಿದ್ದರೆ ಅವನ ಪರಿಸ್ಥಿತಿ ಇನ್ನೂ ಕಠಿಣವಾಗುತ್ತದೆ. ಇವತ್ತಿನ ದಿವಸ ಆಗಿರತಕ್ಕ ಸಮೃದ್ಧಿ ಮುಂದಿನ ಕೆಲವೇ ವರ್ಷಗಳಲ್ಲಿ ಕಡಿಮೆಯಾಗಿ ಮತ್ತೆ ಅಭಾವದ ಪರಿಸ್ಥಿತಿ ಮರುಕಳಿಸಬಹುದೆಂದು ನಾನಾದರೂ ಕೂಡ ಈ ಸಭೆಯ ಮೂಲಕ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಈಗ ರೈತನು ಬೆಳೆಯುವ ಎಲ್ಲಾ ಪದಾರ್ಥಗಳಿಗೂ ಕೂಡ ಉತ್ತಮವಾದ ಧಾರಣೆಯನ್ನು ಕೊಡುವ

ಸಲುವಾಗಿ ಈ ವ್ಯವಸಾಯ ಇಲಾಖೆಯನ್ನು ಪುನರ್ ರಚನೆ ಮಾಡತಕ್ಕಂಥ ಒಂದು ಘಟ್ಟವನ್ನು ಸರ್ಕಾರ ಮುಟ್ಟಿದೆ ಎಂದು ನಾನು ಹೇಳಬಯಸುತ್ತೇನೆ. ಇವತ್ತು ವ್ಯವಸಾಯ ಇಲಾಖೆಯ ಉನ್ನತ ಅಧಿಕಾರಿಗಳು ರಾಜ್ಯಮಟ್ಟದಲ್ಲಿ, ಡಿವಿಜನ್ ಮಟ್ಟದಲ್ಲಿ, ಡಿಸ್ಟ್ರಿಕ್ಟ್ ಮಟ್ಟದಲ್ಲಿ, ಮತ್ತು ಸಬ್ ಡಿವಿಜನ್ ಮಟ್ಟದಲ್ಲಿ ಈ 4 ಹಂತಗಳಲ್ಲಿ ಹಂಚಿಹೋಗಿದ್ದಾರೆ ತಾಲ್ಲೂಕ್ ಮಟ್ಟಗಳಲ್ಲಿ. ಗ್ರಾಮಾಂತರಗಳಲ್ಲಿ ಇರತಕ್ಕ ಹೆಚ್ಚಿನ ರೈತ ಬಾಂಧವರು ಈ ತಜ್ಞರನ್ನು ನೋಡುವುದು ಬಹಳ ಕಷ್ಟವಾಗಿದೆ. ನಾನಾದರೂ ಕೂಡ ಇವತ್ತಿನ ದಿವಸ ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ. ರಾಜ್ಯಮಟ್ಟದಲ್ಲಿರುವ ತಜ್ಞರನ್ನು ನಿಮಗೆ ಬೇಕಾದ ರೀತಿಯಲ್ಲಿ ಇಟ್ಟುಕೊಳ್ಳಿ. ಡಿವಿಜನ್ ಮಟ್ಟದಲ್ಲಿರುವವರನ್ನು ಎಷ್ಟು ಬೇಕೋ ಅಷ್ಟರಲ್ಲಿ ಇಡಿ. ಡಿಸ್ಟ್ರಿಕ್ಟ್ ಮಟ್ಟದಲ್ಲಿರತಕ್ಕ ಅಧಿಕಾರಿಗಳನ್ನು ತಾಲ್ಲೂಕು ಮಟ್ಟಕ್ಕೆ ವಿಸ್ತರಿಸಬೇಕು. ಇದರಲ್ಲಿ ನಿಮ್ಮ ಅಧಿಕಾರಿಗಳು ಇಲಾಖೆಯನ್ನು ಪುನರ್ ರಚನೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ ನಾನು ಈ ವಿಷಯವನ್ನು ಏಕಕ್ಕೆ ಹೇಳುತ್ತಿದ್ದೇನೆ ಎಂದರೆ ಡಿವಿಜನ್ ಮಟ್ಟದಲ್ಲಿರತಕ್ಕಂತ ಅಧಿಕಾರಿಗಳಾಗಲಿ, ಜಿಲ್ಲಾ ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳಾಗಲಿ ವಿಶೇಷ ತಜ್ಞರೇನೂ ಅಲ್ಲ ಎಲ್ಲರೂ ಒಂದೇ ರೀತಿಯ ತಜ್ಞರು. ಗೊಬ್ಬರಕ್ಕೆ ಒಬ್ಬ ತಜ್ಞರು, ಬೀಜಕ್ಕೇ ಒಬ್ಬ ತಜ್ಞರು, ಸಸ್ಯ ಸಂರಕ್ಷಣೆಗೇ ಒಬ್ಬ ತಜ್ಞರು ಎಂದು ನಾನಾ ಹಂತಗಳಲ್ಲಿ ಅಧಿಕಾರಿಗಳನ್ನು ಕೇಂದ್ರೀಕರಿಸುವುದು ಸರಿಯಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ರೈತನಿಗೆ ಇವರ ಸೇವೆ ಸಿಕ್ಕುವಂತೆ ಪುನರ್ ರಚನೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈಗ ಗ್ರಾಮ ಸೇವಕರು ಏನಿದ್ದಾರೆ ಅವರ ಮೇಲೆ ಬಿ.ಡಿ.ಒ. ಅವರ ಹಿಡಿತ ಆಗಲಿ, ವ್ಯವಸಾಯ ಇಲಾಖೆಯ ಅಧಿಕಾರಿಗಳ ಹಿಡಿತವಾಗಲಿ ಇಲ್ಲ. ಗ್ರಾಮಸೇವಕರು ತಮ್ಮದೇ ಆದ ಕಾರುಬಾರಗಳನ್ನು ಮಾಡುತ್ತಿರುವ ಅನೇಕ ದೂರುಗಳು ಬಂದಿವೆ. ಇವತ್ತು ತಾಲ್ಲೂಕು ಮಟ್ಟದಲ್ಲಿ ವ್ಯವಸಾಯ ಇಲಾಖೆಯನ್ನು ಪುನರ್ ರಚನೆ ಮಾಡುವುದರಿಂದ ಗ್ರಾಮಸೇವಕರು ಕೆಲಸ ವಿಸ್ತರಿಸುವುದರಿಂದ ಹಳ್ಳಿಗಳಲ್ಲಿ ಎಲ್ಲ ರೀತಿಯಾದ ಕಾರ್ಯಗಳನ್ನೂ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

3-30 P.M.

ಇನ್ನು ಬೀಜ ಉತ್ಪಾದನೆಯ ವಿಷಯದಲ್ಲಿ ನಡೆಯುತ್ತಾ ಇರತಕ್ಕಂಥ ಕಾರ್ಯಗಳು ಅಷ್ಟು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಹೇಳಬೇಕಾಗಿದೆ. ನಮ್ಮ ಜಿಲ್ಲೆಯ ಕೆಲವು ಸ್ಥಳಗಳಿಗೆ ಬಂದಂಥ ಹೈಬ್ರಿಡ್, ಜವಾರ್ ಇನ್ನಿತರ ಬೀಜಗಳು ಬಹಳಮಟ್ಟಿಗೆ ಉತ್ತಮವಾದ ಬೀಜಗಳಲ್ಲದ ಕಾರಣ ಬಳಕೆಗಾರರಿಂದ ದೂರುಗಳು ಬಂದಿರುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ, ಮಾರಾಟ ಮಾಡತಕ್ಕಂಥ ಏಜೆನ್ಸಿಗಳು ಉತ್ತಮವಾದ ಬೀಜಗಳನ್ನು ಒದಗಿಸುವುದರಲ್ಲಿ ಹೆಚ್ಚಿನ ನಿಗಾವಹಿಸದೆ ಇರುವುದು ಮುಖ್ಯವಾದ ಕಾರಣವಾಗಿರುತ್ತದೆ. ಬೆಳೆಗಳು ಇಳಿಯುತ್ತಾ ಇರತಕ್ಕಂಥ ಸಂದರ್ಭದಲ್ಲಿ ಉತ್ತಮವಾದ ಬೀಜಗಳು ದೊರಕದೆ ಉತ್ಪಾದನೆಯಲ್ಲಿ ಕಡಿಮೆಯಾಗುತ್ತಿದೆ. ಹೆಚ್ಚಿನ ಉತ್ಪಾದನೆಯನ್ನು ಮಾಡುವುದಕ್ಕೆ ರೈತನು ಮುಂದೆ ಬಂದ ಕಾಲದಲ್ಲಿ ಆತನಿಗೆ ಉತ್ತಮವಾದ ಬೀಜಗಳನ್ನು ದೊರಕಿಸದೇ ಹೋದಪಕ್ಷದಲ್ಲಿ ಪರಿಣಾಮ ಕೆಟ್ಟದಾಗುತ್ತದೆ. ಅಲ್ಲದೆ ರೈತರಲ್ಲಿ ಆಸಕ್ತಿಯೂ ಕೂಡ ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆಂದು ತಮ್ಮಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ಹೆಚ್ಚಿನ ಉತ್ಪಾದನೆಯಾಗಬೇಕು ಎನ್ನುವ ಯೋಜನೆ ನಿಮ್ಮಲ್ಲಿ ಇದ್ದಪಕ್ಷದಲ್ಲಿ ಸಾಧ್ಯವಾದಮಟ್ಟಿಗೆ ಜಿಲ್ಲಾ ಮಟ್ಟದಲ್ಲಿಯೇ ಬೀಜಗಳನ್ನು ಉತ್ಪಾದನೆ ಮಾಡತಕ್ಕ ಯೋಜನೆಯನ್ನು ಮಾಡಬೇಕು. ಜಿಲ್ಲಾಮಟ್ಟದಲ್ಲಿ ಉತ್ಪಾದನೆ ಮಾಡತಕ್ಕಂಥ ಕಾಲದಲ್ಲಿ ರೈತನು ಮುಂದೆ ಬಂದರೆ ನೀವು ಯಾವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡುತ್ತೀರೆಂಬುದನ್ನು ಕಣ್ಣಾರೆ ಕಾಣುವ ವಿಷಯ ಇರುತ್ತದೆ. ಬೀಜಗಳನ್ನು ಒಂದು ರೀತಿಯಲ್ಲಿ ಬಳಕೆ ಮಾಡುವ ಅವಕಾಶ ಇಲ್ಲವೆಂದು ಹೇಳುವ ಪರಿಸ್ಥಿತಿ ಬರುತ್ತದೆ. ಹಾಸನದಲ್ಲಿ ಅನೇಕರಿಗೆ ಬೀನಿಸ್ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ಕೊಟ್ಟಿದ್ದೀರಿ. ಕಾರ್ಪೊರೇಷನ್‌ಗೆ ಎಷ್ಟು ಬೀಜದ ಅಗತ್ಯತೆ ಇರುತ್ತದೆ, ಯಾವುದಕ್ಕೆ ಹೆಚ್ಚಿನ ಬೇಡಿಕೆ ಇರುತ್ತದೆ, ಯಾವ ಬೀಜ ರೈತನಿಗೆ ಹೆಚ್ಚಿನ ಅಗತ್ಯ ಇರುತ್ತದೆ ಇದೆಲ್ಲವನ್ನು ಯೋಚನೆ ಮಾಡಿ ಬೀಜಗಳ ಉತ್ಪಾದನೆಯ ಕಡೆಗೆ ಗಮನವನ್ನು ಕೊಡಬೇಕು. ರೈತರಿಗೆ ಅನುಕೂಲವಾಗುವಂತ ಉತ್ತಮವಾದ ಬೀಜಗಳನ್ನು ಉತ್ಪಾದನೆ ಮಾಡಬೇಕು. ಅದುಬಿಟ್ಟು ಇಲಾಖೆಗೆ ನಷ್ಟವಾಗುತ್ತಿದ್ದರೂ ಕೂಡ ಅದರ ಬೇಡಿಕೆ ಕಡಿಮೆಯಾಗುತ್ತಿದ್ದರೂ ಮಾಡುತ್ತಾ ಇರತಕ್ಕಂಥ ವ್ಯವಸ್ಥೆಯನ್ನು ನೋಡಿದರೆ ನನಗಾದರೂ ಅರ್ಥವಾಗುತ್ತಿಲ್ಲ.

ಬೀಜ ಉತ್ಪಾದನೆಯಲ್ಲಿ ತೊಡಗಿದಂತ ಅನೇಕ ಜನರು ಹೇಳುತ್ತಾ ಇದ್ದಾರೆ, ಹೈಬ್ರೀಡ್ ಜೋಳ ವನ್ನು ಬೆಳೆಯುವಂತ ಕಾಲದಲ್ಲಿ ಉತ್ತಮವಾದ ಬೀಜಗಳನ್ನು ದೊರಕಿದ ಕಾರಣ ಬೀಜಗಳನ್ನು ತಿರಸ್ಕರಿಸಿ ದಂತಹ ಸಂದರ್ಭವೂ ಇರುತ್ತದೆ. ತಾಲ್ಲೂಕ್ ಸೊಸೈಟಿಗಳಿಂದ ಕೊಂಡಂಥ ಅಯೋಗ್ಯ ಬೀಜಗಳನ್ನು ರೈತರು ವ್ಯವಸಾಯಕ್ಕೆ ಉಪಯೋಗಿಸಿದ ಕಾರಣದಿಂದ ತೊಂದರೆಗೊಳಗಾದ ರೈತರು ಡೆಪ್ಯುಟಿ ಕಮಿಷನರ್ ರವರಿಗೆ ತಿಳಿಸಿದ್ದರಿಂದ ಡೆಪ್ಯುಟಿ ಕಮಿಷನರ್ ಇನ್ಸ್ಪೆಕ್ಷನ್ ಮಾಡಿದ ಸಂದರ್ಭದಲ್ಲಿ ಬೀಜಗಳನ್ನು ವಾಪಸ್ ತೆಗೆದುಕೊಂಡು ಸಾವಿರಾರು ರೂಪಾಯಿಗಳು ಸೊಸೈಟಿಗೆ ಲುಕ್ಸಾನು ಆಗಿರುತ್ತದೆ. ಆದ್ದರಿಂದ ಬೀಜ ಗಳನ್ನು ಉತ್ಪಾದನೆ ಮಾಡತಕ್ಕಂಥ ವ್ಯಕ್ತಿಗಳ ಹಿನ್ನೆಲೆಯನ್ನು ತಿಳಿದು ಯಾವ್ಯಾವ ಅಗತ್ಯವಿದೆ ಅಂಥ ಬೀಜ ಗಳನ್ನು ಉತ್ಪಾದನೆ ಮಾಡಿ ರೈತರಿಗೆ ಒದಗಿಸತಕ್ಕಂಥ ಪ್ರವೃತ್ತಿ ಅಗತ್ಯವಿದೆಯೆಂದು ಹೇಳಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಗೊಬ್ಬರದ ವಿಚಾರದಲ್ಲಿ ಹೇಳುವುದಾದರೆ ತಮಗೆ ಅಧಿಕಾರ ಬಂದಂಥ ಕಾಲದಲ್ಲಿ ಗೊಬ್ಬರದ ಬೇಡಿಕೆಯು ಬಹಳವಾಗಿ ಇದ್ದು, ರೈತರುಗಳಿಂದ ಅನೇಕವಾದ ದೂರುಗಳನ್ನು ಕೇಳಬೇಕಾದ್ದು ಇದ್ದಿತು ಈ ಪರಿಸ್ಥಿತಿಯನ್ನು ಈವತ್ತಿನ ದಿವಸ ತೊಡೆದಿದ್ದೀರಿ. ರಾಷ್ಟ್ರದಲ್ಲಿ ಯಥೇಚ್ಛವಾಗಿ ಈವತ್ತಿನ ದಿವಸ ಗೊಬ್ಬರವು ದೊರೆಯುತ್ತಿದೆ. ಬೆಲೆಯೂ ಕೂಡ ಸ್ವಲ್ಪಮಟ್ಟಿಗೆ ಇಳಿದಿದ್ದರೂ ಕೂಡ ರೈತರಿಗೆ ಆತಂಕ ಇದ್ದೇ ಇರುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ ರೈತನು ಬೆಳೆಯುತ್ತಾ ಇರತಕ್ಕಂಥ ಬೆಳೆಗಳಿಗೆ ಹೋಲಿಕೆ ಮಾಡಿನೋಡಿದರೆ ಇದು ತೀರ ಕಡಿಮೆಯಾಗುತ್ತದೆಂದು ನನಗನಿಸುತ್ತದೆ. ಆದುದರಿಂದ ಈ ವಿಚಾರದಲ್ಲಿ ಕೆಲವು ಸಲಹೆಗಳನ್ನು ಕೊಡಬೇಕಾಗಿರುತ್ತದೆ. ಹಿಂದೆಯೂ ಕೂಡ ಈ ಬಗ್ಗೆ ಸರ್ಕಾರಕ್ಕೆ ಹೇಳಿರುತ್ತೇನೆ. ಈಗ ತಾವು 10 ತರಹ ಸ್ಟ್ಯಾಂಡರ್ಡ್ ಮಿಶ್ರ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಯೋಚಿಸಿದ್ದೀರಿ. ಇದರ ಅಗತ್ಯತೆ ಅಷ್ಟು ಇಲ್ಲವೆಂದು ನಾನಾದರೂ ಹೇಳುತ್ತೇನೆ. ಗೊಬ್ಬರದ ವಿತರಣೆಗೆ ಅನುಕೂಲವಾಗು ವುದಕ್ಕಾಗಿ ನಾಲ್ಕು-ಐದು ಜೋನಲ್‌ಗಳನ್ನು ಮಾಡಿದ್ದೀರಿ. ಈ ಜೋನಲ್‌ಗಳನ್ನು ಮಾಡಿರುವುದರಿಂದ ಗೊಬ್ಬರದಲ್ಲಿ ದುರ್ಭಿಕ್ಷತೆಯನ್ನು ತಡೆಗಟ್ಟುವುದಕ್ಕೆ ಬಹಳಮಟ್ಟಿಗೆ ಸಹಾಯವಾಗುತ್ತದೆ. ಅದೇ ರೀತಿ ಯಲ್ಲಿ ಬೆಲೆಯಲ್ಲಿಯೂ ಕೂಡ ನಿಗದಿ ಮಾಡಿದರೆ ಪೈಪೋಟಿ ಇಲ್ಲದಂತೆ ಉತ್ತಮ ರೀತಿಯಲ್ಲಿ ಕಡಿಮೆ ಬೆಲೆ ಯಲ್ಲಿ ರೈತರಿಗೆ ದೊರೆಯಲು ಸಹಾಯವಾಗುತ್ತದೆಂದು ತಮ್ಮಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಅಮೃತ್‌ಮಹಲ್ ಕಾವಲ್ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತಾ ಸಾಮಾನ್ಯವಾಗಿ ಸರ್ಕಾರದವರು ಹಳ್ಳಿಕಾರ್ ಮಿಶ್ರತಳಿ ದನಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಂಡು ಸುಮಾರು 80 ಸಾವಿರ ಎಕರೆ ಜಮೀನಿನಲ್ಲಿ ಕೇವಲ 1 ಸಾವಿರ ಜಾನುವಾರನ್ನು ಮಾತ್ರ ಬೆಳೆಸಿದ್ದಾರೆ. ಬಹಳ ವರ್ಷಗಳಿಂದ ಹಾಗೆಯೇ ಜಮೀನು ಉಳಿದಿರುತ್ತದೆ. ಒಂದು ಸಾವಿರದ ಮೇಲೆ ಹೋಗಿಲ್ಲ ಇದು ಏತಕ್ಕೆನ್ನುವುದು ಅರ್ಥವಾಗುತ್ತಾ ಇಲ್ಲ. ಸನ್ಮಾನ್ಯ ಮಂತ್ರಿಗಳಿಗೆ ಈ ಹಳ್ಳಿಕಾರ್ ದನಗಳ ವಿಚಾರದಲ್ಲಿ ಅಷ್ಟು ಆಸಕ್ತಿ ಇಲ್ಲವೆಂದು ಕಾಣುತ್ತದೆ. ಈ ತಳಿಗಳಿಗೆ ಜನಗಳಿಂದ ವಿಶೇಷವಾದ ಬೇಡಿಕೆ ಇದ್ದರೂ ಕೂಡ ಇದರ ಬಗ್ಗೆ ಆಸಕ್ತಿಯನ್ನು ವಹಿಸದೇ ಇದನ್ನು ಕಡೆಗಣಿಸುವುದು ನಿಜವಾಗಿಯೂ ಕೂಡ ವಿಷಾದಕರವಾಗಿರುತ್ತದೆ. ವಿದೇಶದಿಂದ ಬಂದಂಥ ಕೃಷಿಯ ತಜ್ಞರು ಈ ತಳಿಗಳನ್ನು ನೋಡಿ ಬಹಳವಾಗಿ ಸಂತೋಷಪಟ್ಟಿದ್ದರು ಅಷ್ಟೇ ಅಲ್ಲದೆ ಈ ದನಗಳನ್ನು ಪೋಷಿಸತಕ್ಕ ರೀತಿನೀತಿಗಳ ಬಗ್ಗೆ ಬಹಳವಾಗಿ ಬೇಜಾರನ್ನು ವ್ಯಕ್ತಪಡಿಸಿ ದ್ದಾರೆ. ಆದ್ದರಿಂದ ಈ ಅಮೃತ್‌ಮಹಲ್ ತಳಿಗಳ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸ ಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದೇಶದಲ್ಲಿ ಈವತ್ತಿನ ದಿವಸ ಬಾಂಡೆಡ್ ಲೇಬರ್ ಪರಿಸ್ಥಿತಿಯನ್ನು ತೆಗೆದುಹಾಕಿದ್ದೀರಿ. ಅಮೃತಮಹಲ್ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳು, ಕಾವಲುಗಾರರು ಏನು ಇದ್ದಾರೆ, ಸರ್ಕಾರ ಸೇವಕರು ಏನು ಇದ್ದಾರೆ ಅವರನ್ನು ಬಾಂಡೆಡ್ ಲೇಬರ್ ರೀತಿಯಲ್ಲಿ ದುಡಿಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ದೃಷ್ಟಿ ಬಿದ್ದಿಲ್ಲವೆಂದು ನಾನಾದರೂ ಕೂಡ ಈವತ್ತಿನ ದಿವಸ ಹೇಳಬೇಕಾಗಿದೆ. ವರ್ಷದಲ್ಲಿ 360 ದಿವಸ ಕಾವಲಿನ ಸಂರಕ್ಷಣೆಯನ್ನು ಮಾಡುತ್ತಿರ ತಕ್ಕಂಥ ಜನರು ಜೀವ [illegible] ಹಿಡಿದುಕೊಂಡು ಕೆಲಸವನ್ನು ಮಾಡುತ್ತಿರುತ್ತಾರೆ. ಈಗತಾನೆ ಬದಲಾವಣೆಯಾಗಿರತಕ್ಕ ಪರಿಸ್ಥಿತಿಯಲ್ಲಿ ಸರ್ಕಾರದ ಇವರ ಹಿನ್ನೆಲೆಯನ್ನು ಯೋಚನೆ ಮಾಡಬೇಕು. ಬಾಂಡೆಡ ಲೇಬರ್ ಪರಿಸ್ಥಿತಿಯಲ್ಲಿರತಕ್ಕ ಕಾವಲುಗಾರರ ಒಂದು ಮಟ್ಟವನ್ನು ಸುಧಾರಿಸತಕ್ಕ ರೀತಿಯಲ್ಲಿ ಬದಲಾವಣೆಯನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಾವಿರಾರು ಜನರು ಕೆಲಸ ಮಾಡತಕ್ಕ ಇರತಕ್ಕಂಥ ಕಾವಲ್‌ಗಳನ್ನು ರಕ್ಷಿಸಲು ಇಲಾಖೆಯವರು ವಹಿಸಿಕೊಂಡಮೇಲೆ ಕೆಲಸಗಳನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದಿರುತ್ತದೆ. ಯಾವ ಒಬ್ಬ ಕಾವಲುಗಾರನು ಉಳುಮೆ ಮಾಡುತ್ತಿದ್ದಾನೆ

ಉಳುಮೆ ಮಾಡುತ್ತಾ ಇರತಕ್ಕಂಥ ಪ್ರದೇಶದಲ್ಲಿ ಕನಿಷ್ಟಪಕ್ಷ ೫ ಎಕರೆ ಜಮೀನನ್ನು ಕಾಯಮ್ ಆಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಹಳ್ಳಿಕಾರ್ ದನಗಳ ಒಂದು ಫಾರಂ ಮಾಡಬೇಕೆಂದು ನಾನು ವರ್ಷೇವರ್ಷೇ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಆದರೆ ಹಳ್ಳಿಕಾರ್ ದನಗಳ ಫಾರಂ ಮಾಡುವ ಬಗ್ಗೆ ತಾವು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಈ ಲೋಕಪ್ರಸಿದ್ಧವಾದ ಹಳ್ಳಿಕಾರ್ ದನಗಳನ್ನು ನಮ್ಮ ಸರ್ಕಾರದವರು ಬಹುಶಃ ಹೆಚ್ಚಿನ ಮುತುವರ್ಜಿ ವಹಿಸಿ ಕಾಪಾಡತಕ್ಕಂಥ ಮನಸ್ಸು ಮಾಡದೇ ಇದ್ದರೆ ಈ ತಳಿಗಳು ನಾಶವಾಗಿ ಹೋಗುತ್ತವೆ. ಈಗ ಇದಕ್ಕಾಗಿ ಕೊಡುತ್ತಿರತಕ್ಕಂಥ ಪ್ರೋತ್ಸಾಹದ ಹಿನ್ನೆಲೆಯಲ್ಲಿ ಅಮೃತಮಹಲ್‌ನಲ್ಲಿ ಹಳ್ಳಿಕಾರ್ ದನಗಳನ್ನು ಸಂಪೂರ್ಣವಾಗಿ ನಾವು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದೇವೆ. ಆದ್ದರಿಂದ ತಾವು ಕೂಡಲೇ ತುಮಕೂರು ಮತ್ತು ಹಾಸನ ವಿಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇವತ್ತಿನ ದಿವಸ ಇರುವ ಕಾವಲುಗಳನ್ನು ಉಪಯೋಗ ಮಾಡಿಕೊಂಡು ಹಳ್ಳಿಕಾರ್ ತಳಿಗಳ ಒಂದು ಫಾರಂನ್ನು ತೆರೆಯಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಮನವಿಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲದೇ ಇವತ್ತಿನ ದಿವಸ ಕುರಿ ಫಾರಂನಲ್ಲಿ ತೆಗೆದುಕೊಂಡಿರತಕ್ಕ ಇತಿಹಾಸ ಪ್ರಸಿದ್ಧವಾದ ಕುರಿಗಳು ಏನಿದೆ ಅವುಗಳನ್ನು ಅತ್ಯಂತ ವಿಸ್ತಾರವಾದ ಕಾವಲಿನಲ್ಲಿ ಸಾಕುವುದನ್ನು ನೋಡಿದರೆ ಬಹಳ ಆನಂದವಾಗುತ್ತದೆ. ಹಾಸನದ ಕಾವಲಿನಲ್ಲಿ ಬಹಳ ಹಿಂದೆ ಒಂದು ಕುರಿ ಫಾರಂ ಇತ್ತು, ಇವತ್ತಿನ ದಿವಸ ಕಾರಣಾಂತರಗಳಿಂದ ಅದನ್ನು ಮುಚ್ಚಿದ್ದಾರೆ. ಇವತ್ತಿನ ದಿವಸ ಯಥೇಚ್ಛವಾಗಿ ಉಳಿದಿರತಕ್ಕಂಥ ಕಾವಲುಗಳನ್ನು ಉಪಯೋಗಮಾಡಿಕೊಂಡು ಒಂದು ವಿಶಿಷ್ಟವಾಗಿರತಕ್ಕಂಥ ಹಾಸನದ ಕುರಿಗಳ ತಳಿಗಳನ್ನು ಅಭಿವೃದ್ಧಿ ಮಾಡತಕ್ಕಂಥ ರೀತಿಯಲ್ಲಿ ಇಲ್ಲಿಯೂ ಕೂಡ ಒಂದು ಕುರಿ ಫಾರಂನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ನಿರುದ್ಯೋಗಿ ಯುವಕರಿಗೆ ಕೆಲಸ ಬೇಕಾಗಿಲ್ಲದೇ ಇರುವ ಕಾವಲುಗಳನ್ನು ಯೋಜನಾರೀತ್ಯ ಕೊಡುತ್ತಿದ್ದೀರಿ. ಹಾಗೆ ಕೊಡುವ ಕಾಲದಲ್ಲಿ ಹೊಸಹಳ್ಳಿ ಕಾವಲಿನಲ್ಲಿ ಮೊನ್ನೆ ತಡೆಹಿಡಿದಿದ್ದಾರೆ. ಕೂಡಲೇ ಅದನ್ನು ಬಿಡುಗಡೆ ಮಾಡಿ ಜಿಲ್ಲೆಯಲ್ಲಿರುವ ಯುವಕ ನಿರುದ್ಯೋಗಿಗಳಿಗೆ ಅಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಡೈರಿ ವಿಚಾರವಾಗಿ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಹಾಸನದ ಡೈರಿಯನ್ನು ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಈಗಾಗಲೇ ಅದರ ಬಗ್ಗೆ ನಿಶ್ಚಿತವಾದ ಕೆಲಸಗಳು ನಡೆಯುತ್ತಿದೆ. ಆದರೆ ನನ್ನ ಕ್ಷೇತ್ರದಲ್ಲಿರತಕ್ಕಂಥ ದುದ್ದ ಗ್ರಾಮದಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ನೋಡಿದಾಗ ಇಲ್ಲಿ ಮೇಲ್ವಿಚಾರಣೆಯಲ್ಲಿ ಇರತಕ್ಕಂಥ ಅಧಿಕಾರಿ ಏನಿದ್ದಾನೆ ಅವನು ಒಳ್ಳೆಯ ಹಾಲನ್ನು ತೆಗೆದುಕೊಂಡು ಹೋದರೆ ತೆಗೆದುಕೊಳ್ಳುವುದಿಲ್ಲ. ಹಾಲಿಗೆ ನೀರನ್ನು ಹಾಕಿ, ನೀರು ಬೆರಕೆಯಾಗಿರತಕ್ಕ ಹಾಲನ್ನು ಕೊಟ್ಟರೆ ಅದನ್ನು ತೆಗೆದುಕೊಂಡು ಹೋಗಿ ಜನಗಳಿಗೆ ಮಾರತಕ್ಕಂಥ ವ್ಯವಸ್ಥೆ ನಡೆಯುತ್ತಿದೆ. ಇದರ ಬಗ್ಗೆ ಕಾನೂನಿನ ರೀತಿಯಲ್ಲಿ ಒಂದು ಬಿಗಿಯನ್ನು ಇಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಸೋಮನಹಳ್ಳಿಯಲ್ಲಿ ೫೦೦ ಎಕರೆ ಪ್ರದೇಶದಲ್ಲಿ ತೋಟಗಾರಿಕೆಯನ್ನು ಪ್ರಾರಂಭ ಮಾಡಿದ್ದಾರೆ. ಇಲ್ಲಿರುವ ಇತರ ತೋಟಗಳು ಬಹಳ ಉನ್ನತಿಯನ್ನು ಪಡೆದಿವೆ. ಅದನ್ನು ಪ್ರಶಂಸೆ ಮಾಡಬೇಕಾಗಿದೆ. ಆದರೆ ಇಂತಹ ಬೃಹತ್ ಫಾರಂನ್ನು ಕಡೆಗಾಣಿಸಿದ್ದಾರೆ. ಅಲ್ಲಿರತಕ್ಕಂಥ ಬೋರ್‌ವೆಲ್ ಭಾವಿಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ಏನೆಂದರೆ ಈ ಭಾವಿಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ರೈತರಿಗೆ ಅವಕಾಶ ಕೊಟ್ಟು, ಈ ಭೂಮಿಯನ್ನು ರೈತರಿಗೆ ಕೊಟ್ಟು ತಾವು ಕೊಡತಕ್ಕಂಥ ಆಲೂಗೆಡ್ಡೆ ಬೀಜ ಮತ್ತು ಇತರೆ ಬೀಜಗಳನು ರೈತರಿಗೆ ಕೊಟ್ಟು ನಿಮ್ಮ ಒಂದು ಮೇಲ್ವಿಚಾರಣೆ ಇದ್ದರೆ ನಿಜವಾಗಿಯೂ ರೈತರು ಉತ್ತಮವಾದ ಬೆಳೆಗಳನ್ನು ಬೆಳೆದು ದೇಶಕ್ಕೆ ಮಾದರಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವಿದೆ. ಈಗ ನಷ್ಟವಾಗುತ್ತಿರುವ ಫಾರಂ ಏನಿದೆ ಅದನ್ನು ರೈತರಿಗೆ ಕೊಡುವ ಯೋಚನೆ ಮಾಡಿ, ಗುತ್ತಿಗೆ ಆಧಾರದ ಮೇಲೆ ಕೊಟ್ಟರೆ ಉತ್ತಮವಾದ ಕೆಲಸವನ್ನು ಮಾಡಿ ತೋರಿಸಬಹುದು. ಮತ್ತು ಈ ಕೂಡಲೇ ಬೋರ್‌ವೆಲ್‌ಗಳನ್ನು ಉಪಯೋಗಿಸುವ ಬಗೆ ಗಮನಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಇಲ್ಲಿ ಸಭೆಯ ಮುಂದೆ ಮಂಡಿಸಿರತಕ್ಕಂಥ ವ್ಯವಸಾಯ ಪಶುಪಾಲನಾ, ಮತ್ತು ತೋಟಗಾರಿಕೆ ಮತ್ತು ಮೀನುಗಾರಿಕೆ ಬೇಡಿಕೆ ಮೇಲೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಹಿಂದೆ ಮಾತನಾಡಿರತಕ್ಕಂಥ ಎಲ್ಲಾ ಸದಸ್ಯರೂ ಕೂಡ ಸವಿಸ್ತಾರವಾಗಿ ಈ ಬಗ್ಗೆ ಸಲಹೆಗಳನ್ನು ನೀಡಿದ್ದಾರೆ. ಅದರಲ್ಲೂ ನಮ್ಮ ದೊಡ್ಡಬಳ್ಳಾಪುರದ ಶಾಸನಸಭಾ ಸದಸ್ಯರಾದ ಶ್ರೀ ರಾಮೇಗೌಡರು ಬೇರೆ ಯಾರಿಗೂ ಅವಕಾಶ ಇಲ್ಲದಂತೆ ಎಲ್ಲಾ ವಿಷಯಗಳನ್ನೂ ಕೂಡ ಮಾತನಾಡಿದ್ದಾರೆ. ಅವರು ಮಾತನಾಡಿದಮೇಲೆ ನಾನು ಮಾತನಾಡುವುದಕ್ಕೆ ಹೊರಟರೆ ಅದು ಪುನರುಚ್ಚಾರ ಮಾಡಿದಂತಾಗುತ್ತದೆಂದು ನನಗನ್ನಿಸುತ್ತದೆ. ಆದರೂ ಒಂದೆರಡು ವಿಷಯಗಳನ್ನು ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಯವರ ಗಮನಕ್ಕೆ ತರಬೇಕೆಂದು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ದೇಶದಲ್ಲಿ ವ್ಯವಸಾಯವೇ ಒಂದು ಅತಿಮುಖ್ಯವಾದ ಕಸಬಾಗಿದೆ. ರೈತ ದೇಶದ ಬೆನ್ನುಮೂಳೆ ಎಂದು ಪ್ರತಿಯೊಂದು ಪ್ಲಾಟ್‌ಫಾರಂನಲ್ಲೂ ಮಾತನಾಡುತ್ತಾರೆ. ಅಂತಹ ರೈತನ ಸ್ಥಿತಿ ಇವತ್ತಿನದಿವಸ ಬಹಳ ಚಿಂತಾಜನಕವಾಗಿದೆ ಎಂದರೆ ಅದು ತಪ್ಪಾಗಲಾರದು. ಈಗ ರೈತ ಕೊಡುತ್ತಾ ಇರತಕ್ಕಂಥ ಪದಾರ್ಥಗಳ ಬೆಲೆಗಳು ಒಂದು ರೀತಿಯಲ್ಲಿ ಒಂದಕ್ಕೆ ಮೂರರಷ್ಟು ಬೆಲೆಗಳನ್ನು ಕೊಟ್ಟು ರೈತ ಕೊಂಡುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಆತ ವ್ಯವಸಾಯಕ್ಕೆ ಉಪಯೋಗಿಸತಕ್ಕಂಥ ಉಪಕರಣಗಳಾದ ಗುದ್ದಲಿ, ಹಾರೆಗೋಲು, ಶನಕೆ ಗೊಬ್ಬರ ಮುಂತಾದ ಪ್ರತಿಯೊಂದು ಪದಾರ್ಥವೂ ಕೂಡ ಒಂದಕ್ಕೆ ಮೂರರಷ್ಟು ಧಾರಣೆಗಳು ಏರಿವೆ. ಆದರೆ ಅವನು ಬೆಳೆದಿರತಕ್ಕ ಬೆಳೆಗೆ ಕಳೆದ ವರ್ಷ ಏನು ಒಂದು ಧಾರಣೆ ಇತ್ತೋ ಅದರಲ್ಲಿ ಮೂರನೇ ಒಂದು ಭಾಗ ಕೂಡ ಅವನಿಗೆ ಸಿಕ್ಕುತ್ತಾ ಇಲ್ಲ. ಇದು ಇಳಿಮುಖವಾಗುತ್ತಿದೆಯೇ ವಿನಃ ಏರುತ್ತಾ ಇರತಕ್ಕ ಸಂದರ್ಭವನ್ನು ಕಾಣುತ್ತಾ ಇಲ್ಲ. ಇದರಿಂದ ರೈತರು ಕಂಗಾಲಾಗಿದ್ದಾರೆ. ರೈತ ಬೆಳೆ ಬೆಳೆಯಲು ಅವನು ಮಾಡತಕ್ಕ ಖರ್ಚನ್ನು ವಾಪಸ್ಸು ಪಡೆಯತಕ್ಕಂಥ ಸ್ಥಿತಿ ಇಲ್ಲ. ಧಾರಣೆ ಜಾಸ್ತಿ ಇವತ್ತಾಗಲೂ ಇಲ್ಲ. ಈಗಂತೂ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಇವತ್ತಿನ ದಿವಸ ಸರ್ಕಾರದವರು ಅನೇಕ ಸೀಡ್ ಫಾರಂಗಳನ್ನು ನಡೆಸುತ್ತಿದ್ದಾರೆ. ಈ ಸೀಡ್ ಫಾರಂಗಳಲ್ಲಿ ಸೀಡ್‌ಗಳಿಗೆ ಹೆಚ್ಚಿನ ಬೆಲೆಯನ್ನು ಕೂಡ ನಿಗದಿ ಮಾಡಿ ಮಾರಾಟ ಮಾಡುತ್ತಿದ್ದರೂ ಕೂಡ ಈ ಸೀಡ್ ಫಾರಂಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆಯೇ ಹೊರತು ಯಾವ ಸೀಡ್ ಫಾರಂಗಳೂ ಆದಾಯದಿಂದ ಕೆಲಸ ಮಾಡುತ್ತಿವೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ರೈತ ಇನ್ನೂ ಕಮ್ಮಿ ಬೆಲೆಗೆ ಮಾರಿದರೆ ಅವನ ಸ್ಥಿತಿ ಏನು ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ನಿರಾಶೆಯಲ್ಲಿರತಕ್ಕ ರೈತ ತಾನು ಏನು ಬೆಳೆಯಬೇಕು, ಆಹಾರದ ಕೊರತೆ ಏನು ಇದೆ ಎಂದು ನೋಡಬೇಕಾದರೆ ಅವನಿಗೆ ಉತ್ತೇಜನ ಸಿಕ್ಕದೇ ಹೋದರೆ, ಒಂದು ವೇಳೆ ಉತ್ತೇಜನ ಸಿಕ್ಕಿದರೂ ಕೂಡ ಅವನ ಸುಖಕ್ಕೆ ಅನುಕೂಲವಾಗತಕ್ಕ ಬೆಲೆ ದೊರೆಯದೇ ಹೋದರೆ ಆತ ತಾನು ನಿರಾಶಾವಾದಿಯಾಗಿ ಮುಂದೆ ಬೆಳೆಯ ತಕ್ಕಂಥ ಬೆಳೆ ಕುಂಠಿತವಾಗಿ ಮತ್ತೆ ಆಹಾರಕ್ಕಾಗಿ ನಾವು ಪುನಃ ಪರದೇಶದವರನ್ನು ಅವಲಂಬನೆ ಮಾಡಬೇಕಾದಂಥ ಪರಿಸ್ಥಿತಿ ಬರುತ್ತದೆಂದು ನನಗಾದರೂ ಅನ್ನಿಸುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ದೇಶದಲ್ಲಿ ಕಳೆದ ವರ್ಷ ಯಥೇಚ್ಛವಾಗಿ ಬೆಳೆಗಳನ್ನು ಬೆಳೆದರು. ಈ ಬೆಳೆಗಳಿಗೆ ಹೆಚ್ಚಿನ ಬೆಲೆ ಇತ್ತು. ಈ ಬೆಲೆಗಳಿಂದ ಹೆಚ್ಚಿನ ಪ್ರಯೋಜನ ಆಗುತ್ತದೆ, ನಮಗೆ ಸಾಕಷ್ಟು ಹಣ ದೊರಕುತ್ತದೆ ಎನ್ನತಕ್ಕಂಥ ಮನೋಭಿಪ್ರಾಯ ಇರುವಾಗ, ಯಥೇಚ್ಛವಾಗಿ ಬೆಳೆಗಳನ್ನು ಬೆಳೆದು ನಮ್ಮ ದೇಶ ಒಂದು ಸ್ವಾವಲಂಬನೆಗೆ ನಾಂದಿ ಹಾಕಿತು ಎಂದು ತೋರಿಸಿಕೊಟ್ಟರೂ ಇವತ್ತಿನದಿವಸ ಬೆಲೆ ಕುಸಿಯುತ್ತಿದೆ. ಇವತ್ತಿನದಿವಸ ಸ್ವಾವಲಂಬನೆಯನ್ನು ಬಿಡುತ್ತಿದ್ದಾರೆ. ವ್ಯವಸಾಯಗಾರರ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಕೂಲಿಗಾರರಿಗೆ ಕೂಲಿಯನ್ನು ನಿಗದಿ ಮಾಡಿದ್ದಾರೆ. ಅವರಿಗೆ ಕೂಲಿಯನ್ನು ನಿಗದಿ ಮಾಡಿದ್ದಾರೆಯೇ ಹೊರತು ಎಷ್ಟು ವೇಳೆ ಕೆಲಸ ಮಾಡಬೇಕೆಂಬುದನ್ನು ನಿಗದಿ ಮಾಡಿದ್ದಾರೆಯೇ ಎಂದು ಕೇಳಬೇಕಾಗಿದೆ. ಇದರ ಬಗ್ಗೆ ಏನೂ ನಿಗದಿ ಮಾಡಿಲ್ಲ. ಅಗ್ರಿಕಲ್ಚರಲ್ ಲೇಬರರ್‌ಗೆ 4 ರೂ 80 ಪೈಸೆಯನ್ನು ಕೂಲಿ ನಿಗದಿ ಮಾಡಿದ್ದಾರೆ. ಆತ ಎಷ್ಟು ವೇಳೆ ಕೆಲಸ ಮಾಡುತ್ತಾನೆ, 4.80 ಪೈಸೆಯಷ್ಟು ಕೆಲಸ ಮಾಡುತ್ತಾನೆಯೇ ಇಲ್ಲವೇ ಎಂದು ನೋಡುವುದಿಲ್ಲ. ಅವನ ಕೆಲಸವನ್ನು ನೋಡಿ ಕೂಲಿ ಕೊಡಬೇಕೆಂದು ಮಾಡಲಿಲ್ಲ. ಅವನು ಏನೇ ಮಾಡಲಿ, ಯಾವ ವೇಳೆಗೇ ಬರಲಿ, ಯಾವ ವೇಳೆಗೆ

ಹೋಗಲ 4 80 ಪೈಸೆಯನ್ನು ಕೊಟ್ಟೇ ತೀರಬೇಕು ಎಂದು ಕಡ್ಡಾಯವಾದ ಕಾನೂನನ್ನು ತಂದಿದ್ದಾರೆ. ಅವರಿಗೆ ಕೂಲಿಯನ್ನು ಮಾತ್ರ ಕೊಡುತ್ತಾರೆಯೇ ಹೊರತು ಅವರಿಂದ ಪ್ರತಿಫಲ ಬರತಕ್ಕದ್ದು ಕಡಿಮೆಯಾಗಿದೆ. ಆದುದರಿಂದ ನಾವು ರೈತರಿಗೆ ಅವರು ಬೆಳೆಯುತಕ್ಕಂಥ ಬೆಳೆಗೆ, ಅವನ ಖರ್ಚಿಗೆ, ಅವನ ಆದಾಯಕ್ಕೆ ಒಂದು ಸರ್ವಸಮಾನವಾದ ಮಾರ್ಕೆಟ್ ವ್ಯವಸ್ಥೆಯನ್ನು ಮಾಡದೇ ಹೋದರೆ ನಿಜವಾಗಿ ವ್ಯವಸಾಯ ಕ್ಷೇತ್ರದಲ್ಲಿ ಭಾರಿ ತೊಂದರೆಯನ್ನು ಅನುಭವಿಸಬೇಕಾಗುತ್ತದೆ; ಮತ್ತು ಬೀಜಗಳ ಉತ್ಪತ್ತಿ ಮತ್ತು ದವಸಧಾನ್ಯಗಳ ಉತ್ಪತ್ತಿಯೂ ಕೂಡ ಕುಂಠಿತವಾಗುತ್ತದೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ.

ಮಾನ್ಯ ಕೃಷಿ ಮಂತ್ರಿಗಳು ಸ್ವತಃ ಬೇಸಾಯಗಾರರು. ಬೇಸಾಯದ ಸುಖ ಏನು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಬೀಜೋತ್ಪತ್ತಿ ವಿಷಯದಲ್ಲಿ ಸ್ವಲ್ಪ ಲಾಭ ಬರುತ್ತದೆಯೇ ಹೊರತು ಆಹಾರಧಾನ್ಯ ಬೆಳೆಯುವವರಿಗೆ ಲಾಭ ಸಿಗುವುದಿಲ್ಲ. ಅವನಿಗೆ ವರ್ಷಪೂರ್ತಿ ಆಗತಕ್ಕ ಖರ್ಚಿಗೂ ಕೂಡ ನಿಲುಕುವಷ್ಟು ಆದಾಯ ಬರುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ರಾಗಿ ಬೆಲೆ, ಭತ್ತದ ಬೆಲೆ ಸರಿಯಾಗಿ ನಿಗದಿ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ರಾಗಿ ಬೆಲೆ ಅಧೋಗತಿಗೆ ಹೋಗುತ್ತಿದೆ. ರಾಗಿ ಕ್ವಿಂಟಾಲಿಗೆ 40–45 ರೂಪಾಯಿ ಆಗುತ್ತಿದೆ. ರೈತನಿಗೆ ಕ್ವಿಂಟಾಲಿಗೆ 100 ರೂಪಾಯಿ ಕೊಟ್ಟರೂ ಕೂಡ ಸಾಕಾಗುವುದಿಲ್ಲ. ನಿಗದಿಯಾದ ಬೆಲೆ ಕೊಟ್ಟು ರೈತ ಏನು ಬೆಳೆದಿದ್ದಾನೆ ಅದನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರ ಮುಂದೆ ಬರದೇ ಹೋದರೆ ರೈತನ ಸ್ಥಿತಿ ಚಿಂತಾಜನಕವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಒಂದು ವ್ಯವಸ್ಥೆ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅವರು ಹೇಳಬಹುದು ನಾನು ಆಹಾರ ಮಂತ್ರಿಯಲ್ಲ, ವ್ಯವಸಾಯ ಮಂತ್ರಿ, ಆಹಾರಕ್ಕೂ ನನಗೂ ಸಂಬಂಧ ಇಲ್ಲ ಎಂದು. ಆಹಾರಕ್ಕೂ ಮತ್ತು ವ್ಯವಸಾಯಕ್ಕೂ ಬೀಜ ವೃಕ್ಷ ನ್ಯಾಯ ಎಂದು ಏನು ಹೇಳುತ್ತೇವೆಯೋ ಹಾಗೆ ಅವೆರಡಕ್ಕೂ ಸಂಬಂಧ ಇದೆ. ಆಹಾರದ ಬೆಲೆಯನ್ನು ಸರಿದೂಗಿಸದೇ ಹೋದರೆ ಕೃಷಿ ಕ್ಷೇತ್ರದಲ್ಲೂ ಕೂಡ ಧಕ್ಕೆಯಾಗುತ್ತದೆ ಎಂದು ಹೇಳಬಯಸುತ್ತೇನೆ. ಮಾನ್ಯ ರಾಮೇಗೌಡರು ಹೇಳಿದರು 10 ವರ್ಷಗಳ ಹಿಂದೆ ಕೋಲಾರ ಕಬ್ಬಿಣದ ನೇಗಿಲುಗಳನ್ನು ತಾಲ್ಲೂಕು ಬೋರ್ಡಿನಿಂದ ತರಿಸಿ ಅರ್ಧ ಸಬ್ಸಿಡಿ ಬೋರ್ಡಿನಿಂದ ಕೊಟ್ಟು 15 ರೂಪಾಯಿಗೆ ರೈತನಿಗೆ ನೇಗಿಲನ್ನು ಒದಗಿಸುತ್ತಿದ್ದರು ಎಂದು. ಈಗ ಅದೇ ನೇಗಿಲು 65 ರೂಪಾಯಿ ಆಗಿದೆ. ಅದೇ ರೀತಿ ಒಂದು ಗುದ್ದಲಿ 2 ರೂಪಾಯಿಗೆ ಸಿಗುತ್ತಿತ್ತು. ಈಗ 15 ರೂಪಾಯಿ ಆಗಿದೆ. ಈಗ ಹಳ್ಳಿ ರೈತನ ಮನೆಯಲ್ಲಿ ಗುದ್ದಲಿ ಸಿಗುವುದಿಲ್ಲ. 15 ರೂಪಾಯಿ ಕೊಟ್ಟು ಎಲ್ಲಿ ತೆಗೆದುಕೊಳ್ಳುವುದಕ್ಕಾಗುತ್ತದೆ ಎಂದು ಹೇಳುತ್ತಾರೆ. ಬೇರೆಯವರ ಹತ್ತಿರ ಎರವಲು ತೆಗೆದುಕೊಂಡು ಎರಡು ಗಂಟೆಗಳ ಕೆಲಸಮಾಡಿ ವಾಪಸ್ ಕೊಡತಕ್ಕಂಥ ಪರಿಸ್ಥಿತಿ ನೋಡಿದ್ದೇನೆ. ರೈತನ ಮನೆಯಲ್ಲಿ ಗುದ್ದಲಿ, ನೇಗಿಲುಗಳನ್ನು ಕಾಣದೇ ಇರತಕ್ಕ ದುಃಸ್ಥಿತಿಯಲ್ಲಿ ನಾವು ಇದ್ದೇವೆ ಇದರ ಜೊತೆಗೆ ಆಹಾರದ ಬೆಲೆ ಕೂಡ ಕುಸಿಯುತ್ತಿದೆ. ಈಗ ರೈತನ ಸ್ಥಿತಿ ಚಿಂತಾಜನಕವಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ತತ್‌ಕ್ಷಣ ಮಾರ್ಕೆಟ್ ವ್ಯವಸ್ಥೆಯನ್ನು ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. 74 ರೂಪಾಯಿಗೆ ನಾವು ರಾಗಿ ಕೊಳ್ಳುತ್ತೇವೆ ಎಂದು ಹೇಳುತ್ತೀರಿ. ಯಾರು ತೆಗೆದುಕೊಳ್ಳುತ್ತಾರೆ ಏನು ಎಂಬುದು ನಿಗದಿಯಾಗಿಲ್ಲ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ ಹೋದರೆ ಅಲ್ಲಿ ಅವರು ಹಣ ಇಲ್ಲ ಸಧ್ಯಕ್ಕೆ ಕೊಳ್ಳುತ್ತಿಲ್ಲ ಎಂದು ಹೇಳುತ್ತಾರೆ. ರೈತನಿಗೆ ಸ್ಟಾಕ್ ಮಾಡುವುದಕ್ಕೆ ಜಾಗ ಇರುವುದಿಲ್ಲ. ವರ್ತಕರು ತೆಗೆದುಕೊಂಡು ಸ್ಟಾಕ್ ಮಾಡುವುದಕ್ಕೆ ಭಯ ಬೀಳುತ್ತಾರೆ. ರೈತ ಏನು ಬೆಳೆದಿದ್ದಾನೆ, ಆ ಬೆಳೆಯನ್ನು ಕೊಂಡುಕೊಳ್ಳದೇ ಇರತಕ್ಕ ಸಂದರ್ಭದಲ್ಲಿ ಅವನ ಸ್ಥಿತಿ ಚಿಂತಾಜನಕವಾಗುತ್ತಿದೆ. ರೈತನಿಗೆ ಒಂದು ಕಡೆ ಸಾಲದ ಒತ್ತಡ, ಇನ್ನೊಂದು ಕಡೆ ವ್ಯಾಪಾರದ ಬೆಲೆ ಕುಸಿಯುತ್ತಾ ಇರತಕ್ಕದ್ದು; ಹೀಗೇ ನಾನಾ ರೀತಿಯಲ್ಲಿ ರೈತ ಕಷ್ಟಕ್ಕೆ ಸಿಕ್ಕಿ ತೊಳಲುತ್ತಿದ್ದಾನೆ. ದೇಶದ ಬೆನ್ನುಮೂಳೆಯಾಗಿ ಶೇಕಡ 95 ಜನ ಏನು ವ್ಯವಸಾಯವನ್ನು ತಮ್ಮ ವೃತ್ತಿಯನ್ನಾಗಿ ಇಟ್ಟುಕೊಂಡಿದ್ದಾರೋ ಅವರ ಸ್ಥಿತಿ ಕೆಟ್ಟರೆ ದೇಶದ ಸ್ಥಿತಿ ಕೆಡುತ್ತದೆ ಎಂದರೆ ತಪ್ಪಾಗಲಾರದು. ಅತಿ ಜಾಗ್ರತೆಯಾಗಿ ಬೆಲೆಗಳ ಸುಧಾರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವರಿಕೆ ಮಾಡಿಕೊಳ್ಳುತ್ತೇನೆ.

ಗೊಬ್ಬರದ ವಿಷಯದಲ್ಲಿ ಈಗಾಗಲೇ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಸಾಂಪಲ್ ಪ್ಲಾಟಿನಲ್ಲಿ ಅವರು ಹಾಕಿರತಕ್ಕ ಗೊಬ್ಬರದಲ್ಲಿ ಏನು ಬೆಳೆ ಬಂದಿರುತ್ತದೆ, ಅದೇ ಗೊಬ್ಬರವನ್ನು ಬೇರೆ ಪ್ಲಾಟಿನಲ್ಲಿ ಹಾಕಿ ಬೆಳೆದಾಗ ಅಷ್ಟು ಉತ್ತೇಜನಕರವಾದ ರೀತಿಯಲ್ಲಿ ಬೆಳೆ ಏನೂ ಕಾಣಿಸುವುದಕ್ಕಾಗುವುದಿಲ್ಲ. ಅದಕ್ಕೆ ಕಾರಣ ಏನೆಂದರೆ ಸಾಂಪಲ್ ಗೊಬ್ಬರದಲ್ಲಿ ಏನು ಅಂಶದಲ್ಲಿ ಬೆರೆಸಿದ್ದಾರೆ ಆ ಅಂಶದಲ್ಲಿ ಬೇರೆ ರೈತನಿಗೆ ಕೊಡುವಂಥ ಗೊಬ್ಬರದಲ್ಲಿ ಬೆರೆಸಿರುವುದಿಲ್ಲ. ಏರುಪೇರಾಗಿರುತ್ತದೆ. ಆದ್ದರಿಂದ ಇಳುವರಿ ಕಡಿಮೆ ಬರುತ್ತದೆ. ಈ ಬಗ್ಗೆ ತಜ್ಞರು ಆಲೋಚನೆ ಮಾಡಬೇಕು. ಪ್ರತಿಯೊಂದು ಸಾರಿ ಗೊಬ್ಬರವನ್ನು ಪರೀಕ್ಷೆ ಮಾಡಿ ರೈತನಿಗೆ ಕೊಡಬೇಕು. ಅದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಅಂತಹ ಕಂಪನಿಯವರ ಮೇಲೆ ಉಗ್ರಕ್ರಮ ತೆಗೆದುಕೊಂಡು ಅನ್ಯಾಯವನ್ನು ತಡೆಗಟ್ಟಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ರೈತನಿಗೆ ಉತ್ತಮವಾದ ತಳಿ ಬೀಜಗಳು ಸುಲಭ ರೀತಿಯಲ್ಲಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಹೆಚ್ಚು ಹೆಚ್ಚು ಸೀಡ್ ಫಾರಂಗಳನ್ನು ನಿರ್ಮಾಣ ಮಾಡಿ ಆ ಸೀಡ್ ಫಾರಂಗಳಲ್ಲಿ ಹೆಚ್ಚಿನ ಬೀಜೋತ್ಪತ್ತಿ ಮಾಡಿ ಸುಲಭವಾಗಿ ರೈತನಿಗೆ ಸಿಗುವಂತೆ ಮಾಡಬೇಕು. ಈಗಾಗಲೇ ದ್ವಿದಳ ಧಾನ್ಯಗಳ ಬಗ್ಗೆ ಮಾನ್ಯ ರಾಮೇಗೌಡರು ಹೇಳಿದರು: ಕಡಲೇಕಾಯಿ ಹೆಚ್. ಜಿ. 8 ಮತ್ತು ಸ್ಪ್ಯಾನಿಷ್ ವೆರೈಟಿ ಇದೆ ಅದನ್ನೇ ಇವತ್ತು ಕೊಡುತ್ತಿದ್ದಾರೆ ಅದರ ಮುಂದೆ ಇನ್ನಾವುದೇ ವಿಧವಾದ ಹೆಚ್ಚು ಫಸಲನ್ನು ಕೊಡತಕ್ಕ ಬೆಳೆಯನ್ನು ಕಂಡುಹಿಡಿದಿಲ್ಲ ಎಂದು. ಆದರೆ ಒಂದು ಪೇಪರ್‌ನಲ್ಲಿ ನೋಡಿದೆ ಹೊಸರೀತಿಯ ಬೀಜ ಬಂದಿದೆ ಎಂದು. ವ್ಯವಸಾಯ ಇಲಾಖೆಯಲ್ಲಿ ಅದನ್ನು ಕೇಳಿದಾಗ ನಮ್ಮಲ್ಲಿಲ್ಲ, ಬಳ್ಳಾರಿಯಲ್ಲೋ ಹುಬ್ಬಳ್ಳಿಯಲ್ಲೋ ಯಾರೋ ಬೆಳೆದು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅವರ ಹತ್ತಿರ ಕರೆಸ್ಪಾಂಡ್ ಮಾಡಿ ಬೀಜ ತರಿಸಿಕೊಳ್ಳಿ, ಎಂದು ಹೇಳಿದರು. ವ್ಯವಸಾಯ ಇಲಾಖೆಯಲ್ಲಿ ಈ ರೀತಿ ಹೇಳಿದರೆ ಹೇಗೆ? ರೈತರು ಹೇಗೆ ಹುಡುಕಿಕೊಂಡು ಹೋಗುತ್ತಾರೆ. ವ್ಯವಸಾಯ ಇಲಾಖೆಯವರು ಯಾವ ಬೆಳೆಯನ್ನು ಹೊಸದಾಗಿ ಕಂಡುಹಿಡಿದಿದ್ದಾರೆ ಅಂತಹ ಬೆಳೆಗಳಿಗೆ ಬೇಕಾಗುವಂತಹ ಬೀಜಗಳು ಸುಲಭವಾಗಿ ಜನಗಳಿಗೆ ಸಿಗತಕ್ಕ ರೀತಿಯ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡಲು ಇಷ್ಟಪಡುತ್ತೇನೆ.

ಇನ್ನು ಪಶುಪಾಲನೆ ಬಗ್ಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು ಪಶುಗಳ ಆರೋಗ್ಯದ ಬಗ್ಗೆ ಹೆಚ್ಚಿನ ಪರಿಶ್ರಮ ವಹಿಸಿ ಅವರ ಕಾಲದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ರೂರಲ್ ವೆಟರ್ನರಿ ಡಿಸ್ಪೆನ್ಸರಿ ಕೊಟ್ಟಿದ್ದಾರೆ. ಸರ್ಕಾರ ಏನೇನು ಔಷಧಿಗಳನ್ನು ಒದಗಿಸಿದೆ ಅದು ಪ್ರತಿಯೊಬ್ಬರಿಗೂ ತಿಳಿಯತಕ್ಕ ರೀತಿಯಲ್ಲಿ ಆಸ್ಪತ್ರೆ ಮುಂದೆ ನೋಟೀಸ್ ಬೋರ್ಡಿನಲ್ಲಿ ಏನೇನು ಔಷಧಿಗಳು ಸಪ್ಲೈ ಆಗಿದೆ ಎಂಬುದನ್ನು ಹಾಕಬೇಕು ಎಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಇದು ಸ್ತುತ್ಯಾರ್ಹವಾದುದು. ರೂರಲ್ ವೆಟರ್ನರಿ ಡಿಸ್ಪೆನ್ಸರಿಯ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್‌ಗಳನ್ನು ತೆರೆದು ಮಿಶ್ರತಳಿ ಪದ್ಧತಿಗೆ ಅವಕಾಶ ಮಾಡಿಕೊಡಬೇಕು. ಅನೇಕ ಆರ್.ವಿ.ಡಿ. ಗಳಲ್ಲಿ ಈ ರೀತಿಯ ಕಾರ್ಯಕ್ರಮ ಇಲ್ಲ. ಅವರನ್ನು ಕೇಳಿದರೆ ನಮಗೆ ಅದಕ್ಕೆ ಬೇಕಾದ ಸಾಮಾನುಗಳು ಸಲಕರಣೆಗಳು ಸಪ್ಲೈ ಆಗಿಲ್ಲ, ಆದ್ದರಿಂದ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಡೈರಿ ಪ್ರಾಜೆಕ್ಟಿಗೆ ಸೇರಿರತಕ್ಕ ಏರಿಯಾಗಳಲ್ಲಿ ಇರತಕ್ಕ ಆರ್.ವಿ.ಡಿ. ಗಳಲ್ಲಿ ಉತ್ತಮ ತಳಿಯನ್ನು ಉತ್ಪತ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ಒದಗಿಸತಕ್ಕ ಮೇವುಗಳ ವಿಷಯದಲ್ಲಿ ರೈತರಿಗೆ ತಿಳುವಳಿಕೆ ಬರುವ ರೀತಿಯಲ್ಲಿ ಪಾಂಪ್ಲೆಟ್ಸ್ ಪ್ರಿಂಟ್ ಮಾಡಿಸಿ ರೈತರಿಗೆ ಹಂಚಿ ಒಳ್ಳೆಯ ಮೇವು ಸಿಕ್ಕುವಂತೆ ಮಾಡಿ ಲಾಭ ಪಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು. ಮಿಶ್ರತಳಿ ಕರುಗಳನ್ನು ಸಾಕಿ ಸಣ್ಣ ಕರುಗಳನ್ನು ಸಾಕತಕ್ಕದ್ದು ಕಷ್ಟವಾಗುತ್ತದೆ. ಅವುಗಳನ್ನು ಸಾಕಿ ಸುಲಭ ಬೆಲೆಯಲ್ಲಿ ರೈತನಿಗೆ ದೊರಕತಕ್ಕ ರೀತಿಯಲ್ಲಿ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ನಮ್ಮ ಸಾವನದುರ್ಗ ತಾಲ್ಲೂಕಿನಲ್ಲಿ 2,800 ಎಕರೆ ಪ್ರದೇಶದಲ್ಲಿ ಕುರಿ ಸಾಕಾಣಿಕೆ ಕೇಂದ್ರವನ್ನು ತೆರೆದು ಅಭಿವೃದ್ಧಿ ಕಾರ್ಯವನ್ನು ಮಾಡಿಕೊಡಬೇಕು ಎಂದು ನಾಲ್ಕು ವರ್ಷಗಳಿಂದ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇವೆ. ನಮ್ಮ ತಾಲ್ಲೂಕು ಹಿಂದುಳಿದ ಪ್ರದೇಶ ಎಂದು ಅವರ ಗಮನಕ್ಕೆ ತಂದಿದ್ದೇನೆ. ಅದನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

4-00 P. M.

ಇನ್ನು ತೋಟಗಾರಿಕೆ ಮತ್ತು ಮೀನುಗಾರಿಕೆಯ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಮಾಡಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ತೋಟಗಾರಿಕೆ ವಿಷಯದಲ್ಲಿ ನಾನು ಹೇಳುವುದಾದರೂ ಇಷ್ಟೆ; ನಮಗೆ ಉತ್ತಮವಾದ ಸಸಿಗಳು ಸಿಗುತ್ತಿಲ್ಲ. ಉದಾಹರಣೆಗೆ ತೆಂಗಿನ ಸಸಿಯನ್ನು ತೆಗೆದುಕೊಂಡರೆ, ಏನಾಗಿದೆಯೆಂದರೆ ಇಲಾಖೆಯಿಂದ ಕಳುಹಿಸತಕ್ಕ ಅಧಿಕಾರಿಗಳು ತಿಪಟೂರು ಏರಿಯಾದಲ್ಲಿ ಎಳೆ ಮರದ ಕಾಯಿಗಳನ್ನು ತೆಗೆದುಕೊಂಡು ಸಸಿಗಳನ್ನು ಮಾಡಿ ರೈತರಿಗೆ ಹಂಚುತ್ತಿದ್ದಾರೆ. ಅದು 3-4 ವರ್ಷದ ಬೆಳೆ ಅಲ್ಲ, 100-200 ವರ್ಷದ ಬೆಳೆಯಾಗಿದೆ. ಆದುದರಿಂದ ಉತ್ತಮ ಮರಗಳಿಂದ ಬಲಿತ ಕಾಯಿಗಳನ್ನು ತೆಗೆದು ಸಸಿ ಮಾಡಿ ರೈತರಿಗೆ ಹಂಚಿದರೆ ಅವರಿಂದ ಹೆಚ್ಚಿನ ಪ್ರತಿಫಲ ಸಿಗುತ್ತದೆ. ಆ ದಿಸೆಯಲ್ಲಿ ನಮ್ಮ ಸರ್ಕಾರದವರು ಸರಿಯಾದ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಬಯಸುತ್ತೇನೆ. ಇದು ಅಕ್ಷರಶಃ ನಿಜ. ಅನೇಕ ಕಡೆ ಸಸಿಗಳನ್ನು ನೆಟ್ಟು 10-15 ವರ್ಷಗಳಾದರೂ ಫಸಲು ಬಾರದೇ ಇರತಕ್ಕ ನಿದರ್ಶನಗಳು ಇವೆ. ಮಾನ್ಯ ಮಂತ್ರಿಗಳು ಇದನ್ನು ಪರೀಕ್ಷೆ ಮಾಡಿ ನೋಡಿದರೆ ಅವರು ಮಾಡುತ್ತಿರುವುದು ಸರಿಯೋ ತಪ್ಪೋ ಎಂಬುದು ವೇದ್ಯವಾಗುತ್ತದೆ. ಸರಿಯಾದ ರೀತಿಯಲ್ಲಿ ಕಾಯಿಗಳನ್ನು ಸೆಲೆಕ್ಟ್ ಮಾಡಿ ಒಳ್ಳೆಯ ಸಸಿಗಳನ್ನು ರೈತರಿಗೆ ಒದಗಿಸಬೇಕು. ಇದೇ ರೀತಿ ಮಾವು, ಸಪೋಟ ಇತ್ಯಾದಿ ಎಲ್ಲಾ ಸಸಿಗಳನ್ನು ಸಬ್ಸಿಡಿ ರೂಪದಲ್ಲಿ ರೈತರಿಗೆ ಒದಗಿಸಬೇಕು. ಇದರಿಂದ ದೇಶದ ಉತ್ಪತ್ತಿ ಹೆಚ್ಚಾಗುತ್ತದೆ, ಇದನ್ನು ರೈತನೇ ಬೆಳೆದರೂ ದೇಶದ ಒಂದು ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಇದು ಒಂದು ಸಾಧನ ಎಂದು ಹೇಳುತ್ತೇನೆ. ಬೇಗ ನಶಿಸಿ ಹೋಗತಕ್ಕ ಹಣ್ಣುಗಳನ್ನು ಕೋಲ್ಡ್ ಸ್ಟೋರೇಜ್‌ನಲ್ಲಾಗಲಿ ಅಥವಾ ಬೇರೆ ಯಾವುದಾದರು ರೀತಿಯ ಉಗ್ರಾಣಗಳಲ್ಲಿ ದೀರ್ಘ ಕಾಲ ಶೇಖರಿಸಿಟ್ಟು ರೈತನಿಗೆ ಹೆಚ್ಚಿನ ಲಾಭ ಬರುವ ಸಂದರ್ಭದಲ್ಲಿ ಮಾರಾಟ ಮಾಡುವುದಕ್ಕೆ ಅನುಕೂಲವಾದ ಏರ್ಪಾಡುಗಳನ್ನು ತೋಟಗಾರಿಕೆ ಇಲಾಖೆಯಲ್ಲಿ ಮಾಡಬೇಕು. ಎಲ್ಲಾ ಹಣ್ಣುಗಳು ಒಂದೇ ಸಾರಿ ಮಾರುಕಟ್ಟೆಗೆ ಬಂದರೆ ಬೆಲೆ ಕುಸಿದು ರೈತರಿಗೆ ತೊಂದರೆಯಾಗತಕ್ಕ ಪರಿಸ್ಥಿತಿ ಇದೆ. ಅದನ್ನು ತಪ್ಪಿಸಲು ಒಂದು ಸುವ್ಯವಸ್ಥಿತವಾದ ಮಾರುಕಟ್ಟೆಯನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಮೀನುಗಾರಿಕೆ ಸ್ವಾಗತಾರ್ಹವಾದ ವಿಷಯ. ನಮ್ಮ ಹಳ್ಳಿಯ ಜನಗಳು 10 15 ಕಜಿ ಮೀನುಗಳನ್ನು ಸಮುದ್ರ ಬಿಟ್ಟರೆ ಒಳನಾಡಿನಲ್ಲಿ ನೋಡಿದ ದೃಶ್ಯವೇ ಇರಲಿಲ್ಲ. ಈಗ ಎಲ್ಲ ಕೆರೆಕಟ್ಟೆ ಬಾವಿಗಳಲ್ಲಿಯೂ ಕೂಡ ಜನಗಳು ಮೀನುಗಳನ್ನು ಯಥೇಚ್ಛವಾಗಿ ಸಾಕುತ್ತಿದ್ದಾರೆ. ಇಂದು ಅದರಿಂದ ೧೦-೧೨ ಕಜಿ ಮೀನುಗಳು ದೊರೆಯುವುದನ್ನು ನೋಡಿ ಎಲ್ಲರೂ ಸಂತೋಷಪಡುತ್ತಾರೆ. ಈ ಮೀನಿನ ಅಭಿವೃದ್ಧಿಯನ್ನು ಜಾಸ್ತಿ ಮಾಡುವುದರಿಂದ ಸಾಕಷ್ಟು ಆಹಾರದ ಕೊರತೆ ನೀಗುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಹೆಚ್ಚಾಗಿ ಆಹಾರ ರೂಪದಲ್ಲಿ ಉಪಯೋಗಿಸಿದರೆ ಬುದ್ಧಿಶಕ್ತಿ ಜಾಸ್ತಿಯಾಗುತ್ತದೆ; ಒಳ್ಳೆಯ ದೇಹದಾರ್ಢ್ಯ ಬರುತ್ತದೆಂದು ಹೇಳುತ್ತೇನೆ. ಮೀನನ್ನು ಹಿಡಿದು 3-4 ಗಂಟೆಗಳಲ್ಲಿ ಉಪಯೋಗಿಸದೆ ಹೋದರೆ ಅದು ನಾಶವಾಗುತ್ತದೆ; ಮತ್ತು ಕೆಟ್ಟುಹೋಗತಕ್ಕ ಪರಿಸ್ಥಿತಿ ಬರುತ್ತದೆ. ಆದಕಾರಣ, ಸರ್ಕಾರದವರು ಈ ಕಡೆ ಗಮನ ಹರಿಸಿ ಅದನ್ನು ಹೆಚ್ಚು ಕಾಲ ಇಡುವುದಕ್ಕೆ ಪ್ರತಿಯೊಂದು ತಾಲ್ಲೂಕು ಲೆವಲ್‌ನಲ್ಲಿಯೂ ಕೂಡ ಉಗ್ರಾಣಗಳನ್ನು ಮಾಡಿ ಶೇಖರಿಸಿದ ಮೀನುಗಳನ್ನು ಮಾರ್ಕೆಟ್ಟುಗಳಿಗೆ ಕಳುಹಿಸಿ ಮಾರಾಟ ಮಾಡಿ ರೈತನಿಗೆ ಹಣ ದೊರಕಿಸುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇದರಿಂದ ರೈತ ಹೆಚ್ಚು ಲಾಭ ಸಂಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ; ಒಳ್ಳೆಯ ಪೌಷ್ಟಿಕ ಆಹಾರವನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಮಾರ್ಕೆಟ್ ವ್ಯವಸ್ಥೆಯನ್ನು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಉಪಾಧ್ಯಕ್ಷರು ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅವರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರು).—ಸನ್ಮಾನ್ಯ ಉಪಾಧ್ಯಕ್ಷರೇ ಇವತ್ತಿನ ದಿವಸ ಮಾನ್ಯ ವ್ಯವಸಾಯ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವ್ಯವಸಾಯವು ನಮ್ಮ ದೇಶದಲ್ಲಿ

ಎಲ್ಲರಿಗೂ ಸಂಬಂಧಪಟ್ಟ ಒಂದು ಉದ್ದಿಮೆ, ಅದಕ್ಕಾಗಿ ಈಗ ನಮ್ಮ ಮಂತ್ರಿಗಳು ಇಷ್ಟು ಸಣ್ಣ ಬೇಡಿಕೆಯನ್ನು ಇಟ್ಟಿದ್ದಾರಲ್ಲ ಎಂದು ನನ್ನ ಒಂದು ಆಕ್ಷೇಪಣೆ. ಆರೋಗ್ಯಕ್ಕೆ, ವಿದ್ಯಾಭ್ಯಾಸಕ್ಕೆ ಬೇಕಾದಷ್ಟು ಹಣವನ್ನು ಬಜೆಟ್ಟಿನಲ್ಲಿ ಅಲಾಟ್ ಮಾಡಿರುವಾಗ, ಶೇಕಡ ೮೦ರಷ್ಟು ವ್ಯವಸಾಯಗಾರರಿರುವ ನಮ್ಮ ದೇಶದಲ್ಲಿ, ವ್ಯವಸಾಯ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ವ್ಯವಸಾಯ ಮಂತ್ರಿಗಳಾಗಿರುವವರೂ ಸಹ ವ್ಯವಸಾಯ ಬಲ್ಲವರು ಎಂದು ಗೊತ್ತಾಗುತ್ತದೆ. ವ್ಯವಸಾಯ ಎಂದರೆ ಇಂಗ್ಲೀಷ್‌ನಲ್ಲಿ ಲ್ಯಾಂಡ್ ಲೇಬರ್ ಫೈನಾನ್ಸ್ ಎಂದು ಭೂಮಿ ಇರಬಹುದು, ಲೇಬರ್ ಇರಬಹುದು, ಆದರೆ ಫೈನಾನ್ಸ್ ಇಲ್ಲದಿದ್ದರೆ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಅರ್ಥ ಸಚಿವರು ಏನಾದರೂ ದುಡ್ಡಿಗೆ ತೊಂದರೆ ಬಂದಾಗ ಕೇಂದ್ರಕ್ಕೆ ಪದೇ ಪದೇ ಹೋಗುತ್ತಿದ್ದುದನ್ನು ಕೇಳಿದ್ದೇನೆ ಆಗ ಕೇಂದ್ರದ ಅರ್ಥಸಚಿವರು ನಿಮ್ಮ ನಿಮ್ಮ ಸ್ವಂತ ಕಾಲ ಮೇಲೆ ನೀವು ನಿಂತುಕೊಳ್ಳುವ ಹಾಗೆ ಪ್ರಯತ್ನ ಮಾಡಬೇಕೆಂದು ಹೇಳಿದ್ದು ಜ್ಞಾಪಕಕ್ಕೆ ಬರುತ್ತದೆ. ಆದರೆ ನಮ್ಮ ಅರ್ಥಸಚಿವರು ಅವರು ಹೇಳಿದ್ದನ್ನು ಜ್ಞಾಪದಲ್ಲಿಟ್ಟುಕೊಂಡು ನಮ್ಮ ರೈತರ ಫೈನಾನ್ಸ್ ವಿಚಾರವಾಗಿ ಸ್ವಲ್ಪವೂ ಯೋಚನೆ ಮಾಡಿದಂತೆ ಕಾಣುವುದಿಲ್ಲ. ರೈತರಿಗೆ ಇರುವ ಭೂಮಿಯ ಮೇಲೆ ನಾನಾ ತರಹದ ತೆರಿಗೆಗಳನ್ನು ಹಾಕಿದ್ದಾರೆ, ಭೂಮಿ ಮೇಲೆ ತೆರಿಗೆ ಹಾಕಿದ್ದಾರೆ, ಲೆವಿ ಹಾಕಿದ್ದಾರೆ, ವಾಟರ್ ರೇಟ್ ಹಾಕಿದ್ದಾರೆ, ಅದೂ ಅಲ್ಲದೆ ಡೆವಲಪ್‌ಮೆಂಟ್ ಟ್ಯಾಕ್ಸ್ ಬೇರೆ ಹಾಕಿದ್ದಾರೆ, ಇದೂ ಸಾಲದೆಂದು ಇನ್‌ಕಂ ಟ್ಯಾಕ್ಸ್ ಬೇರೆ ಹಾಕಿ ನಾನಾ ತರಹದ ತೆರಿಗೆಗಳನ್ನು ರೈತನ ಮೇಲೆ ಹೇರಿ ಅವನು ಸಂಪೂರ್ಣವಾಗಿ ಹತನಾಗುವ ಹಾಗೆ ಮಾಡಿಬಿಟ್ಟರೆ ಅವನು ಹೇಗೆ ವ್ಯವಸಾಯ ಮಾಡಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ವ್ಯವಸಾಯ ಮಾಡಬೇಕಾದರೆ ಮುಖ್ಯವಾಗಿ ದುಡ್ಡು ಇರಲೇಬೇಕು, ದುಡ್ಡಿಲ್ಲದೆ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ಬೆಲೆ ಬಹಳ ಬಿದ್ದು ಹೋಗಿದೆ ಇದಕ್ಕೆ ಕಾರಣ ನಮ್ಮ ಸರ್ಕಾರದ ನೀತಿ ಎಂದು ನನಗೆ ಅರ್ಥವಾಗುತ್ತದೆ. ಹತ್ತಾರು ವರ್ಷಗಳಿಂದ ಬಾಕಿ ಇರುವ ಸಾಲಗಳನ್ನು ಒಮ್ಮೆಲೇ ವಸೂಲ್ಮಾಡುವುದಕ್ಕೆ ಹೋಗಿ ರೈತನ ಮೇಲೆ ಹೇರಬಾರದ ತೆರಿಗೆಗಳನ್ನು ಹೇರಿರುವುದು ಅವನ ತಲೆಗೆ ಕಲ್ಲು ಹೊಡೆದಂತಾಗಿದೆ. ಬಂಗಾಳ ದೇಶದಲ್ಲಿ ವಸೂಲ್ಮಾಡಿದ ಹಾಗೆ ನಮ್ಮಲ್ಲೂ ಸಹ ವಸೂಲ್ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತು ರೈತರಿಗೆ ಎಲ್ಲೂ ಒಂದು ಆಣೆ ಸಾಲ ಹುಟ್ಟುವುದಿಲ್ಲ ಬಂಗಾರ ಕೊಟ್ಟರೂ ಯಾರು ನೂರು ರೂಪಾಯಿ ಕೊಡುವುದಿಲ್ಲ. ದವಸ ಧಾನ್ಯ ಮಾರಿದುದ್ದು ಪಡೆಯೋಣವೆಂದರೆ ಮಾರ್ಕೆಟ್ಟಿನಲ್ಲಿ ಬೆಲೆ ಕುಸಿದು ಹೋಗಿದೆ. ನಮ್ಮ ದೇಶದಲ್ಲಿ ಬೇಕಾದಷ್ಟು ಧಾನ್ಯಗಳನ್ನು ಬೆಳೆದಿರುವುದರಿಂದ ಬೆಲೆ ಬಿದ್ದು ಹೋಗಿದೆ ಎಂದು ನನಗನ್ನಿಸುವುದಿಲ್ಲ ಇದಕ್ಕೆ ಕಾರಣವೆ ಬೇರೆ. ಈಗ ನಾನು ಡಿ.ಸಿ.ಸಿ ಬ್ಯಾಂಕು ಮತ್ತು ಅಫೆಕ್ಸ್ ಬ್ಯಾಂಕುಗಳಲ್ಲಿ ಅಧ್ಯಕ್ಷನಾಗಿದ್ದೇನೆ. ರೈತ ಬೆಳೆದ ಧಾನ್ಯಗಳನ್ನು ತಾವು ಲೆವಿ ಪ್ರೈಸ್‌ನಲ್ಲಿ ಕೊಡು ಎಂದು ಹೇಳುವ ಬದಲಾಗಿ ಬ್ಯಾಂಕುಗಳ ಮುಖಾಂತರ ಕ್ರಾಪ್ ಲೋನನ್ನು ಕೊಡಿಸಿ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಬಂದಾಗ ಮಾರುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ವ್ಯವಸಾಯ ಇಲಾಖೆಯಲ್ಲಿ ಮೊದಲು ನನಗೆ ತಿಳಿದ ಹಾಗೆ ಅಡ್ಮಿನಿಸ್ಟ್ರೇಟರ್, ಫೀಲ್ಡ್‌ಮನ್ ಮತ್ತು ಇತರ ಮೈನರ್ ಹುದ್ದೆಗಳು ಇದ್ದು ಕೆಲಸ ಮಾಡುತ್ತಿದ್ದರು ಅವುಗಳನ್ನು ಈಗ ಅಪ್‌ಗ್ರೇಡ್ ಮಾಡುವ ಆವಶ್ಯಕತೆ ಏನಿತ್ತು ಎಂಬುದು ನನಗೆ ಅರ್ಥವಾಗಲಿಲ್ಲ. ಈಗ ಅವರಿಗೆ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಶನ್ ಆಫೀಸರ್ ಎಂದು ಹೊಸ ಹೆಸರು ಕೊಟ್ಟರು, ಈಗ ಅವರು ಅಧಿಕಾರಿಗಳಾದರು, ಅಧಿಕಾರ ಮಾಡುವುದಕ್ಕೆ ಆಫೀಸುಗಳಿಲ್ಲ, ಗುಮಾಸ್ತರಿಲ್ಲ. ಅವರು ಈಗ ಆಫೀಸರ್ ಆಗಿರುವುದರಿಂದ ಫೀಲ್ಡ್‌ನಲ್ಲಿ ಕೆಲಸಮಾಡುವುದಕ್ಕೆ ಸಂಕೋಚ. ಸುಮ್ಮನೆ ಎಕ್ಸ್‌ಟೆನ್‌ಶನ್ ಆಫೀಸರ್ ಎಕ್ಸ್‌ಟೆನ್‌ಶನ್ ಗೈಡ್ಸ್ ಎಂದು ದೊಡ್ಡ ದೊಡ್ಡ ಹೆಸರುಗಳನ್ನು ತೆಗೆದುಕೊಂಡು ಹೊಲದ ಕಡೆ ನೋಡುವುದಿಲ್ಲ.

ಈ ತರಹ ಆಗಿ, ಇದರಿಂದ ವ್ಯವಸಾಯ ಸ್ವಲ್ಪ ಹಿಮ್ಮೆಟ್ಟಿದೆ. ಇವೊತ್ತು ನಮ್ಮ ಸರ್ಕಾರದಿಂದ ವ್ಯವಸಾಯ ಅಭಿವೃದ್ಧಿಗೆ ಬೇಕಾದಷ್ಟು ಸಾಲ ಕೊಡಬಹುದು ಒಳ್ಳೆಯ ಗೊಬ್ಬರ ಕೊಡಬಹುದು. ಆದರೆ ತಾವು ಯಾವುದೇ ಒಂದು ಸೌಲಭ್ಯ ಕೊಟ್ಟರೂ ರೈತರಿಗೆ

ಸರಿಯಾದ ಬೆಲೆ ಕೊಡದೇ ಹೋದರೆ ಈ ವ್ಯವಸಾಯ ಸರಿಯಾಗಿ ನಡೆಯುವುದಿಲ್ಲ. ಅವನಿಗೆ ಸರಿಯಾದ ಬೆಲೆ ಸಿಕ್ಕದರೆ ಮಾತ್ರ ಅವನು ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾನೆ, ಈಗ ಆಹಾರ ಧಾನ್ಯಗಳ ಬೆಲೆ ಬಿದ್ದಿರತಕ್ಕ ಸಂದರ್ಭದಲ್ಲಿ ಒಳ್ಳೆಯ ಬೆಲೆ ರೈತರಿಗೆ ಸಿಕ್ಕುತ್ತಿಲ್ಲ, ಆದುದರಿಂದ ರೈತರಿಗೆ ಸರಿಯಾದ ಬೆಲೆ ಸಿಕ್ಕುವಂತೆ ಒಂದು ಕಾನೂನು ಜಾರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಇದನ್ನು ಮಾಡದೇ ಹೋದರೆ ರೈತರಿಗೆ ಇದರಿಂದ ಬಹಳ ತೊಂದರೆ ಯಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ತೋಟಗಾರಿಕೆ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕು ಎಂದರೆ ನನಗೆ ತಿಳಿದಮಟ್ಟಿಗೆ ಕಬ್ಬನ್ ಪಾರ್ಕ್, ಲಾಲ್‌ಬಾಗ್‌ನಲ್ಲಿ ಅದನ್ನು ಬೇರೆ ಡಿಪಾರ್ಟ್‌ಮೆಂಟ್ ಎಂದು ಮಾಡಿ ಅದಕ್ಕೆ ಒಬ್ಬ ಡೈರೆಕ್ಟರ್ ಎಂದು ಮಾಡಿದ ಮೇಲೆ ಎಲ್ಲಾ ಕಡೆಗಳಲ್ಲೂ ತೆಂಗಿನ ಸಸಿಗಳು ಸಪೋಟ ಗಿಡಗಳು, ಮಾವಿನ ಗಿಡಗಳು ಇವೆಲ್ಲವನ್ನು ಬೆಳೆಸಿ ಒಳ್ಳೆಯ ಹೆಸರು ಬಂದಿದೆ. ಅದನ್ನು ಅದೇರೀತಿ ನಡೆಸಿಕೊಂಡು ಹೋದರೆ ಸಾಕು ಎಂದು ಹೇಳುತ್ತೇನೆ. ಈಗ ನಮ್ಮ ವಿಧಾನಸೌಧದ ಸುತ್ತಮುತ್ತಲೂ ಗಿಡಗಳನ್ನು ನೋಡಿದರೆ ಎಲ್ಲಾ ಒಣಗುತ್ತಾ ಇವೆ, ಇನ್ನು ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಈ ತೋಟಗಾರಿಕೆ ವಿಚಾರದಲ್ಲಿ ಅವರು ಏನು ಒಂದು ಟೆಂಪೋ ಉಳಿಸಿಕೊಂಡು ಬಂದಿದ್ದಾರು ಅದನ್ನು ಉಳಿಸಿಕೊಂಡರೆ ಸಾಕು ಎಂದು ಹೇಳುತ್ತೇನೆ.

ಇನ್ನು ಮೀನುಗಾರಿಕೆ ವಿಚಾರದಲ್ಲಿ ಹೇಳಬೇಕು ಎಂದರೆ, ಈ ವಿಚಾರದಲ್ಲಿ ಈಗಾಗಲೇ ಬಹಳ ಜನರು ಹೇಳಿದ್ದಾರೆ, ಇದು ಬಹಳ ಒಳ್ಳೆಯ ಆಹಾರ ಇದು ಎಲ್ಲರಿಗೂ ಸಿಕ್ಕಬೇಕಾದ್ದು ಇದೆ, ಆದರೆ ಈಗ ಇರತಕ್ಕ ವ್ಯವಸ್ಥೆ ಪ್ರಕಾರ ಮೂಡಿಗೆರೆ, ಬೆಂಗಳೂರು ಈ ರೀತಿ ಕೆಲವು ಕಡೆಗಳಲ್ಲಿ ಮಾತ್ರ ಸಿಕ್ಕುತ್ತಿದ್ದೆ, ಇದು ಇಡೀ ಸಂಸ್ಥಾನದಲ್ಲಿ ಎಲ್ಲಾ ಕಡೆ ಸಿಕ್ಕುತ್ತಿಲ್ಲ, ಇವೊತ್ತು ಇಡೀ ಸಂಸ್ಥಾನ ದಲ್ಲಿ ಎಲ್ಲಾ ಕಡೆ ಸಿಕ್ಕಬೇಕು ಎಲ್ಲಾಕಡೆ ಹೆಚ್ಚು ಮೀನು ಹಿಡಿಯಬೇಕಾಗುತ್ತದೆ. ಈಗ ಸೌತ್ ಕೆನರಾ, ನಾರ್ತ್ ಕೆನರಾ ಡೈರೆಕ್ಟರು ಏನು ಹೇಳುತ್ತಿದ್ದಾರು ಎಂದರೆ ಈಗ ಮೀನು ಹಿಡಿಯ ತಕ್ಕವರಿಗೆ 30 ಅಡಿ ದೋಣಿಗಳನ್ನು ಸಪ್ಲೈ ಮಾಡಿ ಅವರಿಗೆ ಮೀನು ಹಿಡಿಯಲು ತೊಂದರೆಯಾಗಿದೆ ಎಂದು ತಿಳಿಸಿದರು, ಅಲ್ಲದೇ ಅವರು ತೆಗೆದುಕೊಂಡಿರತಕ್ಕ ಸಾಲ ತೀರಿಸಲಿಕ್ಕೂ ತೊಂದರೆಯಾಗಿದೆ ಎಂದು ಹೇಳುತ್ತಾರೆ ಈಗ ಅವರಿಗೆ ಬೇಕಾದಂತ ಉದ್ದ ಉದ್ದವಾದ ದೋಣಿಗಳನ್ನು ಒದಗಿಸಿಕೊಟ್ಟು ಹೆಚ್ಚು ಹೆಚ್ಚು ಮೀನು ಹಿಡಿಯಲು ಅನುಕೂಲವಾಗುವಂತೆ ಸೌಕರ್ಯ ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ. ಮೊದಲು ಎರಡು ವರ್ಷದ ಹಿಂದೆ ಅರಬ್ಬಿ ಸಮುದ್ರದಲ್ಲಿ ಮೀನು ಇಲ್ಲ ಎಂದು ಹೇಳುತ್ತಿದ್ದರು, ಈಗ ಸ್ಮಗಲರ್ಸ್ ಹಿಡಿದಮೇಲೆ ಮೀನುಗಳು ಸಿಕ್ಕುತ್ತಿವೆ ಎಂದು ಹೇಳುತ್ತಿದ್ದಾರೆ. ಆದುದರಿಂದ ಮೀನು ಹಿಡಿಯತಕ್ಕವರಿಗೆ ಅವರಿಗೆ ಬೇಕಾದಂತಹ ಉದ್ದವಾದ ದೋಣಿಗಳನ್ನು ಒದಗಿಸಿ ಅವರು ಮೂಲೆ ಮೂಲೆಯಲ್ಲಿ ಹೋಗಿ ಮೀನುಗಳನ್ನು ಹಿಡಿಯಲು ಅವಕಾಶವಾಗುವಂತೆ ಸೌಲಭ್ಯ ಒದಗಿಸಬೇಕು ಎಂದು ಹೇಳುತ್ತೇನೆ.

ಇನ್ನು ಪಶುಸಂಗೋಪನೆ ವಿಚಾರದಲ್ಲಿ ಹೇಳಬೇಕು, ಎಂದರೆ 1963–64ರಲ್ಲಿ, ನಮಗೆಲ್ಲಾ ಪಶುಸಂಗೋಪನಾ ಮಂತ್ರಿಗಳು ಕುರಿಗಳನ್ನು ಸಾಕಲಿಕ್ಕೆ ಕೊಟ್ಟರು, ಅದನ್ನು ಯಾರಿಗೆ ಕಂಟ್ರಾಕ್ಟ್ ಕೊಟ್ಟು ಮಾಡಿದರೋ ಗೊತ್ತಿಲ್ಲ, ಅವರು ರೋಗದ ಕುರಿಗಳನ್ನು ತಂದು ಕೊಟ್ಟದ್ದರಿಂದ ನಮ್ಮಲ್ಲಿದ್ದ ಹಳೆಯ ಕುರಿಗಳು ಸತ್ತು ಹೋದವು, ಅದರ ಬಗ್ಗೆ ಅಲ್ಲಿದ್ದ ಅಧಿಕಾರಿಗಳು ರಿಪೋರ್ಟ್ ಮಾಡಿದ್ದಾರೆ ಅದನ್ನು ನಾವು ಮಂಜೂರಿ ಮಾಡಿಸಿದ್ದೇವೆ. ಅಲ್ಲದೇ ಬೇಕಾದಷ್ಟು ಜನರಿಗೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ 10-12 ವರ್ಷದ ಹಿಂದೆ ನಡೆದಂತಾದ್ದನ್ನು ಇವೊತ್ತು ರೆವೆನ್ಯೂ ಬಾಕಿ ಎಂದು ವಸೂಲು ಮಾಡುತ್ತಿದ್ದಾರೆ, ಇದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು. ಇವೊತ್ತು ಹಿಂದೆ ಯಾರೋ ಮಾಡಿದ ತಪ್ಪಿಗೆ ತೊಂದರೆ ಕೊಡುತ್ತಿದ್ದಾರೆ. ಆದುದರಿಂದ ಇದನ್ನು ಮಾನ್ಯ ಮಂತ್ರಿಗಳು ಕೂಲಂಕಷವಾಗಿ ವಿಚಾರ ಮಾಡಿ ಅದನ್ನು ಮನ್ನಾ ಮಾಡಬೇಕೆಂದು ಹೇಳಿ, ಅಧ್ಯಕ್ಷರು ಕೇವಲ ಕೆಲವು ನಿಮಿಷಗಳನ್ನು ಮಾತ್ರ ಕೊಟ್ಟಿದ್ದಕ್ಕಾಗಿ, ಇಷ್ಟು ವಿಷಯಗಳನ್ನು ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SMT. WINNIFRED F. FERNANDES(Coondapur).--Mr. Deputy Speaker I rise to support the demands on fisheries horticulture, agriculture and animal husbandry. First and foremost I would like to speak on fisheries because most of the Hon'ble Members who spoke so far have not touched this subject. I hail from the coastal belt and I represent Coondapur constituency and therefore I am more concerned to see that fishery is developed, either it be marine fisheries or inland fisheries. The marine fisheries is only on the coastal belts of South Kanara and North Kanara districts When I saw the budget regarding annual plan outlay for fisheries I find only Rs. 70 lakhs has been allotted for various programmes. This is too meagre a sum. With this Rs. 70 lakhs how can the Government expect to develop marine and inland fisheries ? I request the Government to see that this amount is revised to atleast Rs. 1 crore and 20 lakhs. Out of the proposed outlay of Rs. 70 lakhs Rs. 25.50 lakhs has been set apart for inland fisheries, Rs. 13 lakhs for marine fisheries and the balance of Rs. 31.50 lakhs has been set apart for other departmental activities. I want to know from the Government for what this Rs. 31.50 lakhs has been allotted, for what schemes and under which heads, I want a clarification for this ? The allocation for the marine fisheries is only Rs. 13 lakhs. In all the coastal belts of South Kanara and North Kanara districts there are thousands of fishermen whose main livelihood depends on fishing. So the Government should know to develop fisheries what financial assistance should be given to these hard working people. Further the marine fisheries is a foreign exchange earner but inland fishery is not so. To-day we have very good market for the prawns. To-day an ordinary man and even myself cannot get prawns in the open market. The price of prawns to-day is Rs. 30 to 35 per kilo and that too it is difficult to get it. Therefore if the Government could provide more mechanised boats we could get lot of marine fish. You have got all the natural resources. If it is for any other business you have got to provide raw materials, you have to deposit money and share capital etc. but nature is kind to provide us the vast sea where you can get all kinds of fish produce. Therefore, my earnest request is to see that the marine fisheries are developed through out the coastal belt. I am selfish enough to say that my constituency *i.e.* Coondapur area has been neglected. Only few boats have been given to persons who have completed their training. I have been repeatedly saying. But what is the use ? Of course, there are youngsters who are trained in this mechanised fishing. But though the training is imparted to them, they have not been given these mechanised boats. Of course, the Minister is there--who is keen enough to develop and also our Director who is fully qualified and well experienced in this field is taking lot of interest. He also belong to the same community.

I think he is feeling delicate to ask more funds, because he hails from South Kanara District. For genuine purpose he should ask funds and the Government should provide funds to see that those plans are implemented properly. Therefore, I request the Government to see that this budget is revised at least for marine fisheries and provide Rs. 40 lakhs for this purpose. Under this marine fisheries there are different mode of fisheries. There are country crafts with one or two persons fishing. And also there are other types of fishing called "Rampani" and "Maribale". In this type of fishing nearly 100-150 people could work by using one boat. They have got a huge net. They spread the net at mid-night and go next day for catching the fish If they are fortunate enough they get plenty of fish ; and if they are not lucky enough they return with empty hands. You have to provide financial assistance to those people, to purchase their nets and boats.

Regarding the mechanised boats you have stopped the subsidy to the smaller 30 footers and you have gone to 43 footer. Only rich people can by such boats. What about ordinary fishermen ? So, you have got to go for 30 footers also. You have to consider this fisheries as an industry and have to help them. You should see that the fishermen of coastal belt are given subsidy to have these mechanised boats and engines. If you provide boats for the trained people, you can also solve the un-employment problem. In the un-employment programme they have created this training programme. But now you have stopped this giving of subsidy to boats. You have to continue this. If you are keen enough to develop marine fisheries you have to see that these un-employed youngsters are given mechanised boats.

Coming to inland fisheries I would like to say few words. In the drought prone area you have taken up these works intensively in Bijapur District. Why it is only for Bijapur and not for any other districts ? You are the Minister for the whole State. There are 18 districts more in the State. There should be uniformity in the distribution of schemes and allocation of funds etc., Let it be World Bank or Bulgarian assistance whatever it is there should be uniformity. Why I am telling this because, marine fisheries is the foreign exchange earning industry, which will have to be developed. I request the Minister to see that more funds are provided for this work. You have given 15 lakhs for Bijapur District. What is the share given to South Kanara and North Kanara Districts ? We too have got resources like sweet water and other climatic conditions suitable for such scheme. But you are not developing inland fishers in our District. During rainy seasons if inland fisheries are developed people could use those fish as marine fish is very scare then. If you develop inland

fisheries in South Kanara and North Kanara, it will not be a loss to you as it will provide you money and the people of South Kanara being more enterprising will bring profit to the department. So, I request the Government to see that these fisheries are developed even in South Kanara by providing more funds.

Coming to the National Fisheries Development Corporation, you have provided 11 88 lakhs It is a Central scheme Under this scheme fish godowns should be constructed and service stations to the mechanised boats are to be provided. I am grateful to the Minister for the rehabilitation scheme provided to Coondapur Taluk. Of course he has sanctioned about 1.20 lakhs for this scheme–*i.e.* to rehabilitate the fishermen of Bijadi and Gopadi villages. This should also be extended to Kodi and Thekkatte villages also.

Regarding Fisheries Corporation, the Chairman and the Mg. Director are trying their best to meet both ends. Of course from the time of its inception it is a loos budget. What is the reason for this? There are two white elephants viz. 'Vedavathi' and 'Chamundi'. Because of those two trawlers the Corporation is running under loss. I think they want two more trawlers without skilled personnel. How can you maintain the trawlers without proper personnel. Really it will be a loss unless you have proper skilled personnel for this. Instead of going for trawlers you can increase the mechanised boats, nets and other processing centres. I request the Government to see that more financial assistance is given to this Corporation so that it ean take up more works and minimise the loss.

With regard to Horticulture, at Coondapur we have got two farms one at Kumbhashi and another at Kelur, There is no development of any kind. It is stand-still. At the district level you have got the Horticulture District officer At Karkal you have posted one Assistant Directer This Assistant Director who is at Karkal should be given the jurisdiction of Udipi and Coondapur also. If his jurisdiction is extended to Udipi and Coondapur he can go over these Taluks and have the development works improved with his supervision. There are vast interior areas where you can develop these mixed varieties of mango, pine-apple, banana pepper and cocoanut etc., But without proper supervision it is no good to have development. I request the Minister to extend the jurisdiction of this Assistant Director to Coondapur and Udipi also to take charge of those Taluks also. The daily wages paid to the workers employed by the Horticulture Department is too meagre. Even though there is a minimum wages Act, but the provisions of this Act are not yet applied to these workers. Hence I request the Government to see that the wages paid to these workers are enhanced to atleast Rs. 6/–per day.

4-30 P.M.

Several schemes have been conceived for the development of the Malnad areas. There is a Bulgarian Assistance, World Bank assistance and also the Wastern Ghat assistance for the development of Malnad areas. Our South Canara comes under the Malnad Area. Kundapoor comes under the Western Ghat Development area I request the Government to see that each nook and corner of the area is developed. Facilities should be extended for the development of kitchen gardens in every house which would enable the house-wife to have a garden of her own to grow vegetables.

With regard to the Animal Husbandry, I request the Government to have a Rural Veterinary Dispensary for a group of five villages so that the animals of the peasants could be looked after well.

I want both the Ministers to be men of action. I can say that the Minister for Fisheries is selfish. He looks after his district very well. I want him to be stow his attention to all the districts alike.

With these few words, I thank the Chair and conclude my speech.

†ಶ್ರೀ ಎಸ್ ಹಮೀದ್ ಷಾ — (ಶಿವಾಜಿನಗರ) ಮಾನ್ಯ ಉಪಾಧ್ಯಕ್ಷರೇ, ಇವತ್ತು ನಾನು ಸಭೆಯ ಮುಂದಿರುವ ನಾಲ್ಕು ಬೇಡಿಕೆಗಳ ಮೇಲೂ ಮಾತನಾಡದೆ ಪಶುಪಾಲನಾ ಇಲಾಖೆ ಕುರಿತಾದ ಬೇಡಿಕೆ ಮೇಲೆ ಮಾತ್ರ ಮಾತನಾಡುವುದಕ್ಕೆ ನಿಂತಿದ್ದೇನೆ. ಪಶುಪಾಲನೆಯಲ್ಲಿ ನನಗೆ ಸ್ವಲ್ಪ ಅನುಭವ ಇದೆ. ಬೆಂಗಳೂರು ನಗರದಲ್ಲಿ ಹಸುಗಳನ್ನು ಸಾಕುವುದು ಎಷ್ಟು ಕಷ್ಟ ಎನ್ನುವುದು ಮಾನ ಸಚಿವರಿಗೆ ಗೊತ್ತಿದೆ. ದೊಡ್ಡಬಳ್ಳಾಪುರದ ಸನ್ಮಾನ್ಯ ಸದಸ್ಯ ಶ್ರೀ ರಾಮೇಗೌಡರು ಮಾತನಾಡುತ್ತಾ, ಫೂಟ್ ಅಂಡ್ ಮೌತ್ ರೋಗದ ಬಗ್ಗೆ ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಈ ಒಂದು ಕಾಯಿಲೆ ಜಾಸ್ತಿಯಾಗುತ್ತಿದೆ. ಹಳೇ ಕಾಲದಲ್ಲಿ ಈ ಕಾಯಿಲೆ ಬಂದಾಗ ಇಜತ್‌ನಗರದಿಂದ ಔಷಧಿಯನ್ನು ತರಿಸಿ, ಸರಬರಾಜು ಮಾಡುತ್ತಿದ್ದರು ಆಗ ಅದರ ಬೆಲೆ ಕೂಡ ಬಹಳ ಕಡಿಮೆ ಇತ್ತು. ಆದರೆ ಈಗ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಇದಕ್ಕೆ ಏನು ಕಾರಣ ಎನ್ನುವುದು ನನಗೆ ಗೊತ್ತಾಗಲಿಲ್ಲ. ಬೆಂಗಳೂರು ನಗರದಲ್ಲಿ ಮಾತ್ರ ಒಂದು ಹಸುವನ್ನು ಸಾಕುವುದು ಬಹಳ ಕಷ್ಟಕ್ಕೆ ಬಂದಿದೆ. ಹಸುಗಳಿಗೆ ಫೂಟ್ ಅಂಡ್ ಮೌತ್ ವ್ಯಾಧಿ ಬಂದುಬಿಟ್ಟರಂತೂ, ಬಹಳ ಕಷ್ಟಕ್ಕೀಡಾಗುತ್ತದೆ ಈ ಕಾಯಿಲೆ ಬಂದಾಗ, ಫಲ ಇದ್ದ ಹಸುಗಳಿಗೆ ಗರ್ಭಪಾತವಾಗುತ್ತದೆ. ಇಂಥ ಸಂದರ್ಭದಲ್ಲಿ ಒಂದು ಹಸು ಇಟ್ಟುಕೊಂಡಿರುವ ಬಡವ, ಆ ಹಸುವನ್ನು ಹೇಗೆ ಸಾಕುತ್ತಾನೆ? ಈಗ ಒಂದು ಹಸುವಿನ ಬೆಲೆ ಸರ್ವೇಸಾಧಾರಣವಾಗಿ ಎರಡು ಸಾವಿರದಿಂದ ಹಿಡಿದು ಹನ್ನೆರಡು ಸಾವಿರದವರೆಗೂ ಇದೆ. ಒಂದು ವೇಳೆ, ಒಬ್ಬ ಬಡವ ಹತ್ತು ಸಾವಿರ ಬೆಲೆ ಬಾಳುವ ಒಂದು ಹಸು ಇಟ್ಟುಕೊಂಡಿದ್ದು, ಅದು ಸತ್ತು ಹೋದರೆ, ಅವನ ಕುಟುಂಬವೇ ನಾಶವಾಗುತ್ತದೆ. ಆದುದರಿಂದ, ಫೂಟ್ ಅಂಡ್ ಮೌತ್ ವ್ಯಾಧಿಯು ಹಸುಗಳಿಗೆ ಬಾರದಂತೆ, ಸರಿಯಾದ ಒಂದು ಇನಾಕ್ಯುಲೇಷನ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಸನ್ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು, ನಮ್ಮ ಕಂಟೋನ್ಮೆಂಟ್ ಪ್ರದೇಶದಲ್ಲಿರುವ ಪಶುವೈದ್ಯಶಾಲೆಯಲ್ಲಿದ್ದ ಒಬ್ಬ ವೈದ್ಯರನ್ನು ಬೇರೆ ಜಾಗಕ್ಕೆ ವರ್ಗ ಮಾಡಿದ್ದಾರೆ. ಆದರೆ ಇಲ್ಲಿಯವರೆಗೆ ಆ ಜಾಗಕ್ಕೆ ಇನ್ನೊಬ್ಬ ವೈದ್ಯರನ್ನು ನೇಮಿಸಿಲ್ಲ. ಆದುದರಿಂದ, ಮಾನ್ಯ ಮಂತ್ರಿಗಳು ಅಲ್ಲಿಗೆ ಒಬ್ಬ ವೈದ್ಯರನ್ನು ನೇಮಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ,

ಇನ್ನು ಬೆಂಗಳೂರಿನಲ್ಲಿ ಹಸುಗಳಿಗೆ ಆಹಾರ ಸಿಕ್ಕುವುದು ತುಂಬಾ ಕಷ್ಟವಾಗಿದೆ. ಹಿಂದೆ ಒಂದು ಕೇಜಿ ಗೋಧಿ ತವುಡಿಗೆ ಒಂದು ರೂಪಾಯಿ ಇತ್ತು. ಈಗ ಅದರ ಬೆಲೆ ಒಂದೂಕಾಲು ರೂಪಾಯಿ ಆಗಿದೆ. ಇನ್ನು ಸ್ವಲ್ಪ ದಿವಸ ಹೋದರೆ, ಅದರ ಬೆಲೆ ಎರಡು ರೂಪಾಯಿಗಳಾಗುತ್ತದೆಯೋ ಏನೋ ಗೊತ್ತಾಗುವುದಿಲ್ಲ ಒಂದು ಹಸುವಿಗೆ, ಬೆಳಗ್ಗೆ ನಾಲ್ಕು ಕೇಜಿ ಮತ್ತು ಸಾಯಂಕಾಲ ನಾಲ್ಕು ಕೇಜಿ–ಹೀಗೆ ಒಟ್ಟು

ಎಂಟು ಕೇಜಿ ಆಹಾರ ಕೊಡಲೇಬೇಕಾಗುತ್ತದೆ. ಆದರೆ, ನಮ್ಮ ಆಹಾರ ಇಲಾಖೆಯವರು ಒಂದು ತಿಂಗಳಿಗೆ ಆರುಕೇಜಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಹೀಗೆ ಆಹಾರ ಇಲಾಖೆಯವರು ಕೊಟ್ಟರೆ, ನಾವು ಹಸು ಗಳಿಗೆ ಆಹಾರವನ್ನು ತಪ್ಪು ಸಾಸರಗಳಲ್ಲಿ ಕೊಡಬೇಕೇ ಎನ್ನುವುದು ಅರ್ಥವಾಗುವುದಿಲ್ಲ. ಇನ್ನು ಮೇಲೆ ಗೋಧಿ ತವಡನ್ನು ಕಪ್ಪುಸಾರದಿನಲ್ಲಿ ಕೊಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ ಇನ್ನು, ಹಿಂಡಿಯಲ್ಲಿ ಹುಣಸೇಬೀಜವನ್ನು ಬೆರಕೆ ಮಾಡಿ ಕೊಡುತ್ತಿದ್ದಾರೆ. ಇದರಿಂದ ಹಸು ಸಾಕುವವರ ಗತಿ ಹೇಳತೀರದಾಗಿದೆ ಒಂದು ಹಸು ಸಾಕುವುದು ಎಷ್ಟು ಕಷ್ಟವಿದೆ ಎಂದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಸರ್ವೇಸಾಧಾರಣವಾಗಿ ಒಂದು ಮೀಡಿಯಂ ಹಸು ಸಾಕುವುದಕ್ಕೆ ಒಂದು ತಿಂಗಳಿಗೆ ಸುಮಾರು ನಾನೂರು ರೂಪಾಯಿ ಖರ್ಚಾಗುತ್ತದೆ. ಒಬ್ಬಳು ಹೆಂಡತಿಯನ್ನು ಸಾಕುವುದಕ್ಕೆ ಇನ್ನೂರು ರೂಪಾಯಿ ಖರ್ಚಾಗತ್ತದೆ ಆದರೆ, ಹಸುವನ್ನು ಸಾಕುವುದು ಹೆಂಡತಿಯನ್ನು ಸಾಕುವುದಕ್ಕಿಂತಲೂ ಕಷ್ಟವಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಇತ್ತಕಡೆ ತಮ್ಮ ಗಮನವನ್ನು ಹರಿಸಬೇಕಾಗಿದೆ. ಇಲ್ಲದೆ ಹೋದರೆ, ಬೆಂಗಳೂರಿನ ಜನ ತುಂಬಾ ಕಷ್ಟಕ್ಕೆ ಒಳಗಾಗುತ್ತಾರೆ.

ಮಾನ್ಯ ಮಂತ್ರಿಗಳು ನನ್ನೊಡನೆ ಒಂದು ದಿವಸ ಬಂದರೆ, ಅವರನ್ನು ಬೆಂಗಳೂರಿನ ಮಾರುಕಟ್ಟೆಯ ನ್ನೆಲ್ಲಾ ನೋಡಿಸಿಕೊಂಡು ಬರುತ್ತೇನೆ. ಅಲ್ಲಿ ಮಾಂಸದ ಧಾರಣೆ ಏನು ಇದೆ ಎಂದು ಆಗ ಅವರಿಗೆ ಗೊತ್ತಾಗುತ್ತದೆ. ಈಗ ಒಂದು ಕೇಜಿ ಮಾಂಸದ ಬೆಲೆ ಹನ್ನೆರಡು ರೂಪಾಯಿ ಇದೆ ನಾನು ಮಾನ್ಯ ಮಂತ್ರಿಗಳಿಗೆ ಈಗಾಗಲೇ ಒಂದು ಪತ್ರ ಬರೆದಿದ್ದೇನೆ ಆ ಸಂಬಂಧ ಪಟ್ಟವರೆಲ್ಲರನ್ನೂ ಸಭೆ ಕರೆಸಿ, ಕುಳಿತುಕೊಂಡು ಮಾತನಾಡಿ. ಎಂದು ತಿಳಿಸಿದ್ದೇನೆ. ಅವರಿಗೆ ಒಂದು ಕೇಜಿ ಮಾಂಸ ಮಾರಿದರೆ ಆರು ರೂಪಾಯಿ ಸಿಗುತ್ತಾ ಇದೆ. ಹಾಗಿರುವಾಗ, ಅವರು ಸಾರ್ವಜನಿಕರಿಗೆ ಹತ್ತು ರೂಪಾಯಿಯಂತೆ ಒಂದು ಕೇಜಿ ಕೊಡುವುದಿಲ್ಲ; ಹನ್ನೆರಡು ಹದಿನಾಲ್ಕು ರೂಪಾಯಿಗಳಿಗೇ ಕೊಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ನಾನು ಪತ್ರ ಬರೆದಿರುವುದು ಪ್ರಚಾರವಾಗಿ, ಕೆಲವರು ಎಂ. ಪಿ. ಯಿಂದ ಒತ್ತಡ ತಂದು ಇದನ್ನು ನಿಲ್ಲಿಸಿ ಬಿಡುತ್ತಾರೆ. ಆದುದರಿಂದ ದಯವಿಟ್ಟು ಅವರನ್ನು ಸಭೆ ಸೇರಿಸಿ, ಒಳ್ಳೆಯ ದರದಲ್ಲಿ ಮಾಂಸ ಜನರಿಗೆ ಸಿಕ್ಕುವ ಹಾಗೆ ವ್ಯವಸ್ಥೆ ಮಾಡುವುದು ಮಾನ್ಯ ಮಂತ್ರಿಗಳ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಹಾಗೆ ಮಾಡದೆ ಹೋದರೆ ಏನೂ ಕೆಲಸವಾಗುವುದಿಲ್ಲ.

ಇನ್ನು ಕೋಳಿ ಸಾಕಣೆಯಲ್ಲಿ ಏನು ಕಷ್ಟವಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳ ಬೇಕು. ರಾಣಿಕೇಟ್ ವ್ಯಾಧಿ ಕೋಳಿಗಳಿಗೆ ಬಂದುಬಿಟ್ಟರೆ, ಯಾರಾದರೊಬ್ಬ ಒಂದು ಸಾವಿರ ಕೋಳಿ ಗಳನ್ನು ಸಾಕಿದ್ದರೆ, ಅವನು ಮೇಲಕ್ಕೆ ತಲೆ ಎತ್ತುವುದಕ್ಕಾಗುವುದಿಲ್ಲ. ಆದುದರಿಂದ, ಮಾನ್ಯ ಮಂತ್ರಿ ಗಳು ಈ ವ್ಯಾಧಿ ಕೋಳಿಗಳಿಗೆ ಬಾರದೇ ಇದ್ದ ಹಾಗೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳು ತ್ತೇನೆ, ಇನ್ನು, ಬೆಂಗಳೂರು ನಗರದಲ್ಲಿ ಹಸಿರು ಹುಲ್ಲು ಸಿಕ್ಕುತ್ತಾ ಇಲ್ಲ ಇಲ್ಲಿಂದ ಹತ್ತು ಮೈಲಿ ದೂರದಿಂದ ಹಸಿರು ಹುಲ್ಲು ಬರಬೇಕಾಗಿದೆ. ಇಲ್ಲದೇ ಹೋದರೆ, ಬಹಳ ಕಷ್ಟಪಡಬೇಕಾಗುತ್ತದೆ. ಆದುದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೂಡ ನಮಗೆ ಸಹಾಯ ಮಾಡಬೇಕೆಂದು ಹೇಳ ಬಯಸುತ್ತೇನೆ.

ಈಗ ಹಸುಗಳಿಗೆ ಕೃತಕ ಗರ್ಭದಾರಣೆ ಮಾಡುತ್ತಿದ್ದಾರೆ. ಹೀಗೆ ಕೃತಕ ಗರ್ಭಧಾರಣೆ ಮಾಡಿದಂಥ ಹಸುಗಳಲ್ಲಿ ಶೇಕಡ ಮೂವತ್ತು ಹಸುಗಳಿಗೆ ಮಾತ್ರ ಗರ್ಭ ಕಟ್ಟುತ್ತದೆ. ಇನ್ನು ಉಳಿದ ಎಪ್ಪತ್ತು ಹಸು ಗಳಿಗೆ ಮೊದಲೇ ಸತ್ತುಹೋಗಿರುವ ವೀರ್ಯವನ್ನು ಕೊಡುತ್ತಾರೆ. ಇದರಿಂದ, ಕೃತಕ ಗರ್ಭಧಾರಣೆ ಮಾಡಿಸಲು ಪುನಃ ಪುನಃ ಮಾಡುವುದರಿಂದ, ಒಳ್ಳೆಯ ಹಸುಗಳು ಹಾಳಾಗಿ ಹೋಗುತ್ತಿವೆ. ಆದುದರಿಂದ ಕೃತಕ ಗರ್ಭಧಾರಣೆ ವೀರ್ಯವನ್ನು ಎಲ್ಲಿ ಸಂಗ್ರಹಿಸುತ್ತಿದ್ದಾರೆ, ಅಲ್ಲಿ ಅದನ್ನು ಸರಿಯಾಗಿ ಪರೀಕ್ಷೆಮಾಡಿ ನೋಡಿ, ತರಿಸಿ ಅದನ್ನು ವೈಜ್ಞಾನಿಕವಾಗಿ ಪ್ರಯೋಗಿಸಬೇಕು ಎಂದು ನಾನು ತಿಳಿಸಬಯಸುತ್ತೇನೆ. ಮಾನ್ಯ ಮಂತ್ರಿಗಳು ಫ್ರೋಸನ್ ಸಿಮೆನ್ಸ್ ತರಿಸುತ್ತೇವೆ ಎಂದು ಹೇಳಿದ್ದರು. ಆದರೆ, ಅದು ಯಾವಾಗ ಬರುತ್ತದೆ ಎನ್ನುವುದು ಇನ್ನೂ ಗೊತ್ತಾಗಿಲ್ಲ.

ಇನ್ನು ರೆಂಡರ್ ಪೆಸ್ಟ್ ವ್ಯಾಧಿ ಜಾಸ್ತಿಯಾಗುತಾ ಇದೆ. ಇದಕ್ಕೆ ಕಾರಣವೇನೆಂದರೆ, ಪಕ್ಕದ ಊರುಗಳಿಂದ ಬೆಂಗಳೂರಿಗೆ ಹಸುಗಳನ್ನು ತರುವಾಗ, ಆ ಹಸುಗಳಲ್ಲಿನ ವ್ಯಾಧಿ ಇಲ್ಲಿನ ಹಸುಗಳಿಗೂ ಹರಡುತ್ತದೆ. ಆದುದರಿಂದ, ಚೆಕ್‌ಪೋಸ್ಟ್‌ಗಳಲ್ಲಿ ಈ ಹಸುಗಳನ್ನು ಪರೀಕ್ಷಿಸಿ, ಅವುಗಳಿಗೆ ಆರ್. ಪಿ. ಇಂಜಕ್ಷನ್ ಹಾಕಿ, ನಗರದ ಒಳಕ್ಕೆ ತರುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ

ಮಾಡಿಕೊಳ್ಳುತ್ತೇನೆ. ನಾವು ಈಗ ಏನಾದರೂ ಮಾನ್ಯ ಮಂತ್ರಿಗಳಿಗೆ ತಿಳಿಸಿದರೆ, ಅವರು ಅಧಿಕಾರಿಗಳಿಗೆ ಹೇಳಿಬಿಡುತ್ತಾರೆ. ಅವರು ಅಧಿಕಾರಿಗಳು, ಅವರಿಗೆ ಏನೂ ಗೊತ್ತಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ...

ಶ್ರೀ ಯು. ಟಿ. ಫರೀದ್ :—ಅಧಿಕಾರಿಗಳು ಐ.ಎ.ಎಸ್. ಓದಿ ಬಂದಿರುತ್ತಾರೆ, ಅವರಿಗೆ ಗೊತ್ತಾಗುವುದಿಲ್ಲವೇ ?

ಶ್ರೀ ಎಸ್. ಹಮೀದ್ ಷಾ :—ಐ.ಎ.ಎಸ್. ಅಧಿಕಾರಿಗಳಿಗೆ ಹಸುವಿನ ಬಗ್ಗೆ ಏನು ಗೊತ್ತಿರುತ್ತದೆ ? ಅವರಿಗೆ ಪ್ರಾಕ್ಟಿಕಲ್ ಗೊತ್ತಿರುವುದಿಲ್ಲ; ಥಿಯರಿ ಮಾತ್ರ ಗೊತ್ತಿರುತ್ತದೆ. ಆಹಾರ ಇಲಾಖೆಯ ಅಧಿಕಾರಿಗಳ ಹತ್ತಿರ ಹಸುಗಳಿಗೆ ಆಹಾರ ಸರಬರಾಜು ಮಾಡುವ ಬಗ್ಗೆ ಮಾತನಾಡಲು ಹೋಗಿದ್ದೆ. ನಾನು ಅವರ ಹತ್ತಿರ ಮಾತನಾಡಿದೆ. ಈ ಹಸುಗೆ ಬೇಕಾದ ಬ್ರಾನ್ ಹೆಚ್ಚಾಗಿ ಸಿಕ್ಕುವುದಿಲ್ಲ ಎಂದು ಹೇಳಿದರು. ನನಗೆ ಗೊತ್ತಿರುವ ಹಾಗೆ ಈಗ ಈ ಬ್ರಾನ್ ಜಾಸ್ತಿ ಸಪ್ಲೈ ಆಗುತ್ತಾ ಇದೆ ಅದು ಎಲ್ಲಿಗೆ ಹೋಗುತ್ತಾ ಇದೆಯೋ ಗೊತ್ತಿಲ್ಲ. ಒಂದು ಮಧ್ಯಮ ವರ್ಗದ ಹಸು ಸಾಕಬೇಕಾದರೆ ಒಂದು ದಿನಕ್ಕೆ ೨ ಕೆ.ಜಿ. ಬೂಸಾ, ಒಂದು ಕೆ.ಜಿ. ಕಡ್ಲೆ ಬೂಸಾ ಮತ್ತು ಒಂದು ಕೆ.ಜಿ. ಕಡ್ಲೆ ಹಿಂಡಿ ಬೇಕಾಗುತ್ತದೆ. ೧೨ ಸಾವಿರದಷ್ಟು ಒಂದು ದೊಡ್ಡ ಹಸು ಸಾಕಬೇಕಾದರೆ ೧೨ ಕೆ.ಜಿ. ಅದಕ್ಕೆ ಹಾಕಬೇಕಾಗುತ್ತದೆ. ಇಷ್ಟು ಆಹಾರ ಹಾಕದೇ ಹೋದರೆ ನಮಗೆ ಹಾಲೂ ಸಿಕ್ಕುವುದಿಲ್ಲ ಮತ್ತು ಹಸುವೂ ಕೂಡ ಉಳಿಯುವುದಿಲ್ಲ.

ಇನ್ನು ನಮ್ಮ ಮಿತ್ರರು ಹಳ್ಳಿಕಾರ ಮತ್ತು ಅಮೃತ್‌ಮಹಲ್ ಬ್ರೀಡ್ ಬಗ್ಗೆ ಹೇಳಿದರು, ಬೆಂಗಳೂರು ಸುತ್ತಮುತ್ತ ೧೦೦ ಮೈಲಿ ದೂರ ಹೋದರೂ ಕೂಡ ಈ ಅಮೃತ ಮಹಲ್ ಮತ್ತು ಹಳ್ಳಿಕಾರ್ ಬ್ರೀಡ್‌ಗಳು ಸಿಕ್ಕುವುದೇ ಇಲ್ಲ ಎಂದು. ಕಾರಣ ಇದನ್ನು ಕ್ರಾಸ್ ಬ್ರೀಡ್ ಮಾಡಬೇಕು; ಅಂತ ಇದೆ ಆದುದರಿಂದ ಇದನ್ನು ಒಳ್ಳೆಯ ರೀತಿಯಲ್ಲಿ ಈ ಹಳ್ಳಿಕಾರ ಮತ್ತು ಅಮೃತ್ ಮಹಲ್ ಬ್ರೀಡ್‌ಗಳನ್ನು ಕಾಪಾಡಿಕೊಂಡು ಬರಬೇಕು ಎಂದು ಕೇಳಿಕೊಂಡು ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಎನ್. ಚಿಕ್ಕೇಗೌಡ : (ವ್ಯವಸಾಯ ಮತ್ತು ಪಶುಸಂಗೋಪನಾ ಶಾಖೆಗಳ ಮಂತ್ರಿಗಳು) ಮಾನ್ಯ ಉಪಸಭಾಧ್ಯಕ್ಷರೇ, ಈಗಾಗಲೇ ಮಾತನಾಡಿದಂಥ ಅನೇಕ ಮಾನ್ಯ ಸದಸ್ಯರುಗಳು ವ್ಯವಸಾಯ ಹಾಗೂ ಪಶುಪಾಲನೆ ಬಗ್ಗೆ ರಾಜ್ಯದಲ್ಲಿ ಆಗಿರತಕ್ಕಂಥ ಪ್ರಗತಿ ಮತ್ತು ಆಗಬೇಕಾದಂಥಾ ಇನ್ನೂ ಹೆಚ್ಚು ಅನುಕೂಲತೆಗಳನ್ನು ಒದಗಿಸತಕ್ಕಂಥಾ ವಿಚಾರದಲ್ಲಿ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಉಪಸಭಾಧ್ಯಕ್ಷರೇ, ಈಗಾಗಲೇ ನಮ್ಮ ರಾಜ್ಯದಲ್ಲಿ ಅದರಲ್ಲೂ ದಕ್ಷಿಣಭಾರತದಲ್ಲಿರತಕ್ಕಂಥಾ ರಾಜ್ಯದಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಬಹಳ ಪ್ರಗತಿಯನ್ನು ಸಾಧಿಸಿದೆ ಅದರಲ್ಲೂ ಎಕರಾವಾರು ಇಳುವರಿಯೂ ಕೂಡ ಹೆಚ್ಚಾಗಿದೆ ಎಂದು ಹೇಳಲು ಅಪೇಕ್ಷೆ ಪಡುತ್ತೇನೆ. ಅಷ್ಟೇ ಅಲ್ಲದೆ ನೀರಾವರಿ ಇರತಕ್ಕಂಥ ಭೂಮಿಯಲ್ಲೇ ಆಗಲಿ ಅಥವಾ ಮಳೆ ಆಶ್ರಯದಲ್ಲಿ ಇರತಕ್ಕಂಥಾ ಭೂಮಿಯಲ್ಲೇ ಆಗಲಿ ಪಂಜಾಬ್ ಮತ್ತು ಹರಿಯಾಣ ಬಿಟ್ಟರೆ ದಕ್ಷಿಣ ಭಾರತದಲ್ಲಿ ಅದರಲ್ಲೂ ನಮ್ಮ ರಾಜ್ಯ ಈ ವ್ಯವಸಾಯ ಕ್ಷೇತ್ರದಲ್ಲಿ ಮುಂದುವರಿದಿದೆ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ತಮಗೆ ಒಂದು ನಿದರ್ಶನ ಕೊಡಲು ಬಯಸುತ್ತೇನೆ. ಕಳೆದ ೨-೩ ವರ್ಷದಿಂದ ನಮ್ಮ ರಾಜ್ಯದಲ್ಲಿ ಆಹಾರೋತ್ಪಾದನೆ ಎಷ್ಟಾಗಿದೆ ಅನ್ನುವುದನ್ನು ವೀಕ್ಷಿಸಿ ನೋಡಿದರೆ ೧೯೭೩-೭೪ರಲ್ಲಿ ೬೧.೫೧ ಲಕ್ಷಟನ್ ಅಷ್ಟು ಆಹಾರೋತ್ಪಾದನೆಯಾಗಿದೆ. ೧೯೭೪-೭೫ರಲ್ಲಿ ೬೩.೯೮ ಲಕ್ಷಟನ್ ಅಷ್ಟು ಆಹಾರೋತ್ಪಾದನೆ ಆಗಿದೆ, ೧೯೭೫-೭೬ರಲ್ಲಿ ನಾವು ಏನು ಒಂದು ಗುರಿ ಇಟ್ಟುಕೊಂಡಿದ್ದೆವೋ ಅದಕ್ಕೂ ಮೀರಿ ಅಂದರೆ ೬೭.೫೮ ಲಕ್ಷಟನ್ ಅಷ್ಟು ಆಹಾರೋತ್ಪಾದನೆ ಆಗಿದೆ. ಆದರೆ ಈ ವರ್ಷದಲ್ಲಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ರಾಜ್ಯದಲ್ಲಿ ಹೆಚ್ಚಾಗಿ ಮಳೆಯಾಗಿದೆ. ನಮ್ಮ ರಾಜ್ಯದಲ್ಲಿ ಸ್ವಲ್ಪ ನೀರಾವರಿ ಇದ್ದರೂ ಸಹ ಈ ಖರೀಫ್ ಕ್ರಾಪ್‌ನಲ್ಲಿ ನಾವು ಏನು ಒಂದು ಟಾರ್ಗೆಟನ್ನು ಇಟ್ಟುಕೊಂಡಿದ್ದೆವೋ ಅಂದರೆ ೪೯.೫೨ ಲಕ್ಷಟನ್ ಅಷ್ಟು ಉತ್ಪಾದನೆ ಮಾಡಬೇಕು ಅಂತಾ ಏನು ಒಂದು ಟಾರ್ಗೆಟ್ ಇಟ್ಟುಕೊಂಡಿದ್ದೆವೋ ಆ ಗುರಿ ಮೀರಿದೆ ಅಂದರ ೫೦-೪೨ ಲಕ್ಷಟನ್ ಅಷ್ಟು ಆಹಾರೋತ್ಪಾದನೆಯಾಗಿದೆ. ಇನ್ನು ರಬಿ ಕ್ರಾಪ್‌ನಲ್ಲಿ ಹೇಳುವುದಾದರೆ ನಾವು ಇದರ ಬಗ್ಗೆ ಏನು ಒಂದು ಗುರಿ ಇಟ್ಟುಕೊಂಡಿದ್ದೆವೋ ಭತ್ತ ಮುಂತಾದುವುಗಳಿಗೆ ಇವಕ್ಕೆ ತಡವಾಗಿ ಮಳೆ ಬಿದ್ದುದರಿಂದ ಬಿತ್ತುವುದಕ್ಕೆ ಸರಿಯಾದ ಹದ ಬಾರದೇ ಇದ್ದುದರಿಂದ ಅದರಲ್ಲಿ ಸ್ವಲ್ಪ ಕಡಿಮೆ ಉತ್ಪಾದನೆಯಾಗಿದೆ. ಇನ್ನು ಬೇಸಿಗೆ ಕ್ರಾಪ್ ಬಗ್ಗೆ ಹೇಳುವ

ದಾದರೆ ಇದರಲ್ಲಿ ೬.೨೦ ಲಕ್ಷಟನ್ ಇಷ್ಟು ಆಹಾರೋತ್ಪಾದನೆಯಾಗುತ್ತದೆ ಇಂತ ಇಟ್ಟುಕೊಂಡಿದ್ದರೂ ಕೂಡ ನಮ್ಮ ಒಂದು ನಿರೀಕ್ಷೆ. ಅದಕ್ಕಿಂತಲೂ ಜಾಸ್ತಿಯಾಗಿ ಅಂದರೆ ೭.೭೦ ಲಕ್ಷಟನ್ ಅಷ್ಟು ಆಹಾರೋತ್ಪಾದನೆಯಾಗುತ್ತದೆ ಅಂತ ಇಟ್ಟುಕೊಂಡಿದ್ದೇವೆ. ಒಟ್ಟಿನಲ್ಲಿ ಹೇಳುವುದಾದರೆ ಈ ವರ್ಷ ೬೭.೭೦ ಲಕ್ಷಟನ್ ಅಷ್ಟು ಆಹಾರೋತ್ಪಾದನೆಯಾಗುತ್ತದೆ ಅಂತ ನಿರೀಕ್ಷಿಸಬಹುದು. ಈ ದೇಶದಲ್ಲಿ ಸಕಾಲದಲ್ಲಿ ಮಳೆ ಎಲ್ಲಿ ಆಗಿದೆಯೋ ಅಲ್ಲಿ ಬೇಸಿಗೆ ಕಾಲದಲ್ಲೂ, ಮತ್ತು ಕೆರೆ ಕಟ್ಟೆ ಬಾವಿಗಳಲ್ಲಿ ಎಲ್ಲಿ ನೀರು ಇದೆಯೋ ಅಂಥಾ ಕಡೆಗಳಲ್ಲೂ ಸಹ ಹೆಚ್ಚು ಆಹಾರೋತ್ಪಾದನೆಯನ್ನು ಮಾಡಲಿಕ್ಕೆ ಅನುಕೂಲವಾಗುವುದಲ್ಲದೆ ಇನ್ನೂ ಒಳ್ಳೆಯ ಗುರಿಯನ್ನು ಮುಟ್ಟಲಿಕ್ಕೆ ಕೆರೆಗಳ ಮುಖಾಂತರ ಆಹಾರೋತ್ಪಾದನೆಯನ್ನು ಹೆಚ್ಚು ಮಾಡಬಹುದು ಅಂತ ನಿರೀಕ್ಷಿಸುತ್ತ ಇದ್ದೇವೆ. ಇನ್ನು ಕ್ಯಾಷ್ ಕ್ರಾಪ್ಸ್ ಬಗ್ಗೆ ಹೇಳುವುದಾದರೆ ಹತ್ತಿ. ಕಬ್ಬು. ಎಣ್ಣೆಕಾಳುಗಳು ಇನ್ನೂ ಇತರ ಬೆಳೆಗಳು ಏನು ಇವೆ ಅವೂ ಕೂಡ ಹೆಚ್ಚು ಗುರಿ ಮುಟ್ಟುವುದಕ್ಕೆ ಸಾಧ್ಯ ಇದೆ ಎಂದು ಹೇಳುತ್ತೇನೆ ಆದರೆ ಹತ್ತಿ ಮಾತ್ರ ಈ ವರ್ಷದಲ್ಲಿ ಉತ್ಪಾದನೆ ಶೇಕಡ ಅರ್ಧದಷ್ಟು ಕಡಿಮೆಯಾಗಬಹುದು ಎಂದು ಕಾಣುತ್ತದೆ. ಮತ್ತು ನಮ್ಮ ರಾಜ್ಯದಲ್ಲಿ ವ್ಯವಸಾಯದ ಇಲಾಖೆಯಲ್ಲಿ ಒಳ್ಳೆಯ ಕೆಲಸ ಮಾಡಿರತಕ್ಕಂಥಾದ್ದರ ಬಗ್ಗೆ ಅದರಲ್ಲೂ ಹೆಚ್ಚು ಇಳುವರಿ ಕೊಡತಕ್ಕಂಥಾ ಬೆಳೆಗಳು ಏನು ಇವೆ ಇದರ ಬಗ್ಗೆ ನಮ್ಮ ಪ್ಲಾನಿಂಗ್ ಕಮೀಷನ್‌ರವರು ಒಂದು ಹೆಚ್ಚಿನ ಗುರಿ ಇಟ್ಟಿದ್ದಾರೆ ಎಂದು ಹೇಳುವುದಕ್ಕೆ ಸಂತೋಷಪಡುತ್ತೇನೆ. ಈ ವರ್ಷ ೭೪-೭೫ರಲ್ಲಿ ೧೧.೩೪ ಲಕ್ಷ ಹೆಕ್ಟೇರ್‌ಗಳಲ್ಲಿ ಹೆಚ್ಚುವರಿ ಬೆಳೆಗಳನ್ನು ಬೆಳೆಯುವಂತೆ ಏನು ಒಂದು ಗುರಿ ಅವರು ಇಟ್ಟಿದ್ದಾರೆ ಅದಕ್ಕೂ ಮೀರಿ ೧೨.೫೦ ಲಕ್ಷ ಹೆಕ್ಟೇರ್‌ಗಳಲ್ಲಿ ಹೆಚ್ಚುವರಿ ಇಳುವರಿ ಬೆಳೆಯೋದಂಥಾ ಭತ್ತ ಬೆಳೆಯುವುದಕ್ಕೆ ಸಾಧ್ಯ ಇದೆ ಎಂದು ಹೇಳುತ್ತೇನೆ. ಇಷ್ಟೇ ಅಲ್ಲದೆ ಇದಕ್ಕಿಂತಲೂ ಹೆಚ್ಚಾಗಿ ನಮ್ಮ ರಾಜ್ಯದಲ್ಲಿ ಬೆಳೆಯುವಂಥಾ ಹೈಬ್ರೀಡ್, ಬಾಜ್ರಾ ಶಕ್ತಿ ಪೂರ್ಣ ಈ ತಳಿಗಳು ಏನು ಇವೆ ಅವುಗಳನ್ನೂ ಕೂಡ ಹೆಚ್ಚು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದೇವೆ. ೧೯೭೪-೭೫ಕ್ಕೆ ನಮ್ಮ ರಾಜ್ಯದಲ್ಲಿ ನೀರಾವರಿ ಅನುಕೂಲಗಳು ೧೯.೩೮ ಲಕ್ಷ ಹೆಕ್ಟೇರ್‌ಗಳಲ್ಲಿ ಇತ್ತು. ಈ ವರ್ಷ ೨೦.೯೮ ಲಕ್ಷ ಹೆಕ್ಟೇರ್‌ಗೆ ನೀರಾವರಿ ಅನುಕೂಲತೆ ಪಡೆಯುತಕ್ಕಂಥಾ ಒಂದು ಅವಕಾಶವನ್ನು ಮಾಡಿದ್ದೇವೆ ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸರಾಸರಿ ನೀರಾವರಿ ಅನುಕೂಲ ೧೯.೦೧ ಪರ್ಸಂಟೇಜ್ ಆಗಿದೆ ಇಷ್ಟು ಭೂಮಿ ನೀರಾವರಿಗೆ ಒಳಪಡುತ್ತದೆ; ಎಂದು ಈ ಒಂದು ಅಂಕಿಅಂಶದಿಂದ ಗೊತ್ತಾಗಿದೆ. ನಮ್ಮ ರಾಜ್ಯದಲ್ಲಿ ಮೊದಲು ಎಷ್ಟು ಇದ್ದುವು ಇವೊತ್ತಿನ ದಿವಸ ಎಷ್ಟು ಬಾವಿಗಳು ಇವೆ ಮತ್ತು ನೀರನ್ನು ಎತ್ತತಕ್ಕಂಥ ಪಂಪ್‌ಸೆಟ್ಟಿಗೆ ಎಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ ಅನ್ನುವುದನ್ನು ಹೇಳುತ್ತೇನೆ. ೧೯೬೫-೬೬ರಲ್ಲಿ ೬೨ ಸಾವಿರ ಬಾವಿಗೆ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿತ್ತು. ಈವೊತ್ತು ಅಂದರೆ ೧೯೭೬ನೇ ಸಾಲಿಗೆ ೨ಲಕ್ಷ ೧೯ಸಾವಿರ ಬಾವಿಗೆ ಪಂಪ್‌ಸೆಟ್ಟಿಗೆ ವಿದ್ಯುತ್‌ಚ್ಛಕ್ತಿಯನ್ನು ಒದಗಿಸಲಾಗಿದೆ. ಈ ಬಾವಿಗಳಿಗೆ ಪಂಪ್‌ಸೆಟ್ಟಿನ ಮೂಲಕ ನೀರನ್ನು ಎತ್ತುತ್ತಿದ್ದಾರೆ. ಪ್ರಧಾನಿಯವರು ತುರ್ತುಪರಿಸ್ಥಿತಿ ಘೋಷಣೆ ಮಾಡಿದಮೇಲೆ ಅದರಲ್ಲಿ ಅವರು ೨೦ ಅಂಶದ ಆರ್ಥಿಕ ಕ್ರಮಗಳನ್ನು ಕೈಗೊಂಡಾಗ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದು ಮುಖ್ಯವಾಗಿ ನೀರಾವರಿಗೆ ಮತ್ತು ಎರಡನೇಯದು ವಿದ್ಯುಚ್ಛಕ್ತಿಗೆ. ಈ ಬಾಬುಗಳಿಗೆ ಹೆಚ್ಚು ಹಣವನ್ನು ಒದಗಿಸಿ ಹೆಚ್ಚು ಹೆಚ್ಚು ಬೆಳೆಯುತಕ್ಕಂಥಾದ್ದು ಮುಖ್ಯ ಎಂದು ಹೇಳುತ್ತೇನೆ ಮತ್ತು ಶ್ರೀಮಾನ್ ರಾಮೇಗೌಡರು ನಮ್ಮ ರಾಜ್ಯದ ಸಾಯಿಲ್‌ನಲ್ಲಿ ಕಂಟೆಂಟ್ ಜಾಸ್ತಿಯಾಗಿದೆ. ಆದುದರಿಂದ ಆ ಭೂಮಿಯಲ್ಲೂ ಕೂಡ ಹೆಚ್ಚು ಒಡ್ಡುಗಳನ್ನು ಕಟ್ಟಿ ಒಣ ಬೇಸಿಗೆಯಲ್ಲಿ ಹೆಚ್ಚು ಆಹಾರೋತ್ಪಾದನೆ ಮಾಡತಕ್ಕಂಥಾದ್ದು ಮತ್ತು ತ ಬೆಳೆಯಲ್ಲಿ ಹೆಚ್ಚು ಇಳುವರಿ ಮಾಡತಕ್ಕಂಥಾದ್ದು ಮುಖ್ಯ ಎಂದು ಹೇಳಿದರು. ಮತ್ತು ಇದಕ್ಕೆ ಐ. ಡಿ. ಎ. ಪಿ ಪ್ರೋಗ್ರಾಂನಲ್ಲಿ ಹೆಚ್ಚು ಹಣವನ್ನು ಒದಗಿಸಲಿಲ್ಲ ಹಾಗೂ ಒದಗಿಸಿದಂಥಾ ಹಣದಲ್ಲೂ ಕೂಡ ನಮ್ಮ ತಾಲ್ಲೂಕಿನಲ್ಲಿ ಮತ್ತು ಇತರ ಕಡೆಗಳಲ್ಲಿ ಹೆಚ್ಚು ಖರ್ಚು ಮಾಡಲಿಲ್ಲ ಎಂದು ಹೇಳಿದರು. ಈ ಅಗ್ರಿಕಲ್‌ಚರ್ ಪಾಂಡ್ಸ್‌ಗೆ ಐ. ಡಿ. ಎ. ಪಿ ಪ್ರೋಗ್ರಾಂನಲ್ಲಿ ಶ್ರೀಮಾನ್ ರಾಮೇಗೌಡರು ಹೇಳಿದ ಹಾಗೆ ಅವರ ತಾಲ್ಲೂಕಿನಲ್ಲಿ ಹೆಚ್ಚು ಖರ್ಚು ಮಾಡಿಲ್ಲಾ. ಇದಕ್ಕೆ ಕಾರಣ ನಾವು ಹೆಚ್ಚಾಗಿ ಮಿಷನರಿ ಮತ್ತು ಅದರ ಎಕ್ವಿಪ್‌ಮೆಂಟ್ಸಿಗೆ ಖರ್ಚು ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ೧೯೭೨-೭೩ನೇ ಸಾಲಿನಲ್ಲಿ ಹೈದ್ರಾಬಾದ್ ಮತ್ತು ಬಾಂಬೆ ಕರ್ನಾಟಕದಲ್ಲಿ ಹೆಚ್ಚು ಬರಗಾಲ ಪರಿಸ್ಥಿತಿ ಬಂದಾಗ ಅಲ್ಲಿಗೆ ಹೆಚ್ಚು ಒಡ್ಡು ಹಾಕುವ ಕಾರ್ಯಕ್ರಮಗಳನ್ನು ಹಾಕಿ ಪೂರೈಸುತಕ್ಕಂಥಾ ಕಾರ್ಯಕ್ರಮವನ್ನು ಮಾಡಬೇಕಾಯಿತು. ಆ ದಿಶೆಯಲ್ಲಿ ಸರ್ಕಾರ ಹಂತಹಂತವಾಗಿ ಕೆಲಸ ಮಾಡಲು ಪ್ರಾರಂಭ ಮಾಡಿದೆ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಇದುವರೆಗೆ ೧೮.೪ ಲಕ್ಷ ಹೆಕ್ಟೇರ್‌ಗಳಲ್ಲಿ ಒಡ್ಡು ಹಾಕುವ ಕಾರ್ಯಕ್ರಮ ಮುಗಿದಿದೆ. ಒಟ್ಟು ಒಡ್ಡು ಹಾಕಬೇಕಾಗಿರತಕ್ಕಂಥಾದ್ದು 50½ ಲಕ್ಷ ಹೆಕ್ಟೇರ್‌ಗಳಲ್ಲಿ ಹಾಕಬೇಕಾಗಿದೆ. ಮುಂದಿನ

ವರ್ಷ ಅಂದರೆ ೭೬-೭೭ನೇ ಸಾಲಿನಲ್ಲಿ ಇದಕ್ಕೆ ೩ ಕೋಟಿ ರೂಪಾಯಿಯನ್ನು ಒದಗಿಸಿ ೩೩ ಸಾವಿರ ಹೆಕ್ಟಾರ್‌ಗಳಿಗೆ ಒಡ್ಡುಗಳನ್ನು ಹಾಕಿ ಪೂರೈಸುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದಲ್ಲದೆ ಇನ್ನೂ ೫೦ ಸಾವಿರ ಹೆಕ್ಟಾರ್‌ಗಳಲ್ಲಿ ಹೊಸ ಒಡ್ಡುಗಳನ್ನು ಹಾಕತಕ್ಕಂಥಾ ಕೆಲಸ ಮತ್ತು ಇನ್‌ಕಂಪ್ಲೀಟ್ ವರ್ಕ್ಸ್ ಆಗಿರತಕ್ಕಂಥಾ ಕಡೆ ೪ ಲಕ್ಷ ೫೦ ಸಾವಿರ ಹೆಕ್ಟಾರ್‌ಗಳಲ್ಲಿ ಒಡ್ಡು ಹಾಕುವ ಕೆಲಸವನ್ನು ಕಂಪ್ಲೀಟ್ ಮಾಡತಕ್ಕಂಥಾ ಕಾರ್ಯಕ್ರಮವನ್ನೂ ಕೂಡ ಹಾಕಿಕೊಂಡಿದ್ದೇವೆ. ಆದ್ದರಿಂದ ಇದಕ್ಕೆ ಹೆಚ್ಚಿಗೆ ಒಂದು ಕೋಟಿ ರೂಪಾಯಿಗಳನು ಒದಗಿಸಲಾಗಿದೆ. ಈ ರೀತಿ ೩ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಒದಗಿಸಿರುವುದರಿಂದ, ಈ ಕೆಲಸವನ್ನು ತ್ವರಿತಗತಿಯಿಂದ ಮುಂದುವರಿಸುತ್ತೇವೆ. ಮತ್ತು ಪೂರ್ತಿ ಆಗದಿರುವ ಕೆಲಸವನ್ನು ಸಹ ಪೂರ್ತಿ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ. ಇದರಿಂದ ರೈತರು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವಕಾಶವಾಗುವುದಲ್ಲದೆ, ರೈತರು ಸಾಲವನ್ನು ಕಂತುಗಳಲ್ಲಿ ತೀರಿಸುವುದಕ್ಕೂ ಅವಕಾಶವಾಗುತ್ತದೆಂದು ಹೇಳುತ್ತೇನೆ.

ಇನ್ನು ರೈತರು ಬೆಳೆದಂಥ ಮಾಲುಗಳಿಗೆ ಸರಿಯಾದಂಥ ಬೆಲೆ ಸಿಗುತ್ತಿಲ್ಲವೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು, ಇದು ನಿಜಕ್ಕೂ ಕಳವಳ ತರುವಂತಹ ವಿಷಯವಾಗಿದೆ. ಅದಕ್ಕಾಗಿ ನಾವು ಸಪೋರ್ಟ್ ಪ್ರೈಸ್‌ನ್ನು ನಿಗದಿ ಮಾಡಿದ್ದೇವೆ. ರಾಗಿಗೆ ೭೪ ರೂ.ಗಳನ್ನು ಮತ್ತು ಜವಾರ್, ಮುಸುಕಿನ ಜೋಳಕ್ಕೆ ೭೫ ರೂ.ಗಳನ್ನು ಸಪೋರ್ಟ್ ಪ್ರೈಸ್ ಎಂದು ಕೊಟ್ಟು ಅಲ್ಲಲ್ಲಿಯೇ ಅವುಗಳನ್ನು ಕೊಳ್ಳಲು ಏರ್ಪಾಡು ಮಾಡಿದ್ದೇವೆ. ನಮ್ಮ ರಾಜ್ಯದ ಫುಡ್ ಕಾರ್ಪೊರೇಷನ್ ಮೂಲಕ ಮತ್ತು ಕೇಂದ್ರ ಸರ್ಕಾರದ ಫುಡ್ ಕಾರ್ಪೊರೇಷನ್ ಮೂಲಕ ಕೊಳ್ಳಲು ವ್ಯವಸ್ಥೆ ಮಾಡಿದ್ದೇವೆ. ಆದರೂ ಸಹ ಈ ಒಂದು ವ್ಯವಸ್ಥೆ ಸಾಲದು ಎಂಬತಕ್ಕಂಥ ಕೂಗು ಇದೆ. ಅದನ್ನು ತತ್ವಶಃ ಒಪ್ಪಿಕೊಳ್ಳಬೇಕಾಗಿದೆ. ರೈತರು ಬೆಳೆ ಬೆಳೆಯಲು ಏನು ಹಣ ಖರ್ಚು ಮಾಡಿರುತ್ತಾರೆ, ಅದಕ್ಕೆ ತಕ್ಕ ಪ್ರತಿಫಲ ದೊರಕದೇ ಹೋದರೆ ಮುಂದೆ ಆಹಾರದ ಉತ್ಪಾದನೆ ಕುಂಠಿತವಾಗುತ್ತದೆಂಬ ಆತಂಕ ಸರ್ಕಾರಕ್ಕೂ ಸಹ ಇದೆ. ಈ ಕಾರಣದಿಂದಲೇ ರೈತರಿಗೆ ಸಾಧ್ಯವಾದಷ್ಟೂ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ ಈ ಒಂದು ಬೆಲೆಗಳನ್ನು ನಿಗದಿ ಮಾಡಿದ್ದೇವೆ. ಈಗ ರೈತರು ಬೆಳೆ ಬೆಳೆಯಲು ಬೇಕಾಗಿರುವುದು ಮುಖ್ಯವಾಗಿ ರಸಗೊಬ್ಬರ, ಅದರ ಬೆಲೆಯನ್ನು ಕೇಂದ್ರ ಸರ್ಕಾರದವರು ಕಡಿಮೆ ಮಾಡಿದ್ದಾರೆ. ಟನ್ ಒಂದಕ್ಕೆ ೧೦೦ ರಿಂದ ೨೦೦ ರೂ.ಗಳವರೆಗೆ ರಸಗೊಬ್ಬರಗಳ ಬೆಲೆಯನ್ನು ತಗ್ಗಿಸಿದ್ದಾರೆ ಈ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ರೈತರು ಸಹ ನೋಡಿದ್ದಾರೆ. ಈ ಮೊದಲು ಈ ಗೊಬ್ಬರಗಳ ಬೆಲೆ ಜಾಸ್ತಿ ಇದ್ದ ಕಾರಣ, ಆಹಾರದ ಉತ್ಪಾದನೆ ಕುಂಠಿತವಾಗಬಹುದೆಂಬ ಭಯ ನಮಗೆ ಇತ್ತು, ಅದನ್ನು ತಪ್ಪಿಸುವುದಕ್ಕಾಗಿ ಕೇಂದ್ರ ಸರ್ಕಾರದವರು ಅದರ ಬೆಲೆಯನ್ನು ಕಡಿಮೆ ಮಾಡಿದ್ದಾರೆ. ಇದರಿಂದ ಸುಮಾರು ೯೦ ಕೋಟಿ ರೂ.ಗಳಷ್ಟು ಕೇಂದ್ರ ಸರ್ಕಾರಕ್ಕೆ ನಷ್ಟವಾದರೂ ಸಹ ರೈತರಿಗೆ ಅನುಕೂಲವಾಗಲೆಂದು ಈ ರೀತಿ ಬೆಲೆಗಳನ್ನು ಕಡಿಮೆ ಮಾಡಿದ್ದಾರೆ ಒಂದು ವಾರದ ಕೆಳಗೆ ನಾನು ಮೇಲ್ಮನೆಯಲ್ಲಿ ಈ ಗೊಬ್ಬರದ ಬೆಲೆ ಬಗ್ಗೆ ಉತ್ತರ ಕೊಡುವಾಗ ಏನು ಹೇಳಿದ್ದೆನೆಂದರೆ, ಭಾರತ ಸರ್ಕಾರದವರು ತಮ್ಮ ಬಡ್ಜೆಟ್‌ನ್ನು ಮಂಡಿಸುವ ಕಾಲದಲ್ಲಿ ಈ ಗೊಬ್ಬರದ ಬೆಲೆಗಳನ್ನು ಇಳಿಸದೇ ಹೋದರೆ. ರಾಜ್ಯ ಸರ್ಕಾರದವರು ಸಬ್ಸಿಡಿ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೆವೆಂದು ಹೇಳಿದ್ದೆ. ಅದರಂತೆ ಕೇಂದ್ರ ಸರ್ಕಾರದವರು ಈ ತಿಂಗಳ ೧೫ನೇ ತಾರೀಖು ರಸಗೊಬ್ಬರದ ಬೆಲೆಗಳನ್ನು ಅಂದರೆ ಪೊಟಾಸಿಯಂ, ಪೊಟಾಸಿಯಂ ಫಾಸ್ಫೇಟ್ ಮತ್ತು ಯೂರಿಯಾ ಗೊಬ್ಬರಗಳ ಬೆಲೆಯನ್ನು ಟನ್ ಒಂದಕ್ಕೆ ನೂರರಿಂದ ಇನ್ನೂರು ರೂಪಾಯಿಗಳವರೆಗೆ ಇಳಿಸಿದ್ದಾರೆ. ಯಾವ ಯಾವ ಗೊಬ್ಬರಗಳ ಬೆಲೆ ಎಷ್ಟೆಷ್ಟು ಕಡಿಮೆಯಾಗಿದೆ ಎಂಬ ಬಗ್ಗೆ ಕೆಲವು ವಿವರಗಳನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಕೊಡುವುದಕ್ಕೆ ಬಯಸುತ್ತೇನೆ :-

		Present Rate : Rs.	Privious rate : Rs.
Urea 46% Nitrogen	...	6135	1735
Urea 45% Nitrogen	...	1595	1695
Muriate of Potash 100 K. G. Packing	...	830	1005

Ammonium N t o Phosphate			
24: 24.	...	2155	2510
N.P.K. 17: 17: 7	...	1990	2290 (Imported)
Super Phosphate	...	650	850
Madras Fert lizers (Vijay)			
17: 17: 17	...	2035	2365
– do – 24: 24	...	2405	[illegible]775

ಇದೇ ರೀತಿ ಫ್ಯಾಕ್ಟ್ ಷಾವಾಲೈಜ್, ರ್‍ಯಾಲೀಸ್ ಮುಂತಾದ ಖಾಸಗೀ ಕಂಪನಿಯವರು ಸಹ ಈ ಗೊಬ್ಬರಗಳ ಬೆಲೆಯನ್ನು ಕಡಿಮೆ ಮಾಡಿದ್ದಾರೆ. ನೂರರಿಂದ ಇನ್ನೂರು ರೂಪಾಯಿಗಳವರೆಗೆ ಟನ್ ಒಂದಕ್ಕೆ ಕಡಿಮೆ ಮಾಡಿದ್ದಾರೆ. ಈ ರೀತಿ ಗೊಬ್ಬರಗಳ ಬೆಲೆಗಳನ್ನು ಕೇಂದ್ರ ಸರ್ಕಾರದವರು ಕಡಿಮೆ ಮಾಡಿದ್ದರಿಂದ ೯೦ ಕೋಟಿ ರೂ ಗಳಷ್ಟು ನಷ್ಟವಾದರೂ ಸಹ, ಆಹಾರದ ಉತ್ಪಾದನೆ ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆ ಈಗ ಬೆಳೆಗಳು ಬಿದ್ದು ಹೋಗಿರುವುದರಿಂದ, ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಈ ರೀತಿ ಬೆಲೆಗಳನ್ನು ಇಳಿಸಿದ್ದಾರೆಂದು ಹೇಳಬಹುದು. ಈಗ ರೈತರು ಫಾರಂ ಯಾರ್ಡ್ ಕಾಂಪೋಸ್ಟ್, ಅರ್ಬನ್ ಕಾಂಪೋಸ್ಟ್ ಮತ್ತು ಹಸಿರೆಲೆ ಗೊಬ್ಬರಗಳನ್ನು ಉಪಯೋಗ ಮಾಡುತ್ತಿದ್ದರೂ ಸಹ, ಅದರ ಜೊತೆಗೆ ರಸಗೊಬ್ಬರಗಳನ್ನು ಉಪಯೋಗ ಮಾಡದಿದ್ದರೆ ಹೆಚ್ಚು ಇಳುವರಿ ಕೊಡುವಂತಹ ಶಕ್ತಿಮಾನ್ ಬೆಳೆಗಳನ್ನು ಬೆಳೆಯುವುದಕ್ಕಾಗುವುದಿಲ್ಲ, ಶಕ್ತಿಮಾನ್ ಬೆಳೆಗಳಿಗೆ ಎನ್.ಪಿ.ಕೆ. ಗೊಬ್ಬರವನ್ನು ಹೆಚ್ಚು ಪ್ರಮಾಣದಲ್ಲಿ ಉಪಯೋಗ ಮಾಡಬೇಕಾಗುತ್ತದೆ. ಏಕೆಂದರೆ ಈ ಗೊಬ್ಬರವಲ್ಲಿ ಶಕ್ತಿ ಜಾಸ್ತಿಯಿರುತ್ತದೆ ಈ ಕಾರಣದಿಂದಲೇ ನಮ್ಮ ರಾಜ್ಯದಲ್ಲಿ ರೈತರು ೧೯೭೩-೭೪ನೇ ಸಾಲಿನಲ್ಲಿ ಒಂದು ಲಕ್ಷ ೭ ಸಾವಿರ ಟನ್ ಗೊಬ್ಬರವನ್ನು ಮತ್ತು ೧೯೭೪-೭೫ರಲ್ಲಿ ಒಂದು ಲಕ್ಷ ೩೦ ಸಾವಿರ ಟನ್ ಗೊಬ್ಬರವನ್ನು ಉಪಯೋಗ ಮಾಡಿದ್ದಾರೆ. ಈ ವರ್ಷದಲ್ಲಿಯೂ ಕೂಡ ಅಂದರೆ ಇಲ್ಲಿಯವರೆಗೆ ರೈತರು ಒಂದು ಲಕ್ಷದ ೧ ಸಾವಿರದ ೩೮೮ ಟನ್ ಗೊಬ್ಬರವನ್ನು ಉಪಯೋಗ ಮಾಡಿದ್ದಾರೆ ಶಕ್ತಿಮಾನ್ ಬೆಳೆಗಳನ್ನು ಬೆಳೆಯಲು ಈ ಗೊಬ್ಬರದ ಅವಶ್ಯಕತೆ ಇರುವುದರಿಂದ, ಅದರ ಬೇಡಿಕೆಯೂ ಹೆಚ್ಚಾಗುತ್ತಿದೆ. ಮತ್ತು ಉಪಯೋಗಿಸುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಎಷ್ಟು ಲಕ್ಷ ಹೆಕ್ಟೇರ್‌ಗಳಲ್ಲಿ ಈ ಗೊಬ್ಬರವನ್ನು ಉಪಯೋಗ ಮಾಡುತ್ತಿದ್ದಾರೆಂಬ ವಿಷಯವನ್ನು ಈಗಾಗಲೇ ಹೇಳಿದ್ದೇನೆ. ಕಳೆದ ಸಲ ನಾನು ನನ್ನ ಖಾತೆಗೆ ಸಂಬಂಧಪಟ್ಟಂತೆ ಉತ್ತರ ಕೊಡುವಾಗ ಗೊಬ್ಬರದ ಕೊರತೆಯಿರುವುದರಿಂದ, ರೈತರಿಗೆ ಕಾರ್ಡ್ ಮೂಲಕ ಗೊಬ್ಬರವನ್ನು ಹಂಚುತ್ತೇವೆಂದು ಹೇಳಿದ್ದೆ ಅದರಂತೆ ೨೫ ರಿಂದ ೩೦ ಲಕ್ಷ ಕಾರ್ಡ್‌ಗಳನ್ನು ರೈತರಿಗೆ ಹಂಚಿ, ಅವರ ಮೂಲಕ ಗೊಬ್ಬರವನ್ನು ಹಂಚಲು ವ್ಯವಸ್ಥೆ ಮಾಡಲಾಗಿತ್ತು, ಆದರೆ ಸುದೈವದಿಂದ ಈ ವರ್ಷ ಗೊಬ್ಬರದ ಕೊರತೆ ಇಲ್ಲ, ಈಗ ನಮ್ಮಲ್ಲಿ ಒಂದು ಲಕ್ಷದ ೨೪ ಸಾವಿರ ಟನ್ ಗೊಬ್ಬರದ ಸ್ಟಾಕ್ ಇದೆ ಆದಕಾರಣ ಅಂತರ್‌ಜಿಲ್ಲಾ ಸಾಗಾಣಿಕೆ ಮೇಲಿದ್ದ ನಿರ್ಬಂಧವನ್ನು ಈಗ ಸಡಿಲ ಮಾಡಿದ್ದೇವೆ, ಮತ್ತು ಪ್ರೈವೇಟ್ ಡೀಲರ್ ಮೇಲೆ ಇದ್ದಂಥ ಹತೋಟಿಯನ್ನು ಸಹ ತೆಗೆದಿದ್ದೇವೆ. ಮುಖ್ಯವಾಗಿ ನಾವು ಈಗ ಗೊಬ್ಬರದ ವಿಚಾರದಲ್ಲಿ ಆಶಾದಾಯಕವಾದಂಥ ಸ್ಥಿತಿಯಲ್ಲಿದ್ದೇವೆ. ಈಗ ನಮ್ಮ ಎರಡು ಏಜೆನ್ಸಿಗಳಾದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಇವರ ಕಡೆಯಲ್ಲಿ ಗೊಬ್ಬರದ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದೆ. ಅಂದರೆ ೪೪ ಸಾವಿರ ಟನ್ ಗೊಬ್ಬರ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರ ಹತ್ತಿರವಿದ್ದರೆ, ೧೬ ಸಾವಿರ ಟನ್ ಗೊಬ್ಬರ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಅವರ ಹತ್ತಿರ ಸ್ಟಾಕ್ ಇದೆ. ಒಂದು ಲಕ್ಷ ೨೪ ಸಾವಿರ ಟನ್ ಗೊಬ್ಬರದ ಪೈಕಿ ಉಳಿದದ್ದು ಖಾಸಗೀ ವರ್ತಕರ ಬಳಿ ಇದೆ. ಬ್ಯಾಂಕ್‌ಗಳಿಂದ ಹಣ ಪಡೆದು ಈ ಗೊಬ್ಬರವನ್ನು ಸ್ಟಾಕ್ ಮಾಡಿರುವುದರಿಂದ, ಬ್ಯಾಂಕ್‌ನವರಿಗೆ ಬಡ್ಡಿ ಕಟ್ಟಬೇಕಾಗಿದೆ. ಈ ಕಾರಣದಿಂದ ನಾವು ಆದಷ್ಟು ಜಾಗ್ರತೆ ರೈತರಿಗೆ ಮಾರಾಟ ಮಾಡಬೇಕಾಗಿದೆ. ಮುಖ್ಯವಾಗಿ ರೈತರು ಗೊಬ್ಬರದ ಬಗ್ಗೆ ಕಾತುರಪಡಬೇಕಾಗಿಲ್ಲವೆಂದು ಈ ಸದನದ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ರೈತರಿಗೆ ಗೊಬ್ಬರದಷ್ಟೇ ಮುಖ್ಯವಾದುದು ಬೀಜ, ಈ ಬೀಜದ ವಿತರಣೆ ಬಗ್ಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು, ನ್ಯಾಷನಲ್ ಸೀಡ್ ಕಾರ್ಪೊರೇಷನ್ ಅವರು, ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಈ ಮೊದಲು ಒಳ್ಳೆಯ ಬೀಜಗಳನ್ನು ಕೊಡುವುದಿಲ್ಲ, ಅದರಲ್ಲಿ ಜರ್ಮಿನೇಷನ್ ಇಲ್ಲ, ಒಳ್ಳೆಯ ಕ್ವಾಲಿಟಿ ಇಲ್ಲ ಎಂದು ರೈತರು

ಹೇಳುತ್ತಿದ್ದರು. ಈಗ ನಾವು ಈ ವಿಚಾರದಲ್ಲಿ ಉಗ್ರವಾದಂಥ ಕ್ರಮ ತೆಗೆದುಕೊಂಡಿದ್ದೇವೆ. ಮತ್ತು ಬೀಜವನ್ನು ಸರ್ಟಿಫೈ ಮಾಡುವುದಕ್ಕೆ ಸೀಡ್ ಸರ್ಟಿಫಿಕೇಟ್ ಏಜೆನ್ಸಿ ಎಂದು ಮಾಡಿದ್ದೇವೆ. ಅದು ಒಂದು ಸ್ವತಂತ್ರವಾದಂಥ ಸಂಸ್ಥೆಯಾಗಿದೆ, ಅದು ಸರ್ಕಾರದ ಇಲಾಖೆಯ ಹತೋಟಿಯಲ್ಲಿ ಇಲ್ಲ. ಮುಂದಿನ ಮುಂಗಾರು ಬೆಳೆಗೆ ಬೇಕಾಗುವಷ್ಟು ಬೀಜದ ಸ್ಟಾಕ್ ಅದರ ಹತ್ತಿರವಿದೆ. ಅಂದರೆ ನಾನಾ ಬೆಳೆಗಳಿಗೆ ಬೇಕಾಗುವಂತಹ ೩೦ ಸಾವಿರ ಕ್ವಿಂಟಾಲ್‌ನಷ್ಟು ಬೀಜ ಅವರ ಹತ್ತಿರ ದಾಸ್ತಾನಿದೆ. ಮತ್ತೊಂದು ಮುಖ್ಯವಾದಂಥ ಸಂಗತಿಯೆಂದರೆ, ನಮ್ಮ ರಾಜ್ಯದಲ್ಲಿ ನ್ಯಾಷನಲ್ ಸೀಡ್ ಪ್ರಾಜೆಕ್ಟ್ ಎಂದು ವಿಶ್ವಬ್ಯಾಂಕ್‌ನ ಸಹಾಯದಿಂದ ಬರುವುದಿದೆ. ಸುಮಾರು ಇಪ್ಪತ್ತೈದೂವರೆ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ನಾವು ತಯಾರು ಮಾಡಿದ್ದೇವೆ. ಮುಂದಿನ ವರ್ಷ ಅಂದರೆ ೧೯೭೬-೭೭ರಲ್ಲಿ ಅದು ಪ್ರಾರಂಭವಾಗುವುದಿದೆ. ಅದಕ್ಕೆ ಮೊದಲು ಮೇ ಅಥವಾ ಜೂನ್ ತಿಂಗಳಲ್ಲಿ ಈ ಯೋಜನೆಯ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಲು ಅಪ್ರೈಜಲ್ ಟೀಮ್‌ನವರು ಬರುವವರಿದ್ದಾರೆ. ಈ ಯೋಜನೆಯಿಂದ ನಮ್ಮ ರಾಜ್ಯದಲ್ಲಿ ಬೀಜದ ಉತ್ಪಾದನೆ ಜಾಸ್ತಿಯಾಗುತ್ತದೆ. ಮತ್ತು ಬೀಜದ ಗುಣಮಟ್ಟವನ್ನು ಸಹ ಈ ಮೂಲಕ ಜಾಸ್ತಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಂತಹ ಬೀಜಗಳನ್ನು ರೈತರಿಗೆ ಒದಗಿಸಿದರೆ ಅವರು ಹೆಚ್ಚು ಆಹಾರದ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಭೂಮಿಯಲ್ಲಿರತಕ್ಕಂಥ ಮಣ್ಣನ್ನು ಪರೀಕ್ಷೆ ಮಾಡುವ ಸಲುವಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಹ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆ. ೧೯ ಜಿಲ್ಲೆಗಳಲ್ಲಿ ಈ ಕೇಂದ್ರಗಳಿವೆ. ಇವು ಸಾಲದು. ಇನ್ನೂ ಜಾಸ್ತಿ ಮಾಡಬೇಕು ಮತ್ತು ಗ್ರಾಮಸೇವಕರ ಮೂಲಕ ಮತ್ತು ವ್ಯವಸಾಯದ ಅಧಿಕಾರಿಗಳ ಮೂಲಕ ಪ್ರತಿ ರೈತರು ಭೂಮಿಯಲ್ಲಿರತಕ್ಕಂತಹ ಮಣ್ಣನ್ನು ಪರೀಕ್ಷೆ ಮಾಡಿಸಿ, ಆ ಮಣ್ಣಿನಲ್ಲಿರತಕ್ಕಂಥ ಲೋಪದೋಷಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ವ್ಯವಸಾಯ ಅಧಿಕಾರಿಗಳು ಮತ್ತು ಗ್ರಾಮಸೇವಕರು ಇಂತಿಷ್ಟು ಸಮಯದಲ್ಲಿ ಈ ಕೆಲಸವನ್ನು ಮಾಡಬೇಕೆಂದು ಆದೇಶ ಕೊಡೋಣ, ಅದರ ಜೊತೆಗೆ ರೈತರೂ ಸಹ ಮುಂದೆ ಬಂದರೆ ಈ ಕೆಲಸ ಜಾಗ್ರತೆ ಆಗುತ್ತದೆ ಮತ್ತು ಅವರಿಗೂ ಹೆಚ್ಚಿನ ಒಂದು ಅನುಕೂಲವಾಗುತ್ತದೆಂದು ಹೇಳುತ್ತೇನೆ.

5-00 P.M.

ಮಣ್ಣನ್ನು ಪರೀಕ್ಷೆ ಮಾಡಿ ಅದರಲ್ಲಿ ಏನು ಸತ್ವ ಕಡಿಮೆಯೆಂದು ಕಂಡು ಹಿಡಿದು ಅದಕ್ಕೆ ಸೂಕ್ತವಾದ ಗೊಬ್ಬರವನ್ನು ಒದಗಿಸಬೇಕೆಂದು ಯೋಚನೆಮಾಡಿ ಮಣ್ಣಿನ ದೋಷವನ್ನು ಕಂಡುಹಿಡಿಯುತ್ತಿದ್ದಾರೆ. ಮ್ಯಾಕ್ಸಿಮಮ್ ರೈತರಿಗೆ ಅನುಕೂಲವಾಗುವ ಕಾರ್ಯವನ್ನು ಮಾಡಿಸೋಣ ನಮ್ಮ ಅಧಿಕಾರಿಗಳು ಕೂಡ ಬಹಳ ಆಸಕ್ತಿಯಿಂದ ಕೆಲಸಮಾಡುವುದಕ್ಕೆ ಅವರಿಗೆ ಹೇಳೋಣ. ಇವತ್ತು ನಮ್ಮಲ್ಲಿ ಕ್ರಿಮಿನಾಶಕ ಔಷಧಿಗಳನ್ನು ಒದಗಿಸಲು ಸಾಕಷ್ಟು ನಮ್ಮಲ್ಲಿ ಇದೆ. ಬೆಳೆಗಳಿಗೆ ಅಷ್ಟೊಂದು ರೋಗರುಜಿನಗಳು ಹಾಗೂ ಕ್ರಿಮಿಕೀಟಗಳು ಕಾಣಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಬತ್ತಕ್ಕೆ ಹುಳು ಬಿದ್ದಿತ್ತು ಅದನ್ನು ಬಿಟ್ಟರೆ ಬೇರೆ ಎಲ್ಲಿಯೂ ಈ ತೊಂದರೆ ಇಲ್ಲ. ಅದಕ್ಕೆ ಬೇಕಾಗುವ ಔಷಧಿಯನ್ನು ನಾವು ದಾಸ್ತಾನು ಮಾಡಿದ್ದೇವೆ. ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಹಾಗು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಲ್ಲಿಯೂ ಕೂಡ ದಾಸ್ತಾನು ಮಾಡಿದ್ದೇವೆ. ಒಂದು ಲಕ್ಷ ರೂಪಾಯಿ ಔಷಧಿಯನ್ನು ರೈತರಿಗೆ ಬೆಳೆಗಳಿಗೆ ಸಿಂಪಡಿಸಬೇಕೆಂದು 25 ಪರ್ಸೆಂಟ್ ಸಬ್ಸಿಡಿ ರೂಪದಲ್ಲಿ ಸುಮಾರು 7 ಲಕ್ಷರೂಪಾಯಿಯನ್ನು ಒದಗಿಸಿದ್ದೇವೆ. ರೈತರಿಗೆ ಬೇಕಾಗುವ ಎಲ್ಲಾ ಸೌಲತ್ತುಗಳನ್ನು ಮತ್ತು ಬೀಜಗಳನ್ನು ಸುಮಾರು 8 ಲಕ್ಷರೂಪಾಯಿಯವರಿಗೆ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇನ್ನು ಸ್ಟೋರೇಜ್ ಬೀನ್ಸ್‌ನ್ನು ಆಗ್ರೋ ಇಂಡಸ್ಟ್ರೀಸ್ ಮೂಲಕ ಸಬ್ಸಿಡಿ ಕೊಡತಕ್ಕಂಥದು ಇದೆ. ನಮ್ಮ ರಾಜ್ಯದಲ್ಲಿ ಪಾರ್ತೇನಿಸ್ ವೀಡ್ ಎಂಬ ಕಳೆ ಭೂಮಿಯಲ್ಲಿ ಬಂದಿದೆ ಅದು ನಗರಪ್ರದೇಶದಲ್ಲಿಯೂ ಬಂದಿದೆ. ಆ ಕಳೆಯನ್ನು ರೈತರು ಜಮೀನಿನಲ್ಲಿ ತೆಗೆಯದೆ ಇದ್ದರೆ ಅದನ್ನು ಸರ್ಕಾರದವರೇ ತೆಗೆಸಿ ಅದನ್ನು ರೈತರಿಂದ ಕಂದಾಯ ರೂಪದಲ್ಲಿ ವಸೂಲಿಮಾಡಬೇಕೆಂದು 6 ಲಕ್ಷದ 20 ಸಾವಿರ ರೂಪಾಯಿ ಕಳೆ ನಾಶಕವನ್ನು ಒದಗಿಸಿದ್ದೇವೆ. ಇದನ್ನು ನಗರ ಪ್ರದೇಶಕ್ಕೆ ನಮ್ಮ ಇಲಾಖೆಯ ಮೂಲಕ ನಮ್ಮ ಸಿಬ್ಬಂದಿಯವರೇ ಆ ಔಷಧಿಯನ್ನು ಸಿಂಪಡಿಸುವಂತೆ ಮಾಡುತ್ತೇವೆ. ಇನ್ನು ಶ್ರೀಮಾನ್ ಜಿ ರಾಮೇಗೌಡರು ಹೇಳಿದರು ದ್ವಿದಳ ಧಾನ್ಯದ ಬಗ್ಗೆ ಪಲ್ಸಸ್ ಡೆವಲಪ್‌ಮೆಂಟಿಗೆ ಹೆಚ್ಚು ಗಮನಕೊಡುತ್ತಿದ್ದೇವೆ. ಎಣ್ಣೆ ಬೀಜಗಳು, ಕಬ್ಬು ಇವು ಸೆಂಟ್ರಲ

ಸ್ಕೀಮ್ ಮತ್ತು ಸ್ಟೇಟ್ ಸ್ಕೀಮ್ ಎಂದು ಎರಡು ಪ್ರಾರಂಭಮಾಡಿದ್ದೇವೆ. ಇನ್ನು ವರಲಕ್ಷ್ಮಿ ಕಾಟನ್ ಸೀಡ್ಸ್ ಬಗ್ಗೆ ಹೇಳುವುದಾದರೆ 4,400 ಟನ್ ಉತ್ಪಾದನೆಮಾಡಿ ಅದನ್ನು ಮಾರಾಟ ಮಾಡತಕ್ಕಂಥ ಶಕ್ತಿ ಹತ್ತಿ ಬೆಳೆದಂತೆ ರೈತರಿಗೆ ಇಲ್ಲದೆ ಅದರ ಬೆಲೆ ಬಿದ್ದುಹೋದಾಗ ನಮ್ಮ ಸರ್ಕಾರದವರು ಒಂದು ದೊಡ್ಡ ತೀರ್ಮಾನ ಮಾಡಿ ಅವರಿಗೆ ಹಣ ಕೊಡುವುದಕ್ಕೆ ಬ್ಯಾಂಕಿನಿಂದ ಸಾಲ ಪಡೆದು 4 ಸಾವಿರ ಕ್ವಿಂಟಾಲ್ ಬೀಜಕ್ಕೆ ಮುಂಗಡವಾಗಿ ಒಬ್ಬೊಬ್ಬರಿಗೆ 100 ರೂಪಾಯಿ ಮತ್ತು 50 ರೂಪಾಯಿ ಹಣವನ್ನು ಕೊಟ್ಟಿದ್ದಾರೆ. ಅನೇಕ ರೈತರು ಉತ್ಪಾದನೆಮಾಡಿದರು ಆದರೆ ಅವರಿಗೆಲ್ಲಾ ಹಣವನ್ನು ಒದಗಿಸಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಸಂತೋಷವಾಗುತ್ತದೆ. ಕಾಟನ್ ಉತ್ಪಾದನೆ ಕಳೆದ ಎರಡು ವರ್ಷದಲ್ಲಿ ಅಂದರೆ 1974-75 ರಲ್ಲಿ ಸುಮಾರು 8 ಲಕ್ಷ ರೂಪಾಯಿ ಆಗಿದೆ. ಕಳೆದ ಬೇಸಿಗೆಯಲ್ಲಿ ದೊಡ್ಡ ದೊಡ್ಡ ಅಣೆಕಟ್ಟುಗಳಲ್ಲಿ ನೀರು ಕಡಿಮೆ ಇದ್ದುದರಿಂದ ಅಂತಹ ಕಡೆಗಳಲ್ಲಿ ಈ ಫಸಲನ್ನು ಇಡುವುದಕ್ಕೆ ಸಾಧ್ಯವಾಗಲಿಲ್ಲ. ಮತ್ತೊಂದು ರೊಕ್ಕದಬಾಬಿನದು ಎಂದರೆ ಹೊಗೆಸೊಪ್ಪು ಅದು ಇನ್ನು ಕೇವಲ ಎರಡು ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ಪ್ರಾರಂಭವಾಗಿದೆ. ಅವು ಯಾವುವೆಂದರೆ ಶಿವಮೊಗ್ಗಾ ಮತ್ತು ಮಂಡ್ಯ ಜಿಲ್ಲೆ. ಆ ಎರಡು ಜಿಲ್ಲೆಗಳಲ್ಲಿ ಭೂಮಿ ಚನ್ನಾಗಿದೆ, ಈಮೈಸೂರು ಟೊಬೊಕೋ ಕಂಪನಿಯೆನ್ನುವುದು ಇಲ್ಲಿಯವರೆವಿಗೆ ಒಂದು ಖಾಸಗಿಸಂಸ್ಥೆಯಾಗಿತ್ತು. ಈಗ ಸರ್ಕಾರದವರೇ ಅದನ್ನು ತೆಗೆದುಕೊಂಡು ಅಗ್ರೋಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ವಹಿಸಲಾಗಿದೆ. ಅದರಲ್ಲಿ 25 ಸಾವಿರ ರೂಪಾಯಿಗಳವರೆಗೆ ಉತ್ಪಾದನೆ ಇರಬಹುದು. ಮುಖ್ಯವಾಗಿ ಸಿಗರೇಟಿಗೆ ಉಪಯೋಗಿಸತಕ್ಕಂಥ ವರ್ಜಿನಿಯಾ ಟುಬೋಕೋವನ್ನು ಉತ್ಪಾದನೆ ಮಾಡುತ್ತದೆ. ಮತ್ತೊಂದು ವಿಚಾರವೆಂದರೆ ನಮ್ಮ ಇಲಾಖೆಯವರು ಆಧುನಿಕ ಪದ್ಧತಿಯ ಮೇಲೆ ಅರ್ಧ ಎಕರೆ ಮತ್ತು ಒಂದು ಎಕರೆಯಲ್ಲಿ ಬ್ಲಾಕ್ ಡೆಮಾನ್‌ಸ್ಟ್ರೇಷನ್‌ನ್ನು ಏರ್ಪಾಡುಮಾಡಿದ್ದಾರೆ. ಹೆಚ್ಚು ಪ್ರದೇಶಗಳಲ್ಲಿ ಎಂದರೆ ಊರಿನ ಕೆರೆ ಅಚ್ಚುಕಟ್ಟು ಇರುವ ಪ್ರದೇಶದಲ್ಲಿ ಆಧುನಿಕ ಪದ್ಧತಿಯ ಡೆಮಾನ್‌ಸ್ಟ್ರೇಷನ್ ಫಾರಂನ್ನು ಏರ್ಪಾಡು ಮಾಡಿದ್ದಾರೆ. ಅದರಲ್ಲಿ 460 ಡೆಮಾನ್‌ಸ್ಟ್ರೇಷನ್ ಫಾರಂಗಳನ್ನು ಮಾಡಿ ಸುಮಾರು 12 ಸಾವಿರ ಹೆಕ್ಟೇರ್‌ಗಳಲ್ಲಿ 30 ರಿಂದ 60 ಪರ್ಸೆಂಟ್ ಉತ್ಪಾದನೆ ಹೆಚ್ಚಾಗಿದೆ. ಇದರಿಂದ ರೈತರಿಗೆ ಅನುಕೂಲವಾದಂತಾಗಿದೆ. ಇದೇ ರೀತಿ ಇಂಟರ್ ಡಿಸ್ಟ್ರಿಕ್ಟ್ ಲೈನ್ ಬೆಳ್ಳಾರಿ ಜಿಲ್ಲೆಯಲ್ಲಿ ಸುಮಾರು 1½ ಲಕ್ಷ ಹೆಕ್ಟೇರಿನಲ್ಲಿ ಸುಮಾರು 67 ಸಾವಿರ ಜನ ರೈತರಿಗೆ ಇದರಿಂದ ಪೂರ್ಣ ಅನುಕೂಲವಾಗಿದೆ. ಇನ್ನು ಮಲ್ಟಿಪಲ್ ಕ್ರಾಪ್ ಸ್ಕೀಮಿನ ಪ್ರಕಾರ ಮಳೆಯ ಆಶ್ರಯದಲ್ಲಿ ರಾಗಿ ಬೆಳೆಯುವ ಪ್ರದೇಶದಲ್ಲಿ ಎರಡು ಬೆಳೆಯನ್ನು ತೆಗೆಯುತ್ತಿದ್ದಾರೆ. ರಾಗಿಯು ಕೊಯ್ಯಲು ಆದಮೇಲೆ ಹಲಸಂದೆಯನ್ನು ಬೆಳೆಯುತ್ತಾರೆ. ಮಳೆ ಆಗದೆ ಇದ್ದರೂ ಕೂಡ ಹೆಚ್ಚು ಹೆಚ್ಚು ಅನುಕೂಲವಾಗುವಂತೆ ಏರ್ಪಾಡುಗಳನ್ನು ಮಾಡಿಸಿದ್ದೇವೆ. ಇದನ್ನೆಲ್ಲಾ ಮಾಡುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಇನ್ನು ನಮ್ಮಲ್ಲಿ ವ್ಯವಸಾಯದ ತರಪೇತಿ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಈಗ ಸದ್ಯದಲ್ಲಿ ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಒಂದು, ಶಿವಮೊಗ್ಗಾ ಜಿಲ್ಲೆಯಲ್ಲಿ ಒಂದು ಪ್ರಾರಂಭಮಾಡಿರುತ್ತೇವೆ. ಇಂತಹ ವ್ಯವಸಾಯ ತರಬೇತಿ ಶಾಲೆಗಳನ್ನು ಹಂತಹಂತದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಾರಂಭವಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ರೈತರಿಗೆ ಟ್ರೈನಿಂಗ್ ಸೆಂಟರ್ಸ್ ಮತ್ತು ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್ ಒದಗಿಸಿ ಅಲ್ಲಿ ಬರತಕ್ಕಂಥ ಅಭ್ಯರ್ಥಿಗಳಿಗೆ ಸ್ಟೈಪೆಂಡ್ 60 ರೂಪಾಯಿ ಸಾಲದೆಂದು ಆ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರ ಈಗ ನೂರು ರೂಪಾಯಿ ಕೊಡಬೇಕೆಂದು ತೀರ್ಮಾನ ತೆಗೆದು ಕೊಂಡಿದ್ದೇವೆ. ಇನ್ನೊಂದು ಅನುಕೂಲ ರೈತರಿಗೆ ಎಂದರೆ ಒಂದು ಇನ್‌ಫರ್‌ಮೇಷನ್ ಸರ್ವೀಸ್ ರೈತರಿಗೋಸ್ಕರ ರೇಡಿಯೋ ಮುಖಾಂತರ ಬೆಳಗ್ಗೆ ಸಂಬಂಧ ಪಟ್ಟಂತೆ ಹವಮಾನ ಮತ್ತು ಬೆಳೆಯನ್ನು ಇಡುವುದಕ್ಕೆ ಒಳ್ಳೆಯ ಕಾಲ ಮತ್ತು ಅದಕ್ಕೆ ಸಂಬಂಧವಾದ ತಿಳುವಳಿಕೆಯನ್ನು ಕೊಡುತ್ತಾರೆ ಇನ್ನು ಒಂದು ಒಳ್ಳೆಯ ಅವಕಾಶವೆಂದರೆ ಪತ್ರಿಕೆಗಳಲ್ಲಿಯೂ ವ್ಯವಸಾಯಕ್ಕೆ ಅನುಕೂಲವಾಗುವ ಎಲ್ಲಾ ತಿಳುವಳಿಕೆಯನ್ನು ಕೊಡುತ್ತಾರೆ, ಈ ರೀತಿ ಪ್ರಚಾರ ಮಾಡುವುದರಿಂದ ಬಹಳಷ್ಟು ರೈತರಿಗೆ ಅನುಕೂಲವಾಗುತ್ತದೆ, 1976-77 ರಲ್ಲಿ ಇನ್ನು ಹೆಚ್ಚಿನ ತಿಳುವಳಿಕೆಯ ಬಗ್ಗೆ ಮತ್ತು ಬೆಳೆಯ ರೋಗದ ಬಗ್ಗೆ ಸುಮಾರು 22ಲಕ್ಷರೂಪಾಯಿ ವೆಚ್ಚದಿಂದ ಸಾವಿರಾರು ಎಕ್ರೇರ್ ಭೂಮಿಗೆ ಸಹಾಯವಾಗುವಂತೆ ಏರ್ಪಾಡು ಮಾಡುತ್ತಾರೆ. 1976-77ರಲ್ಲಿ ಹೆಚ್ಚುವರಿ ಇಳುವರಿ ಬರುವುದಕ್ಕೆ ಫರ್ಟಿಲೈಸರ್‌ಗೆ ಸಾವಿರಾರು ರೂಪಾಯಿ ಖರ್ಚಿನಲ್ಲಿ ಬ್ಲಾಕ್ ಡೆಮಾನ್‌ಸ್ಟ್ರೇಷನ್‌ಮಾಡಿ ಪ್ರಚಾರಮಾಡಿ ಅದರಿಂದ ಸಹಾಯಮಾಡುತ್ತಾರೆ. ಈಗ ನಮ್ಮ ರಾಜ್ಯದಲ್ಲಿ ಮುಂದಿನ 1976-77 ರಲ್ಲಿ

69 ಲಕ್ಷ ಟನ್ ಬೆಳೆ ಉತ್ಪಾದನೆ ಮಾಡಬೇಕು. 101 ಲಕ್ಷ ಟನ್ ಕಬ್ಬು 28 ಸಾವಿರ ಟನ್ ಹೊಗೆಸೊಪ್ಪು ಉತ್ಪಾದನೆಯ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆದುದರಿಂದ ಮುಂದಿನ ವರ್ಷಗಳಲ್ಲಿ ಒಳ್ಳೆಯ ಮಳೆಯಾದರೆ ನಾವು ಈ ಗುರಿಯನ್ನು ಮುಟ್ಟುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಬೆಲೆಗಳು ಎಷ್ಟೇ ಬಿದ್ದು ಹೋದರೂ ಕೂಡ ರೈತರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗುವುದಿಲ್ಲ. ಆದರೆ ಕಳೆದ ವರ್ಷಗಳಲ್ಲಿ ಆಹಾರ ಧಾನ್ಯಗಳ ಬೆಲೆಗಳು ಗಗನಕ್ಕೆ ಮುಟ್ಟಿದ್ದುದರಿಂದ ಈಗ ಅದನ್ನು ಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮುಂದೆ ರೈತನ ಕಾಸ್ಟ್ ಆಫ್ ರಿಟರ್ನ್ ಏನಿದೆ ಅದು ಒಳ್ಳೆಯ ಲಾಭದಾಯಕವಾಗುತ್ತದೆ. ಮುಂದಿನ ವರ್ಷ 60 ಲಕ್ಷ ಟನ್‌ಗಳಷ್ಟು ಆಹಾರೋತ್ಪಾದನೆಯನ್ನು ಮಾಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಇವತ್ತು ನಮ್ಮ ಮಾನ್ಯ ಸದಸ್ಯರು ಆಗ್ರೋ ಇಂಡಸ್ಟ್ರೀಸ್ ಬಗ್ಗೆ ಕೂಡ ಅನೇಕ ವಿಷಯಗಳನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿರುವ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನನ್ನು ನೋಡಿದರೆ ಇದು ಬೇರೆ ರಾಜ್ಯಗಳಿಗಿಂತ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ರೈತರಿಗೆ ಬೇಕಾದ 154 ಬುಲ್‌ಡೋಜರ್‌ಗಳು 110 ಟ್ರ್ಯಾಕ್ಟರ್‌ಗಳು, 7 ಪವರ್ ಟಿಲ್ಲರ್‌ಗಳು, 20 ತ್ರೆಷರ್‌ಗಳು. 1 ಸಲ್ಫ್ ಎಲಿವೇಟಿಂಗ್ ಸ್ಕ್ರೇಪರ್, 45 ರಾಕ್ ಬ್ಲಾಸ್ಟಿಂಗ್ ಯೂನಿಟ್ಸ್ 45 ಸ್ಲೋರಿಗ್ಸ್ ಮತ್ತು 18 ಫಾಸ್ಟ್ ರಿಗ್ಸ್ ಹೊಂದಿದೆ 39 ಕಸ್ಟಂ ಸರ್ವೀಸ್ ಸೆಂಟರ್‌ಗಳು. ಮತ್ತು 20 ಡಿಸ್ಟ್ರಿಕ್ಟ್ ಲೆವೆಲ್ ಆಫೀಸ್‌ಗಳನ್ನು ರಾಜ್ಯದಲ್ಲಿ ತೆರೆದಿದ್ದೇವೆ. 2 ಆಗ್ರೋ ಕಾಂಪ್ಲೆಕ್ಸ್‌ಗಳನ್ನು ಅಂದರೆ ಒಂದು ದಾವಣಗೆರೆಯಲ್ಲಿ ಮತ್ತು ಇನ್ನೊಂದು ಕೋಲಾರದಲ್ಲಿ ತೆಗೆದಿದ್ದೇವೆ. ರೈತರಿಗೆ ಬೇಕಾದ ಭಾವಿಗಳನ್ನು ತೋಡುವುದು ಬ್ಲಾಸ್ಟಿಂಗ್ ಬೋರಿಂಗ್ ಇತ್ಯಾದಿ ಕೆಲಸಗಳನ್ನು ಮಾಡಿದೆ. ಹೊಸದಾಗಿ ನಮ್ಮ ಆಗ್ರೋ ಇಂಡಸ್ಟ್ರೀಸ್‌ನಲ್ಲಿ ಬಹಳ ಒಳ್ಳೆಯ ಉಪಯುಕ್ತವಾದ ಕೆಲಸಗಳಾಗಿವೆ ಎಂದು ಹೇಳಬಯಸುತ್ತೇನೆ. 1975ರಲ್ಲಿ ಅಗ್ರೋ ಪ್ರಾಡಕ್ಟ್ಸ್ ಮಾಡ್ರನ್ ಪ್ಯೆನ್ಸ್ ಮಿಲ್ಲಿಂಗ್ ಪ್ಲಾಂಟಿಗೆ 80 ಲಕ್ಷ ರೂಪಾಯಿ ಕೊಟ್ಟಿದ್ದೇವೆ.

ಕರ್ನಾಟಕ ಆಗ್ರೋ ಪ್ರೋಟಿನ್ಸ್ ಲಿಮಿಟೆಡ್, ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ತೆರೆದು ಮಾಡ್ರನ್ ಕಾಂಪೋಸ್ಟ್ ಮೆಷಿನರಿಯನ್ನು ಹಾಕಿ ಕಾಂಪೋಸ್ಟನ್ನು ತಯಾರು ಮಾಡಬೇಕೆಂದು ಹೇಳಿದ್ದೇವೆ. ಅದೇ ರೀತಿ ಇನ್ನೊಂದು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಸಬ್ಸಿಡಿಯರಿ ಆಗಿ ಮೈಸೂರು ಟೊಬ್ಯಾಕೊ ಕಂಪನಿಗೆ ಕೊಟ್ಟಿರುವುದು ಒಂದು ಹೊಸ ಅಧ್ಯಾಯವಾಗಿದೆ ಎಂದು ಹೇಳುತ್ತೇನೆ

ಇನ್ನು ಕೃಷಿ ವಿಶ್ವವಿದ್ಯಾನಿಲಯ ಮತ್ತು ಕೃಷಿ ಪರಿಶೋಧನೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳದೇ ಹೋದರೆ ನನ್ನ ಕರ್ತವ್ಯಲೋಪ ಮಾಡಿದಂತಾಗುತ್ತದೆ. ಇನ್ನು ಹೇಳಬೇಕಾದುದು ನಮ್ಮ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ಇವತ್ತು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮತ್ತೊಂದು ಹೊಸ ನೀತಿಯನ್ನು ತೆಗೆದುಕೊಂಡು ಬಂದಿದೆ. ಅದು ಏನು ಎಂದರೆ ರೈತರಿಗೆ ಮುಖ್ಯವಾದ ಅನುಕೂಲಗಳನ್ನು ಒದಗಿಸಿಕೊಡುವ ಕಡೆ ಗಮನ ಕೊಟ್ಟಿಲ್ಲ ಎನ್ನುವ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ರೈತರ ಮಕ್ಕಳಿಗೆ ಒಳ್ಳೆಯ ಸ್ಫೂರ್ತಿ ಬರಲಿ ಎನ್ನುವ ಉದ್ದೇಶದಿಂದ ವೆಟರಿನರಿ ಕಾಲೇಜುಗಳಲ್ಲಿ 15 ಪರ್ಸೆಂಟ್ ಸೀಟುಗಳನ್ನು ಇಡಲಾಗಿವೆ ಡಿಫೆನ್ಸ್ ಎಕ್ಸ್ ಸರ್ವೀಸ್‌ಮೆನ್‌ಗೆ ಎರಡೂವರೆ ಪರ್ಸೆಂಟ್ ಡಿಫೆನ್ಸ್ ಪರ್ಸನಲ್ ಮಕ್ಕಳಿಗೆ ಎರಡೂವರೆ ಪರ್ಸೆಂಟ್ ಫ್ರಿಡಂ ಫೈಟರ್ಸ್ ಮಕ್ಕಳಿಗೆ 2 ಪರ್ಸೆಂಟ್ ಸೀಟುಗಳನ್ನು ಮೀಸಲಿಡಲಾಗಿದೆ. ಸೀಟುಗಳ ಸಂಖ್ಯೆಯನ್ನು 90ಕ್ಕೆ ಹೆಚ್ಚಿಸಿ ಇವರಿಗೆ ಇಷ್ಟು ಸೀಟುಗಳನ್ನು ಸಪರೇಟ್ ಆಗಿ ಕೊಡಬೇಕೆಂದು ನಿರ್ಧರಿಸಿದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ರಾಮೇಗೌಡರು ಯೂನಿವರ್ಸಿಟಿಗೆ ಕೊಡುವ ಹಣದ ಬಗ್ಗೆ ಮಾತನಾಡಿದ್ದಾರೆ. ನಾವು ಅಗ್ರಿಕಲ್ಚರ್ ಯೂನಿವರ್ಸಿಟಿಗೆ ಕೊಟ್ಟಿರುವ ಗ್ರ್ಯಾಂಟ್ಸ್ ಡೆವಲಪ್‌ಮೆಂಟ್‌ಗೋಸ್ಕರ 1974-75ರಲ್ಲಿ 47 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, 1975-76 ರಲ್ಲಿ 42 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 1976—77ರಲ್ಲಿ 48 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಗ್ರಿಕಲ್ಚರ್ ರೀಸರ್ಚ್‌ಗೋಸ್ಕರ 1974—75 ರಲ್ಲಿ

10 ಲಕ್ಷ ರೂಪಾಯಿಗಳು 1975-76ರಲ್ಲಿ 18 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಗ್ರಿಕಲ್ಚರಲ್ ಫಾರಂಸ್ ಅಂಡ್ ರೀಸರ್ಚ್ ಸ್ಟೇಷನ್‌ಗೆ 47 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 1976-77ರಲ್ಲಿ 18ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬ್ಲಾಕ್ ಗ್ರ್ಯಾಂಟ್ಸ್ 1974-75ರಲ್ಲಿ 1 ಕೋಟಿ 82ಲಕ್ಷ 80307 ರೂಪಾಯಿಗಳನ್ನು ಕೊಟ್ಟಿದ್ದೇವೆ. 1976-77ರಲ್ಲಿ 2ಕೋಟಿ 64ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಇದರಲ್ಲಿ ಅವರು ಕೇಳಿದಷ್ಟನ್ನೂ ಕೊಟ್ಟಿದ್ದೇವೆ. ಡೆವಲಪ್‌ಮೆಂಟ್ ಕಾರ್ಯಕ್ಕೆ ಮಾನ್ಯ ಹಣಕಾಸಿನ ಸಚಿವರು ಹಣವನ್ನು ಕೊಟ್ಟರೆ ಅದನ್ನೂ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೇನೆ. ವೆಟರಿನರಿ, ಅಗ್ರಿಕಲ್ಚರ್, ಫಿಷರೀಸ್ ಧಾರವಾಡದಲ್ಲಿ ಹೊಸದಾಗಿ ಪ್ರಾರಂಭ ಮಾಡಿದ ಹೋಂ ಸೈನ್ಸ್ ಕಾಲೇಜು ಇವೆಲ್ಲಾ ಚೆನ್ನಾಗಿ ಕೆಲಸಮಾಡುತ್ತಿವೆ. ಅಲ್ಲಿ ಸಂಶೋಧನೆಗಳೂ ಕೂಡ ಬಹಳ ಚೆನ್ನಾಗಿ ನಡೆಯುತ್ತಿವೆ. ಭತ್ತದಲ್ಲಿ ಜಿ: ಎಂ. ಆರ್. 2-17 ನವಣೆಯಲ್ಲಿ ಆರ್. ಎಸ್. 118, ಯಾಟೀನ್‌ನಲ್ಲಿ ಶುಗರ್‌ಕೇನ್‌ನಲ್ಲಿ ಸಿಒ. 62175, ಹೆಚ್-2045, ಜೋಳದಲ್ಲಿ ಆರ್. ಎಸ್. ಹೆಚ್ 1 ಇವುಗಳನ್ನೆಲ್ಲಾ ರೀಸರ್ಚ್ ಮಾಡಿದೆ. ಮತ್ತು ಇದರಲ್ಲಿ ಒಳ್ಳೆಯ ರಿಸಲ್ಟ್ಸ್ ಕೂಡ ಬರುತ್ತಿದೆ. ಅದೇರೀತಿ ರಾಗಿಯಲ್ಲಿಯೂ ಕೂಡ ಪರಿಶೋಧನೆ ನಡೆದಿದೆ ಇದನ್ನು ನಮ್ಮ ರೈತರಿಗೆ ಒದಗಿಸಿಕೊಡಬೇಕು. ಇದಕ್ಕೆ ನಮ್ಮ ವಿಶ್ವವಿದ್ಯಾನಿಲಯದವರೂ ಗೊಬ್ಬರದ ಸಂಸ್ಥೆಗಳವರೂ ಕೂಡ ಬ್ಲಾಕ್ ಡೆಮಾನ್‌ಸ್ಟ್ರೇಷನ್ ಮಾಡುವ ಕಾಲದಲ್ಲಿ ಬಹಳ ಆಶಾದಾಯಕವಾಗಿ ಕೆಲಸ ಮಾಡುತ್ತಿದ್ದಾರೆನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ, ನಮ್ಮ ರಾಜ್ಯದಲ್ಲಿ ಸ್ಮಾಲ್ ಫಾರ್ಮರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜನ್ಸಿ ಎನ್ನುವುದನ್ನು ಬೆಂಗಳೂರಿನಲ್ಲಿ ರಾಜ್ಯ ಸರ್ಕಾರದವರು ಪ್ರಾರಂಭ ಮಾಡಿದ್ದಾರೆ. ಸೌತ್ ಕೆನರಾದಲ್ಲಿ ಇರತಕ್ಕಂಥಾದ್ದು ಎಸ್.ಎಂ.ಟಿ.ಎಸ್. ತುಮಕೂರು ಬಿಜಾಪುರದಲ್ಲಿ ಇರತಕ್ಕಂಥಾದ್ದು ಬಹಳ ಒಳ್ಳೆಯ ಕೆಲಸ ಮಾಡುತ್ತಿವೆ. ಇದುವರೆಗೆ 460 1/2 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಸುಮಾರು 2117.40 ಲಕ್ಷ ರೂಗಳನ್ನು ಲೋನ್ ಕೊಟ್ಟಿದ್ದೇವೆ. 10954 ಕಮ್ಯುನಿಟಿ ವೆಲ್ಸ್ 64 ಐ.ಪಿ. ಸೆಟ್ಸ್ 7942 ಪೌಲ್ಟ್ರಿ 12049 ಇತ್ಯಾದಿ ಕೆಲಸಗಳಾಗಿವೆ. ಇನ್ನೂ ಕೆಲವು ಕೆಲಸಗಳನ್ನು 4ನೇ ಪ್ಲಾನ್‌ನಲ್ಲಿ ಮಾಡುವುದಾಗಿದೆ.

ಇದೇ ರೀತಿಯಲ್ಲಿ 1976ರಲ್ಲಿ ಸಹ ಹಾಸನ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಸಣ್ಣ ರೈತರಿಗೆ ಅನುಕೂಲವಾಗಲು ಈ ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದೇವೆ. ಮತ್ತು 1976-77ರಲ್ಲಿ ಗುಲ್ಬರ್ಗ ಮತ್ತು ಶಿವಮೊಗ್ಗದಲ್ಲಿ ಸಹ ಸಣ್ಣ ರೈತರಿಗೆ ಅನುಕೂಲವಾಗಲು ಈ ಎಸ್.ಎಫ್.ಡಿ.ಎಗಳನ್ನು ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇವಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಮಂಜೂರು ಮಾಡಲು ಭರವಸೆ ಕೊಟ್ಟಿದ್ದಾರೆ. ಈ ಸಂಸ್ಥೆಗಳಿಂದ ಅನುಕೂಲವಾಗಲೀ ಎಂದು ಇನ್ನು ಕೆಲವು ಜಿಲ್ಲೆಗಳಲ್ಲಿ ಪ್ರಾರಂಭ ಮಾಡಬೇಕೆಂದು 3 ವರ್ಷ ಮುಂದುವರಿಸುತ್ತಿದ್ದೇವೆ. ಈ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರೊಂದಿಗೆ ನಮ್ಮ ರಾಜ್ಯ ಸರ್ಕಾರದವರು ಚರ್ಚೆ ನಡೆಸಿ, ಇದನ್ನು ಸಹಾನುಭೂತಿಯಿಂದ ಮುಂದುವರಿಸಬೇಕು ಎನ್ನತಕ್ಕಂಥ ಯೋಚನೆ ಮಾಡುತ್ತಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ, ಇಷ್ಟನ್ನು ಹೇಳುತ್ತಾ ಇವತ್ತಿನ ದಿವಸ ವ್ಯವಸಾಯ ಇಲಾಖೆಯ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಿದರು. ಮುಖ್ಯವಾಗಿ ನಮ್ಮಲ್ಲಿರತಕ್ಕಂಥ ರಿಗ್ಗುಗಳು ಸಾಲದು ಇನ್ನು ಹೆಚ್ಚಾಗಿ ರೈತರಿಗೆ ಸಕಾಲದಲ್ಲಿ ಭಾವಿಗಳನ್ನು ಆಳ ಮಾಡಿಸಿಕೊಡಬೇಕು. ಮತ್ತು ಕೊಳವೆ ಭಾವಿಗಳಿದ್ದರೆ ಅವುಗಳಲ್ಲಿ ಇನ್ನೂ ಬೋರ್ ಮಾಡಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿದ್ದಾರೆ. ಇದನ್ನೆಲ್ಲಾ ಗಮನಿಸಿ ಇವತ್ತಿನ ದಿವಸ ಎಷ್ಟು ಸಾಧ್ಯತೆ ಇಷ್ಟಿದೆ ಎನ್ನುವುದನ್ನು ಸಹ ನೋಡಿ ಹಾಗೂ ಹಣದ ಕೊರತೆಯನ್ನು ನೋಡಿಕೊಂಡು ಯಂತ್ರಗಳನ್ನು ತರಿಸಲಿಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ ಮತ್ತೆ ರೈತರ ಬಗ್ಗೆ ಇವತ್ತಿನ ದಿವಸ ಅವನು ಸಾಲಗಳನ್ನು ತೆಗೆದುಕೊಂಡಿದ್ದರೆ ಅವರಿಗೆ ಅನುಕೂಲವಾಗುವ ಹಾಗೆ ಒಂದು ದಿಟ್ಟ

ನಿಲುವನ್ನು ತೆಗೆದುಕೊಂಡಿದ್ದೇವೆ. ಸರ್ಕಾರದ ಮೂಲಕ ಮತ್ತು ಆಗ್ರೋ ಇಂಡಸ್ಟ್ರೀಸ್ ಮುಖಾಂತರ ಟ್ರಾಕ್ಟರ್‌ಗಳನ್ನು, ಪಂಪ್‌ಸೆಟ್‌ಗಳನ್ನು, ಎಲೆಕ್ಟ್ರಿಕ್ ಪಂಪ್‌ಸೆಟ್‌ಗಳನ್ನೂ, ಡೀಜಲ್ ಪಂಪ್‌ಸೆಟ್‌ಗಳನ್ನು ತೆಗೆದುಕೊಂಡಿರತಕ್ಕಂಥವರು ಸಾಲವನ್ನು ಸಕಾಲದಲ್ಲಿ ಕೊಟ್ಟರೆ ಅವರೇನು ಸುಸ್ತಿ ಬಡ್ಡಿಯನ್ನು ಕೊಟ್ಟಿದ್ದಾರೆ ಅದನ್ನು ಮನ್ನಾ ಮಾಡಿ ಸುಸ್ತಿ ಬಡ್ಡಿಯನ್ನು ಅಸಲಿಗೆ ಹಾಕಿ ಲೆಕ್ಕಾಚಾರ ಮಾಡುವ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡು ಸಣ್ಣ ರೈತರಿಗೆ ಮತ್ತು ದೊಡ್ಡ ರೈತರಿಗೂ ಅನುಕೂಲವನ್ನು ಮಾಡಿಕೊಟ್ಟಿದ್ದೇವೆ ಇನ್ನು ಪಶುಪಾಲನೆಯ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅವರು ಹೇಳಿದಂಥ ಮಾತು ಮುಖ್ಯವಾಗಿ ಪಶುಪಾಲನೆ ನಮ್ಮ ರಾಜ್ಯದಲ್ಲಿ ವ್ಯವಸಾಯದ ಜೊತೆಗೆ ಪಶುಪಾಲನೆ ಬಹಳ ಮುಖ್ಯವಾದುದು. ಇವತ್ತು ಪಶುಪಾಲನೆ ಇಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆ ಇವತ್ತು ನಮ್ಮ ಭೂ ಸುಧಾರಣಾ ಕಾನೂನಿನ ಪ್ರಕಾರ ಸಾಗುವಳಿಗೆ ಭೂಮಿ ಸುಮಾರು 1 ಲಕ್ಷ ಹೆಕ್ಟೇರುಗಳಷ್ಟು ಸಿಕ್ಕಬಹುದು ಎನ್ನತಕ್ಕಂಥ ಅಂಕಿಅಂಶಗಳು ನಮ್ಮ ಮುಂದಿದೆ. ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾ ನಾವು ಹೇಳುವುದಾದರೆ ಇದರಲ್ಲಿ ಹೈನುಗಾರಿಕೆ, ಕೋಳಿಸಾಕಾಣಿಕೆ ಕುರಿ ಸಾಕಾಣಿಕೆ, ಹಂದಿ ಸಾಕಾಣಿಕೆ ಕೆಲಸವನ್ನು ಮಾಡತಕ್ಕಂಥ ದಿಶೆಯಲ್ಲಿ ನಮ್ಮ ರೈತರೂ ಅದರಲ್ಲೂ ಸಣ್ಣ ರೈತರು, ಮತ್ತು ಭೂಮಿ ಕಡಿಮೆ ಇರತಕ್ಕಂಥ ರೈತರು, ಕೂಲಿಗಾರರೂ ಒಂದು ಕೈಗಾರಿಕೆಯನ್ನಾಗಿ ಇದನ್ನು ಮಾಡಿಕೊಳ್ಳಬೇಕಾಗಿದೆ ಇವತ್ತು ಒಂದು ಹಸುವನ್ನು ಮನೆಯಲ್ಲಿ ಕಟ್ಟಿ ಒಂದು ಉದ್ಯೋಗವನ್ನಾಗಿ ಮಾಡಿಕೊಳ್ಳಿ ಎಂದು ನಾನು ಅನೇಕ ಹಳ್ಳಿಗಳಿಗೆ ಭಾಷಣ ಮಾಡಲು ಹೋದಾಗ ಹೇಳುತ್ತಲೇ ಇದ್ದೇನೆ. ಒಂದು ಹಸುವನ್ನು ಕಟ್ಟಿಕೊಂಡರೆ ಅದು ಒಂದು ಸಣ್ಣ ಕಾರ್ಖಾನೆ ಇದ್ದಹಾಗೆ, ಅದು ಯಾವ ರೀತಿಯಲ್ಲಿ ಎಂದರೆ ಈಗ ಐ.ಟಿ.ಐ. ಎಚ್.ಎಂ.ಟಿ. ಎಚ್.ಎ.ಎಲ್. ಕಾರ್ಖಾನೆಗಳು ಇದ್ದ ಹಾಗೆಂದು ಹೇಳುತ್ತಾರೆ. ಆದರೆ ಈ ಕಾರ್ಖಾನೆಯಲ್ಲಿ ಯಾವ ಮುಷ್ಕರವೂ ಇರುವುದಿಲ್ಲ, ಯಾವ ಹೆಚ್ಚಿನ ಬೇಡಿಕೆಯೂ ಕೂಡ ಇರುವುದಿಲ್ಲ. ಅದಕ್ಕೆ ಹೊಟ್ಟೆತುಂಬಾ ಮೇವನ್ನು ಹಾಕಿ ಬಿಟ್ಟರೆ ಧಾರಾಕಾರವಾಗಿ ಹಾಲನ್ನು ಕೊಡುತ್ತದೆ, ಇದೊಂದು ರೈತರಿಗೆ ವರಪ್ರಸಾದವಾಗಿದೆ. ಇದನ್ನು ಸಣ್ಣ, ರೈತರು, ಕೂಲಿಗಾರರು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಿಶ್ರ ತಳಿ ಹಸುಗಳು ನಮ್ಮ ರಾಜ್ಯದಲ್ಲಿ ಸುಮಾರು 3 ಲಕ್ಷ ಇವೆ, ಅದು ಬೆಂಗಳೂರು ಜಿಲ್ಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಇದೆ,ಇದನ್ನು ಕೋಲಾರ, ತುಮಕೂರು ಜಿಲ್ಲೆಗಳಿಗೂ ಸಹ ವಿಸ್ತರಿಬೇಕೆಂದು ತೀರ್ಮಾನ ಮಾಡಿದ್ದೇವೆ ಹಾಗೆಯೇ ಎಸ್.ಎಫ್.ಡಿ.ಎ ಮತ್ತು ಡಿ.ಪಿ.ಎಪಿ. ಸ್ಕೀಂಗಳನ್ನು ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲೂ ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಬೇಕಾದಂಥ ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದೇವೆ ಇದಕ್ಕಾಗಿ ಪಶುವೈದ್ಯ ಇಲಾಖೆಯವರು ಬಹಳ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಇದರ ಜೊತೆಗೆ ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಮತ್ತು ಬೆಂಗಳೂರು ಅನುಮಲ್ ಹಸ್ಬೆಂಡ್ರಿ ಕಾರ್ಪೊರೇಷನ್ನಿನವರು ಮತ್ತು ಪಶುಪಾಲನೆ ಮತ್ತು ಹೈನುಗಾರಿಕೆ ಇಲಾಖೆಯವರು ಸಹ ತೀವ್ರ ಕಾರ್ಯಕ್ರಮಗಳನ್ನು ಕೈಗೊಂಡು ಕೆಲಸ ಮಾಡುತ್ತಿದ್ದಾರೆ. ನಾನು ಸಹ ಹಿಂದೆ ಈ ಸಭೆಯಲ್ಲಿ ಸದಸ್ಯನಾಗಿ ಕುಳಿತುಕೊಂಡು ನೋಡಿದ್ದೇನೆ. ಆದರೆ ಇಷ್ಟರಮಟ್ಟಿನ ಕೆಲಸ ಕಾರ್ಯಗಳು ಹಿಂದೆಂದೂ ಆಗಿರಲಿಲ್ಲವೆಂದು ಹೇಳಿದರೆ ಅದು ಉತ್ಪ್ರೇಕ್ಷೆಯ ಮಾತಲ್ಲ. ಕಳೆದ 3-4 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಕೆಲಸ ಕಾರ್ಯಗಳು ಏನಿವೆ ಮತ್ತೆ ಇನ್ನು ಯಾವ ರಾಜ್ಯದಲ್ಲೂ ಆಗಿಲ್ಲ, ಪಾಶ್ಚಿಮಾತ್ಯ ದೇಶದಿಂದ ಬಂದು ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಪ್ರಗತಿಯನ್ನು ನೋಡಿ, ಇಲ್ಲಿ ಇಷ್ಟು ಪ್ರಗತಿಯಾಗಲು ಕಾರಣ ರೈತರಲ್ಲಿ ಇರತಕ್ಕಂಥ ಒಂದು ಮೋಹ, ಅನುಕಂಪ, ಆಸಕ್ತಿಯೇ ಕಾರಣವೆಂದು ಹೇಳಿದ್ದಾರೆ. ಅದಕ್ಕೋಸ್ಕರ ಪಶುಪಾಲನೆ ಇಲಾಖೆಯಲ್ಲಿ ಬಹಳ ಪ್ರಗತಿದಾಯಕವಾದ ಮತ್ತು ತೀವ್ರವಾದಂಥ ಕಾರ್ಯಕ್ರಮವನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಮುಖ್ಯವಾಗಿ ನಮ್ಮ ಮೈಸೂರು ಸಿರಂ ವ್ಯಾಸಿನ್ ಇನ್‌ಸ್ಟಿಟ್ಯೂಟ್ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಅದಕ್ಕೆ ಈಗ 50 ವರ್ಷಗಳಾಗಿದೆ. ಅದನ್ನು ಈಗ ನಾವು ವೆಟರ್ನರಿ ಮತ್ತು ಬೈಲಾಜಿಕಲ್ ಇನ್‌ಸ್ಟಿಟ್ಯೂಟ್ ಎಂದು ಬದಲಾಯಿಸಿದ್ದೇವೆ. ಅಲ್ಲಿ ವ್ಯಾಕ್ಸಿನ್ ಏನು ತಯಾರು ಆಗುತ್ತಿವೆ. ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ಪತ್ತಿ ಮಾಡಿ, ಹೊರಗಡೆ ಇಂಥ ತರತಕ್ಕಂಥದ್ದನ್ನು ನಿಲ್ಲಿಸಬೇಕೆಂದುಮಾಡಿ ಅದರ ಕಾರ್ಯಕ್ರಮವನ್ನು ವಿಸ್ತರಿಸುತ್ತಿದ್ದೇವೆ. 5ನೇ

ಪ್ಲಾನ್‌ನಲ್ಲಿ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ವಿಶ್ವಬ್ಯಾಂಕ್‌ನವರು ಕೊಟ್ಟಿರತಕ್ಕಂಥ ಹಣದಲ್ಲಿ 135 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ವಿಸ್ತರಿಸಬೇಕೆಂದಿದ್ದೇವೆ. ಹಾಗೂ ಒಳ್ಳೆಯ ಕ್ವಾಲಿಟಿಯನ್ನು ಸಹ ಮೇಂಟೇನ್ ಮಾಡುತ್ತಿದ್ದೇವೆ. ಈ ಇನ್‌ಸ್ಟಿಟ್ಯೂಟ್ 13 ತರಹ ವ್ಯಾಕ್ಸಿನ್‌ಗಳನ್ನು ಉತ್ಪತ್ತಿ ಮಾಡುತ್ತಿದೆ. ಇದಕ್ಕೆ ಬೇಕಾದ ರಿಂಡರ್‌ಪೆಸ್ಟ್ ಮತ್ತು ಟಿಶ್ಯು ಕಲ್ಚರ್‌ನ್ನು ಹೊರಗಡೆಯಿಂದ ತರಿಸುತ್ತಿದ್ದೆವು. ಅವನ್ನು ಆ ರೀತಿ ತರಿಸತಕ್ಕಂಥದ್ದನ್ನು ನಿಲ್ಲಿಸಿ ಅವನ್ನು ಸಹ ಇಲ್ಲಿಯೇ ತಯಾರು ಮಾಡಿ ಉಪಯೋಗಿಸತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಇದೇ ರೀತಿಯಲ್ಲಿ ದೊಡ್ಡ ರೋಗ ಕಾಯಿಲೆ ಎಂದು ಬೆಂಗಳೂರಿನಲ್ಲಿ ಅದು ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಅದು ಜಾಸ್ತಿ ಹೊರಗಡೆಯಿಂದ ಬರುತ್ತಿದೆ, ಆದುದರಿಂದ ಅದನ್ನು ಕಂಪ್ಲೀಟ್ ಆಗಿ ತಡೆಗಟ್ಟಬೇಕೆಂದು ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪ ಮಾಡಿದರು. ಅದಕ್ಕೋಸ್ಕರ ನಾವು ಪ್ರತಿಯೊಂದು ಚೆಕ್‌ಪೋಸ್ಟ್‌ಗಳಲ್ಲಿ ವಿಜಿಲೆನ್ಸ್ ಸೆಲ್‌ಗಳನ್ನು ಹಾಕಿ ಚೆಕ್ ಮಾಡುತ್ತಿದ್ದೇವೆ. ಅದಕ್ಕೆ ಖರ್ಚು ಆಗತಕ್ಕಂಥ ಹಣಕ್ಕೆ ಕೇಂದ್ರ ಸರ್ಕಾರದವರು ಸಹ ಹಣ ಸಹಾಯವನ್ನು ಕೊಡುವುದಾಗಿ ಹೇಳಿದ್ದಾರೆ. ಅದನ್ನು ತಡೆಗಟ್ಟುವುದಕ್ಕೆ ನಾವು ಸಾಧ್ಯವಾದಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆಂದು ಮಾನ್ಯ ಸದಸ್ಯರುಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಫುಡ್ ಅಂಡ್ ಮೌತ್ ಡಿಸೀಜ್ ಎನ್ನತಕ್ಕಂಥದ್ದು ಮಿಶ್ರ ತಳಿ ಹಸುಗಳಿಗೆ ಕಾಣಿಸಿಕೊಳ್ಳುತ್ತದೆ. ಇದನ್ನು ತಡೆಗಟ್ಟಲಿಕ್ಕೆ ಬೇಕಾದಂಥ ವ್ಯಾಕ್ಸಿನ್‌ಗಳನ್ನು ನಿಲ್ಲಿಸಿ ಬಿಟ್ಟಿದ್ದಾರೆಂದು ಮಾನ್ಯ ಸದಸ್ಯರುಗಳು ಹೇಳಿದರು. 1974-75ರಲ್ಲಿ ಒಂದು ಸಾವಿರ ಡೋಜಸ್‌ನ್ನು ವ್ಯಾಕ್ಸಿನ್‌ನ್ನು ಮತ್ತು ಈ ವರ್ಷ 80 ಸಾವಿರ ಡೋಜಸ್‌ನ್ನು ತರಿಸಿ 50 ಪರ್ಸೆಂಟ್ ಸಬ್ಸಿಡಿ ಮುಖಾಂತರ ಕೊಟ್ಟಿದ್ದೇವೆ. ಅದಕ್ಕೆ ಒಟ್ಟು 8 ರೂಪಾಯಿಗಳು ಆಗುವ ಹಾಗಿದ್ದರೆ ರೈತರು 4 ರೂಪಾಯಿಗಳನ್ನು ಕೊಟ್ಟರೆ ಬಾಕಿ 4 ರೂಪಾಯಿಗಳನ್ನು ಸರ್ಕಾರದವರು ಆ ಖರ್ಚನ್ನು ತುಂಬಿದ್ದಾರೆ. 80 ಸಾವಿರ ಡೋಜಸ್‌ನ್ನು ಬೊಂಬಾಯಿಯಲ್ಲಿರತಕ್ಕಂಥ ಒಬ್ಬ ಸ್ಥಳೀಯ ಸಂಸ್ಥೆಯವರು ತಯಾರಿಸುತ್ತಿದ್ದಾರೆ. ಅವರೊಡನೆ ನಾನು ಮಾತನಾಡಿ, ನನ್ನ ಪ್ರಭಾವವನ್ನು ಬೀರಿ 11 ಸಾವಿರ ಡೋಜ್ಸ್ ಬರುವ ಹಾಗೆ ಮಾಡಿದ್ದೇನೆ. ಒಟ್ಟು 80 ಸಾವಿರ ಡೋಜಸ್‌ನ್ನು ತರಿಸಿ ಮಿಶ್ರ ತಳಿ ಹಸುಗಳಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆ ಮಾಡಿರುತ್ತೇವೆ. ಆದುದರಿಂದ ಅದನ್ನು ನಿಲ್ಲಿಸಬೇಕು ಎನ್ನತಕ್ಕಂಥ ಸರ್ಕಾರದ ಇಚ್ಛೆ ಇಲ್ಲ. ಇದೇ ರೀತಿ ಔಷಧಿಗಳನ್ನು ಹೆಚ್ಚು ಪ್ರಮಾಣದಲ್ಲಿ 18 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸ್ಪೆಷಲ್ ಔಷಧಿಗಳನ್ನು, ಪೇಟೆಂಟ್ ಡ್ರಗ್ಸ್‌ಗಳನ್ನು ಸಹ ತರಿಸಿ ಆಸ್ಪತ್ರೆಗಳಲ್ಲಿ ಕೊಡುತ್ತಿದ್ದೇವೆ. ಮತ್ತು ಇರತಕ್ಕಂಥ ಔಷಧಿಗಳ ದಾಸ್ತಾನು ಏನಿವೆ ಅದನ್ನು ಬಹಿರಂಗವಾಗಿ ರೈತರಿಗೆ ತಿಳಿಯುವ ರೀತಿಯಲ್ಲಿ ನೋಟೀಸ್ ಬೋರ್ಡ್‌ನಲ್ಲಿ ಹಾಕತಕ್ಕಂಥ ಒಂದು ಕಾರ್ಯಕ್ರಮವನ್ನು ಮಾಡಿದ್ದೇವೆ.

ನಮ್ಮ ಸರ್ಕಾರ ಬಂದ ಮೇಲೆ ಕಳೆದ ನಾಲ್ಕು ವರ್ಷಗಳಲ್ಲಿ ಶ್ರೀ ಮಾನ್ ದೇವರಾಜ್ ಅರಸ್ ಅವರು ಅಧಿಕಾರವನ್ನು ವಹಿಸಿಕೊಂಡ ಮೇಲೆ 450 ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಿದ್ದೇವೆ. ಕಳೆದ 25 ವರ್ಷಗಳಿಂದ 1106 ಪಶುವೈದ್ಯ ಶಾಲೆಗಳನ್ನು ಸ್ಥಾಪಿಸಿದ್ದಾರೆ. 50 ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಿದ್ದೇವೆ. ಪ್ರತಿ 10 ಸಾವಿರ ದನಗಳಿಗೆ ಜಾನುವಾರುಗಳಿಗೆ ಒಂದು ಪಶುವೈದ್ಯಶಾಲೆಯನ್ನು ಮಾಡಬೇಕೆಂದಿದ್ದೇವೆ. ಇಡೀ ಭರತಖಂಡದಲ್ಲಿಎಲ್ಲೂ ಈ ರೀತಿ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಇದರ ಕಡೆ ಹೆಚ್ಚು ಗಮನ ಕೊಟ್ಟಿದ್ದೇವೆ. ನಮ್ಮ ವೆಟರ್ನರಿ ಆಸ್ಪತ್ರೆಗಳಲ್ಲಿ ಜಿಲ್ಲಾ ಮಟ್ಟದಲ್ಲಿರತಕ್ಕವುಗಳಿಗೆ ವೆಟರ್ನರಿ ಡಿಸ್ಪೆನ್ಸರೀಸ್ ಎಂದು ಹೇಳುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಹೋಬಳಿ ಮಟ್ಟದಲ್ಲಿ ಇರಲಿ ಅವುಗಳಿಗೆ ವೆಟರ್ನರಿ ಅಸಿಸ್ಟೆಂಟ್ ಸರ್ಜನ್‌ಗಳನ್ನು ಡಾಕ್ಟರಾಗಿ ಹಾಕಿದ್ದೇವೆ. ವೆಟರ್ನರಿ ಡಾಕ್ಟರುಗಳಿಗೆ ತರಬೇತಿಯನ್ನು ಕೊಡುತ್ತಿದ್ದೇವೆ. ಆ ವೆಟರ್ನರಿ ಆಸ್ಪತ್ರೆಗಳಿಗೆ ಬೇಕಾದಂಥ ಚುಚ್ಚು ಮದ್ದುಗಳನ್ನು ಮತ್ತು ಔಷಧಿಗಳನ್ನು ಒದಗಿಸುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ ಮತ್ತು ದನಗಳಿಗೆ ಬರತಕ್ಕಂಥಾ ರೋಗಗಳಿಗೆ ಬೇಕಾದಂಥ ಔಷಧಿಗಳನ್ನು ಒದಗಿಸತಕ್ಕಂಥಾ ಪ್ರಯತ್ನವನ್ನೂ ಮಾಡಿದ್ದೇವೆ. ಮತ್ತು ರೋಗಗಳು ಬಾರದಂತೆ ಮುಂಜಾಗರೂಕತೆಯ ಕ್ರಮವನ್ನು ತೆಗೆದುಕೊಳ್ಳತಕ್ಕಂಥಾ ಪ್ರಯತ್ನವನ್ನು ನಾವು ಮಾಡಿದ್ದೇವೆ. ಕರುಗಳಿಗೆ ಬರತಕ್ಕ ವರ್ಮ್ಸ್ ಡಿಸೀಜ್ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಮಳೆಗಾಲದಲ್ಲಿ ಹುಲ್ಲು ಮತ್ತು ಜೊಂಡಿನಮೇಲೆ ಒಂದು ತರಹ ಹುಳುಗಳು ಇರುತ್ತವೆ. ಅಂಥಾದ್ದನ್ನು ಕರುಗಳು

ಮೇದರೆ ಅದರಲ್ಲಿರತಕ್ಕ ಹುಳುಗಳು ಕರುಗಳ ಹೊಟ್ಟೆಯಲ್ಲಿ ಹೋಗಿ ಖಾಯಿಲೆ ಬರುತ್ತದೆ. ಆ ಖಾಯಿಲೆ ಬಾರದಂತೆ ಅದನ್ನು ತಪ್ಪಿಸಲು ನಾವು ಡೋಸೇಜ್ ಕೊಡತಕ್ಕ ಕೆಲಸವನ್ನು ಮಾಡ ಲಾಗುತ್ತಿದೆ. ಈ ಒಂದು ಕಾರ್ಯಕ್ರಮ ನಡೆಯುತ್ತಿದೆ.

5–30 P. M.

ದೋಣಿ ಕ್ಯಾಟರ್ ಬ್ರೀಡಿಂಗ್ ಸ್ಟೇಷನ್ ಬೀದರ್ ಡಿಸ್ಟ್ರಿಕ್ಟ್, ಕಳೆದ ಸಲ ಮುಂಗಡ ಪತ್ರವನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡಲಾಗಿತ್ತು. ಇದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಂಡು ಇದನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ. ಹೈದರಾಬಾದ್ ಕರ್ನಾಟಕದಲ್ಲಿ ಈ ದೋಣಿ ಕ್ಯಾಟಲ್ ಬ್ರೀಡಿಂಗ್ ಫಾರಂ ಅನ್ನು ಮಾಡುವುದರಿಂದ ಹೈದರಾಬಾದ್ ಕರ್ನಾಟಕದಲ್ಲಿ ತಳಿ ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಹಳ್ಳಿಕಾರ್ ಮತ್ತು ಅಮೃತಮಹಲ್ ತಳಿಗಳು ಏನಿವೆ. ಇವುಗಳು ಜನತಾ ಪ್ರಸಿದ್ಧವಾದ ತಳಿಗಳು. ಇದನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರಬೇಕೆಂಬ ಉದ್ದೇಶವನ್ನು ಸರ್ಕಾರದವರು ಹೊಂದಿದ್ದಾರೆ. ಮತ್ತು ಈ ಅಮೃತಮಹಲ್ ಮತ್ತು ಹಳ್ಳಿಕಾರ್ ತಳಿಯನ್ನು ಅಭಿವೃದ್ಧಿಪಡಿಸುವ ಕೇಂದ್ರಗಳನ್ನು ಆರಂಭಿಸಲಾಗುವುದು. ಬೆಂಗಳೂರಿನ ಮಿಶ್ರತಳಿಗಳನ್ನು ಅಭಿವೃದ್ಧಿ ಮಾಡಬೇಕು, ಹಾಲಿನ ಉತ್ಪಾದನೆಗೆ ಬೇಕಾದಂತಹ ಕರುಗಳನ್ನು ಪಡೆಯುವಂತೆ ಮಾಡಬೇಕು ಎಂದು ಮತ್ತು ಈ ತಳಿಯು ನಶಿಸಿ ಹೋಗುತ್ತಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ಸರ್ಕಾರದ ಹಾಗೂ ತಜ್ಞರ ಅಭಿಪ್ರಾಯ ಕೂಡ ಈ ಹಳ್ಳಿಕಾರ್ ಮತ್ತು ಅಮೃತಮಹಲ್ ತಳಿಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಇದೆ. ವ್ಯವಸಾಯಕ್ಕೆ ಬೇಕಾದ ಎತ್ತುಗಳನ್ನು ಪಡೆಯತಕ್ಕ ದೃಷ್ಟಿಯಿಂದ ತುಮಕೂರು ಜಿಲ್ಲೆಯಲ್ಲಿ ಈ ಹಳ್ಳಿಕಾರ್ ಮತ್ತು ಅಮೃತಮಹಲ್ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಒಂದು ಫಾರಂ ಅನ್ನು ಪ್ರಾರಂಭ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ. ಇದಕ್ಕೆ ಬೇಕಾದ ಸ್ವಲ್ಪ ಹಣವನ್ನು ಬಜೆಟ್ಟಿನಲ್ಲಿ ಸುಮಾರು 8 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ತಳಿಗಳ ಅಭಿವೃದ್ಧಿಗೆ ಬೇಕಾದಂತಹ ಜಮೀನು ಅಮೃತಮಹಲ್ ಕಾವಲು ಇದೆ, ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅಮೃತಮಹಲ್ ಕಾವಲನ್ನು ಒಂದು ಎಕರೆಯನ್ನೂ ಸಹ ಯಾರಿಗೂ ಕೊಟ್ಟಿಲ್ಲ. ಸಾವಿರಾರು ಎಕರೆ ಜಮೀನನ್ನು ವ್ಯವಸಾಯಕ್ಕೆ ಹಿಂದಿನ ಸರ್ಕಾರದವರು ಕೊಟ್ಟಿದ್ದರು. ಈ ಹಳ್ಳಿಕಾರ ಮತ್ತು ಅಮೃತಮಹಲ್ ತಳಿ ಅಭಿವೃದ್ಧಿಯಾಗಬೇಕು, ಪಶುಪಾಲನೆಯನ್ನು ಅಭಿವೃದ್ಧಿ ಮಾಡಬೇಕು ಎನ್ನುವ ದೃಷ್ಟಿಯಿಂದ ಅಮೃತಮಹಲ್ ಕಾವಲನ್ನು ಒಂದು ಎಕರೆಯನ್ನೂ ಕೂಡ ನಾವು ಯಾರಿಗೂ ಉಳುವುದಕ್ಕೆ ಕೊಟ್ಟಿಲ್ಲ. ಮಿಶ್ರತಳಿಯನ್ನು ಅಭಿವೃದ್ಧಿ ಮಾಡದಿದ್ದರೆ ಎತ್ತುಗಳಿಗೆ ಕೊರತೆ ಬರುತ್ತದೆ ಎಂದು ಅದರ ಅಭಿವೃದ್ಧಿಯ ಕಡೆಗೂ ಕೂಡ ಗಮನ ಕೊಡ ಲಾಗುತ್ತಿದೆ. ಬೆಂಗಳೂರಿನಲ್ಲಿ ಹುಟ್ಟಿದ ಒಂದು ಹೋರಿ ಕುವಿಗೆ 3 ಸಾವಿರ ರೂಪಾಯಿಗಳಾಗುತ್ತದೆ. ಎಂದರೆ ಒಂದು ಪವರ್ ಟಿಲ್ಲರಿನ ಅರ್ಧ ಬೆಲೆ ಆಗುತ್ತದೆ. ಈ ದೃಷ್ಟಿಯಿಂದ ಬೆಂಗಳೂರಿನಲ್ಲಿ ಹುಟ್ಟಿದ ಮಿಶ್ರ ತಳಿ ಹೋರಿ ಕರುಗಳನ್ನು ಕೊಂಡು ಅವುಗಳನ್ನು ಹೆಸರುಘಟ್ಟ ಫಾರಂನಲ್ಲಿ 6 ತಿಂಗಳು ಅವುಗಳಿಗೆ ಒಳ್ಳೆಯ ಮೇವು ಹಾಕಿ ಸಾಕಿ ನಂತರ ಬೀರೂರು ಅಮೃತಮಹಲ್ ಕಾವಲಿನಲ್ಲಿ ಸಾಕಿ ಅವುಗಳಿಗೆ ಎರಡು ವರ್ಷ ವಯಸ್ಸಾದ ಮೇಲೆ ಅವುಗಳನ್ನು ಎತ್ತುಗಳಾಗಿ ಕನ್‌ವರ್ಟ್ ಮಾಡಿ ಒಂದು ಎತ್ತಿಗೆ 250–300 ರೂಪಾಯಿಗಳ ಬೆಲೆಗೆ ಪುಟ್ಟ ರೈತರಿಗೆ ಒದಗಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಮಿಶ್ರತಳಿಯ 70–72 ಕರುಗಳನ್ನು ಹೆಸರುಘಟ್ಟದಲ್ಲಿ ಸಾಕುತ್ತಿದ್ದೇವೆ. 6 ತಿಂಗಳಾದ ಮೇಲೆ ಮಾತ್ರ ಅವುಗಳನ್ನು ಬೀರೂರು ಅಮೃತಮಹಲ್ ಕಾವಲಿಗೆ ಕಳುಹಿಸಿ ಎರಡು ವರ್ಷ ವಯಸ್ಸಿನವರಿಗೆ ಸಾಕಿ ನಂತರ ಅವುಗಳನ್ನು ಎತ್ತುಗಳಾಗಿ ಕನ್‌ವರ್ಟ್ ಮಾಡಿ ಅವುಗಳನ್ನು ಒಂದು ಎತ್ತಿಗೆ 2 0–300 ರೂಪಾಯಿಗಳ ಬೆಲೆಯಲ್ಲಿ ಬಡ ರೈತರಿಗೆ ವ್ಯವಸಾಯ ಮಾಡುವುದಕ್ಕೆ ಒದಗಿಸಲಾಗುತ್ತಿದೆ. ಮುಂದಿನ ವರ್ಷ 120 ಕರುಗಳನ್ನು ಸಾಕಿ ರೈತರಿಗೆ ಒದಗಿಸಬೇಕೆಂದಿದ್ದೇವೆ. ಈ ರೀತಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಇದರಲ್ಲಿ ಒಂದು ಸಾವಿರ ಅಥವಾ ಎರಡು ಸಾವಿರ ಕರುಗಳನ್ನು ರೈತರಿಗೆ ಮಾರಬೇಕು ಎಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಬೇರೆ ಕಡೆ ಒಂದು ಕರುವಿಗೆ $2\frac{1}{2}$ ಸಾವಿರ ರೂಪಾಯಿಗಳಂತೆ ಹರಾಜು ಆಗುತ್ತಿದೆ. ಇಂಥಾ ಕರುಗಳನ್ನು ಸುಲಭ ದರದಲ್ಲಿ ರೈತರಿಗೆ ಒದಗಿಸಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ಹೆಣ್ಣು ಕರುಗಳನ್ನು ಚಿಕ್ಕವಯಸ್ಸಿನಲ್ಲಿ ಸರಿಯಾಗಿ ಸಾಕದಿದ್ದರೆ ಅವುಗಳ ಶಕ್ತಿ ಕುಂದುತ್ತದೆ ಎಂದು ತಾವೆ ಹಿಂದೆ ಒಂದು ಸಾರಿ ವಿವರಣೆಯನ್ನು ಕೊಟ್ಟಿದ್ದೀರಿ, ಅದಕಾರಣ ಸಣ್ಣ ವಯಸ್ಸಿನ ಹೆಣ್ಣು ಕರುಗಳನ್ನು ಸಾಕಿ ರೈತರಿಗೆ ಮಾರಬೇಕು ಎಂದು ತಾವೇ ಹೇಳಿದ್ದೀರಿ, ಆ ಯೋಜನೆ ಏನಾಯಿತು ? ಬೇಸಾಯಕ್ಕೆ ಅನುಕೂಲ ಮಾಡಬೇಕು, ಮತ್ತು ಉತ್ತಮವಾದ ತಳಿಗಳನ್ನು ಕಾಪಾಡಿಕೊಂಡು ಬರಬೇಕಾದರೆ ಚಿಕ್ಕವಯಸ್ಸಿನಲ್ಲಿ ಕರುಗಳಿಗೆ ಸರಿಯಾಗಿ ತಿಂಡಿಯನ್ನು ಹಾಕಬೇಕು ಈ ದೃಷ್ಟಿಯಿಂದ ಸಣ್ಣ ಹೆಣ್ಣು ಕರುಗಳನ್ನು ಸಾಕಿ ರೈತರಿಗೆ ಮಾರುವ ಯೋಜನೆ ಏನಾಯಿತು ?

ಶ್ರೀ ಎನ್. ಚಿಕ್ಕೇಗೌಡ.—ಶ್ರೀಮಾನ್ ರಾಮೇಗೌಡರು ಹೇಳಿದ ವಿಚಾರಕ್ಕೆ ಸಂಬಂಧಪಟ್ಟ ಒಂದು ಯೋಜನೆ ಬರುತ್ತದೆ. ಹೆಣ್ಣು ಕರುಗಳ ರೇರಿಂಗ್ ಸೆಂಟರ್ ಪ್ರಾರಂಭ ಮಾಡಬೇಕೆಂದಿದ್ದೇವೆ. ಮತ್ತು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಯೋಜನೆಯನ್ನು ಮಾಡುವುದಕ್ಕೋಸ್ಕರ ಮುಂದಿನ ವರ್ಷದಲ್ಲಿ ಎಂದರೆ 1 76-77 ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಟೈಮ್ ಷೆಡ್ಯೂಲ್ ಹಾಕಿದೆ. ಅದನ್ನೂ ಸಹ ಪ್ರಾರಂಭ ಮಾಡುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ಇಡೀ ದಕ್ಷಿಣ ಭಾರತದಲ್ಲಿಯೇ ದನಗಳಿಗೆ ಬೇಕಾದಂತಹ ಮೇವು ಹಸುರು ಹುಲ್ಲು, ಒಣ ಹುಲ್ಲನ್ನು ಬೆಳೆಯುವುದಕ್ಕೆ ಬೇಕಾದಂತಹ ದ್ವಿದಳ ಧಾನ್ಯದ ಬೀಜಗಳನ್ನು ಮತ್ತು ರೂಟ್ಸ್ ಸ್ಲಿಪ್ಸ್ ಅನ್ನು ಬೆಳೆಯತಕ್ಕ ಫಾರಮ್ ಮಾಡಬೇಕೆಂದಿದ್ದೇವೆ. ಮೇವನ್ನು ಒದಗಿಸುವಂತೆ ಮಾಡದಿದ್ದರೆ ದನಗಳು ಅಭಿವೃದ್ಧಿಯಾಗುವುದಿಲ್ಲ ಎಂದು ಬಹಳ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ತಜ್ಞರು ಹೇಳಿದ್ದಾರೆ. ಅದಕ್ಕೋಸ್ಕರವಾಗಿ ನಾನು ಆಸ್ಟ್ರೇಲಿಯಾ ದೇಶಕ್ಕೆ ಪ್ರವಾಸ ಹೋದಾಗ ಅಲ್ಲಿ ಸಂಬಂಧಪಟ್ಟ ಆಫೀಸರ ಜೊತೆಯಲ್ಲಿ ಮಾತುಕತೆ ನಡೆಸಿದ್ದೇನೆ. ಅವರು ಈ ಯೋಜನೆಗೆ ಒಂದು ಕೋಟಿ ರೂಪಾಯಿಗಳ ನೆರವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಇದು ಸೆಂಟ್ರಲ್ ಫಾಡರ್ ಸೀಡ್ ಪ್ರೊಡಕ್ಷನ್ ಫಾರಂ ಯೋಜನೆ. ಇದಕ್ಕೆ ಸಂಬಂಧಪಟ್ಟ ಅಗ್ರಿಮೆಂಟ್ ಸೈನ್ ಆಗಿದೆ. ಇದು ಐದು ವರ್ಷಗಳ ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟದ್ದು. ಈ ಯೋಜನೆಯು ಒಟ್ಟು ಮೊತ್ತ 49.99 ಲಕ್ಷ ರೂಪಾಯಿಗಳು ಇದಕ್ಕೆ ಬೇಕಾದ 350 ಎಕರೆ ಜಮೀನನ್ನು ಹೆಸರುಘಟ್ಟದಲ್ಲಿ ಕೊಟ್ಟಿದೆ. ಈ ಮೇವು ಬೀಜ ಉತ್ಪಾದನಾ ಕೇಂದ್ರದಲ್ಲಿ ಬೆಳೆಯುತಕ್ಕ ಬೀಜಗಳು ನಮ್ಮ ರಾಜ್ಯಕ್ಕೇ ಅಲ್ಲ, ಇಡೀ ಭಾರತ ದೇಶದಲ್ಲಿ ಎಲ್ಲಾ ರಾಜ್ಯಗಳಿಗೂ ಅನುಕೂಲವಾಗುತ್ತದೆ. ಅದರಿಂದ ಹೈನುಗಾರಿಕೆಗೂ ಅನುಕೂಲವಾಗುತ್ತದೆ.

ನಮ್ಮಲ್ಲಿ ಇನ್‌ಸೆಂಟೀವ್ ಕ್ರಾಸ್ ಬ್ರೀಡಿಂಗ್ ಆಫ್ ಕ್ಯಾಟಲ್ ಇಂಪೋರ್ಟೆಡ್ ಫ್ರೋಜನ್ ಸೆಮನ್ ಯೋಜನೆಗೆ ಒಂದು ಲಕ್ಷ 20 ಸಾವಿರ ರೂಪಾಯಿಗಳನ್ನು ಒದಗಿಸಿವೆ ಇದು ಇಂಡೋಡ್ಯಾನಿಷ್ ಕಾರ್ಯಕ್ರಮ. ಇದಕ್ಕೆ ಸುಮಾರು 30 ಲಕ್ಷ ರೂಪಾಯಿಗಳ ಯಂತ್ರೋಪಕರಣಗಳನ್ನು ಕೊಟ್ಟು ಹೆಬ್ಬಾಳಿನಲ್ಲಿಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಹೊರದೇಶಗಳಿಂದ ತರಿಸುವುದನ್ನು ಬಿಟ್ಟು ನಮ್ಮಲ್ಲೇ ಇರತಕ್ಕ ಗೂಳಿಗಳಿಂದ ಸೆಮನ್ ತೆಗೆದುಕೊಂಡು ಘನಿ ಮಾಡಿದ ವೀರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮತ್ತು ಇವತ್ತಿನ ದಿವಸ ಈ ಆರ್ಟಿಫಿಷಿಯಲ್ ಬ್ರೀಡಿಂಗ್ ವಿತ್ ಫ್ರೋಸನ್ ಸ್ಕೀಮನ್ನು ತುಂಗಭದ್ರ ಪ್ರಾಜೆಕ್ಟ್ ಏರಿಯಾದಲ್ಲಿ ಪ್ರಾರಂಭ ಮಾಡಬೇಕು ಎಂದು ನಾವು ಈಗಾಗಲೇ ಸುಮಾರು ೨೪ ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಇಂಟೆನ್‌ಸೀವ್ ಕ್ಯಾಟಲ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಬೆಂಗಳೂರು ಧಾರವಾರ್ ಏರಿಯಾದಲ್ಲಿ ಇರತಕ್ಕದ್ದು. ಇದರಿಂದ ಅನೇಕ ರೈತರಿಗೆ ಅನುಕೂಲವಾಗಿದೆ ಪೌಲ್ಟ್ರಿ ಫಾರಂನಲ್ಲೂ ಕೂಡ ಅನೇಕರಿಗೆ ಅನುಕೂಲವಾಗಿದೆ. ಕೋಳಿ ಸಾಕಾಣಿಕೆಯಲ್ಲಿ ತತ್ತಿ ಉತ್ಪತ್ತಿಯಾಗತಕ್ಕದ್ದು, ಮೇವು ವಗೈರೆ ಲಾಭ ತರುತ್ತಾ ಇದೆ ಕಳೆದ ವರ್ಷಕ್ಕಿಂತ ಈ ವರ್ಷ ಆಶಾದಾಯಕವಾಗಿದೆ ಗವರ್ನಮೆಂಟ್ ಡೈರಿಯನ್ನು ಧಾರವಾರ, ಬೆಳಗಾಂ. ಶಿವಮೊಗ್ಗ, ಮಂಗಳೂರು, ಗುಲ್ಬರ್ಗಗಳಿಗೆ ಎಕ್ಸ್‌ಟೆನ್‌ಷನ್ ಮಾಡಬೇಕು, ಮತ್ತು ೧೦ ಸಾವಿರ ಲೀಟರಿನಿಂದ ೫೦ ಲೀಟರ್‌ವರೆಗೆ ಏರಿಸುವುದಕ್ಕೆ ಏರ್ಪಾಡು ಮಾಡಬೇಕು ಎಂದು ಸಂಬಂಧಪಟ್ಟ ಯಂತ್ರಗಳನ್ನು ಮತ್ತು ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಬೇಸಿಗೆಯಲ್ಲಿ ತೊಂದರೆಯಾಗಿದ್ದರೂ ಸಹ ಮಳೆಗಾಲದಲ್ಲಿ ಹಸಿರು ಮೇವು ಹೆಚ್ಚಾಗಿ ಸಿಗು

ವಂಥ ಸಂದರ್ಭವಿರುತ್ತದೆ. ಗೋವಾಕ್ಕೆ ೨೦೦೦ ಲೀಟರನ್ನು ಕೊಡುತ್ತೇವೆ ಎಂದು ಒಪ್ಪಿಗೆ ಮಾಡಿಕೊಂಡು ೨೦೦೦ ಲೀಟರನ್ನು ಗೋವಾಕ್ಕೆ ಒದಗಿಸುತ್ತಿದ್ದೇವೆ ಇದು ಒಂದು ಹೊಸ ಹೆಜ್ಜೆ. ಆಮೇಲೆ ಮಿಲ್ಕ್ ಚಿಲ್ಲಿಂಗ್ ಯೂನಿಟ್ಸನ್ನು ಹೆಚ್ಚಾಗಿ ಕೊಟ್ಟಿದ್ದೇವೆ. Two Milk chilling units one for Bidar and other for Hulgol in North Kanara District are purchased. ೨ ಸಾವಿರದಿಂದ ೪ ಸಾವಿರವವರೆಗೆ ಶೇಖರಿಸತಕ್ಕ ಕೆಪಾಸಿಟಿ ಇರುವ ೪೧ ಮಿಲ್ಕ್ ಚಿಲ್ಲಿಂಗ್ ಯೂನಿಟ್ಸನ್ನು ಇಟ್ಟಿದ್ದೇವೆ ಎಲ್ಲಾ ಡೈರಿಗಳಲ್ಲೂ ಪ್ರೊಕ್ಯೂರ್ ಮಾಡುವುದು ಮತ್ತು ವಿತರಣೆ ಮಾಡತಕ್ಕ ಕಾರ್ಯ ಅಭಿವೃದ್ಧಿಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ಹೊಸ ಸ್ಕೀಮನ್ನು ಸೆಂಟ್ರಲ್ ಗವರ್ನಮೆಂಟಿನಿಂದ ಪಡೆದು ಇಲ್ಲಿ ಡಕ್ ಫಾರ್ಮ್ಸನ್ನು ಮಾಡಿದ್ದೇವೆ. ಹೆಸರಘಟ್ಟದಲ್ಲಿ ಬಾತುಕೋಳಿ ಫಾರಂನ್ನು ಮಾಡುತ್ತಾ ಇದ್ದೇವೆ, ಇದಕ್ಕೆ ಬೇಕಾದ 39½ ಎಕರೆಯಷ್ಟು ಪ್ರದೇಶವನ್ನು ಕೊಟ್ಟಿದ್ದೇವೆ. ಬಾತುಕೋಳಿಯನ್ನು ಅಭಿವೃದ್ಧಿ ಮಾಡುವ ಬಗ್ಗೆ ಒಂದು ಹೊಸ ಸ್ಕೀಮನ್ನು ಪಡೆದಿದ್ದೇವೆ ಎಂಬ ಹೊಸ ಸುದ್ದಿಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ನಮ್ಮಲ್ಲಿ ಇಂಟೆನ್ಸೀವ್ ಪೌಲ್ಟ್ರಿ ಪ್ರಾಜೆಕ್ಟನ್ನು ಗುಲ್ಬರ್ಗದಲ್ಲೂ ಸ್ಥಾಪನೆ ಮಾಡಬೇಕು ಎಂದು ಇದ್ದೇವೆ. ಹೆಸರಘಟ್ಟದಲ್ಲಿ ಮೈಚಿಕ್ಸ್ ಕೋಳಿ ತಳಿಯನ್ನು ಆಲ್ ಇಂಡಿಯಾ ಲೆವಲ್‌ನಲ್ಲಿ ರ್‍ಯಾಂಡಂ ಸ್ಯಾಂಪಲ್ ಲೇಯಿಂಗ್ ಸುಮಾರು ೨೭೨ ಮೊಟ್ಟೆಗಳನ್ನು ಒಂದು ವರ್ಷಕ್ಕೆ ಇಡತಕ್ಕದು. "MYCHIX" of the State Poultry Farm Hesaraghatta has for the second time stood first in its performance in the Random Samply Laying Test by 272 eggs per layer against its previous record of 234 eggs per layer, ಇದು ಹೈಯೆಸ್ಟ್ ಲೇಯರ್ ಆಲ್ ಇಂಡಿಯಾ ಲೆವೆಲ್ ಆಗಿದೆ.

The Karnataka State is the first State in the country in adopting cross breeding using superior germ plasma from exotic bulls. This programme has been intensified in order to step up milk production.

ಆಮೇಲೆ ಸ್ಮಾಲ್ ಫಾರ್ಮರ್ಸ್‌ಗೆ ಡ್ರಾಟ್ ಪ್ರೋನ್ ಏರಿಯಾ ಪ್ರೋಗ್ರಾಂ ಪ್ರಕಾರ ಬಿಜಾಪುರದಲ್ಲಿ ಲಕ್ಷಾಂತರ ಜನರಿಗೆ ಅನುಕೂಲವಾಗಿದೆ. ಮತ್ತೊಂದು ಹೊಸ ಯೋಜನೆಯೆಂದರೆ, ಪ್ರಧಾನಿಯವರ ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರದವರ ಹಣವನ್ನು ಒದಗಿಸುವುದಕ್ಕೆ ಮುಂದೆ ಬಂದಿದ್ದಾರೆ I would like to mention about the Livestock Production programme through Small/Marginal Farmers and Agricultural Labourers. The total outlay of the project upto the end of the fifth five year plan is Rs. 546.96 lakhs The subsidy component of the programme is Rs. 143.97 lakhs. This is a new scheme.

The salient features of the programme are.—

(1) Farmers would be assisted to set up poultry units of 50 layers each.

(2) To establish sheep units of 20 ewes and 1 ram each.

(3) To set up a units of 3 sows each.

(4) Subsidy for rearing cross breed calves will be given to the Small Marginal Farmers.

ಇದರಿಂದ ೧೮,೫೦೦ ಜನ ಫಾರ್ಮರ್ಸ್‌ಗೆ ಬೆನಿಫಿಟ್ ಆಗುತ್ತದೆ. ಶೀಪ್ ಪ್ರೊಡಕ್ಷನ್ ೫೦೦೦, ಫಾರ್ಕ್ ಪ್ರೊಡಕ್ಷನ್ ೧೫೦೦, ಪೌಲ್ಟ್ರಿ ಪ್ರೊಡಕ್ಷನ್ ೬೦೦೦ ಮತ್ತು ಕಾಲ್ಫ್ ಸಬ್ಸಿಡಿ ೬೦೦೦ ಒಟ್ಟು ೧೮,೫೦೦ ಜನರಿಗೆ ೫೪೬.೯೬ ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡಿದ್ದೇವೆ ಬೆಂಗಳೂರು, ಮೈಸೂರು, ಕೂರ್ಗ್, ತುಮಕೂರು, ಬಿಜಾಪುರ, ಧಾರವಾರ, ಬೀದರ್ ಬೆಳಗಾಂ, ಚಿತ್ರದುರ್ಗ, ಕೋಲಾರ, ಹಾಸನ, ಮಂಡ್ಯ—ಇಷ್ಟು ಜಿಲ್ಲೆಗಳಲ್ಲಿ ಇದನ್ನು ಜಾರಿ ಮಾಡುತ್ತಾ ಇದ್ದೇವೆ. ಇದಕ್ಕೆ ಬೇಕಾ

ದಂಥ ಹೆಡ್‌ಕ್ವಾರ್ಟರ್‌ನಲ್ಲಿರತಕ್ಕ ಸ್ಟಾಫ್‌ಗೆ ೫೦-೫೦ ರೂಪಾಯಿ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ನ್ನು ರಾಜ್ಯ ಸರ್ಕಾರದವರು ಕೊಡುತ್ತೇವೆ. ಮತ್ತು ಕೇಂದ್ರ ಸರ್ಕಾರದವರು ಎಲ್ಲಾ ಜಿಲ್ಲೆಗಳಿಗೆ ೧೦೦ ಪರ್ಸೆಂಟ್ ಕೊಡತಕ್ಕವರಿದ್ದಾರೆ.

ಇನ್ನು ಕುರಿ ಸಾಕಾಣಿಕೆ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ೪೨ ಲಕ್ಷ ಕುರಿಗಳಿವೆ. ಕುರಿ ಸಾಕಾಣಿಕೆ ಬಗ್ಗೆ ಒಂದು ಪ್ರಾಜೆಕ್ಟನ್ನು ತಯಾರು ಮಾಡುತ್ತಿದ್ದೇವೆ. ವರ್ಲ್ಡ್ ಬ್ಯಾಂಕ್ ಸಹಾಯದಿಂದ ಡೈರಿ ಡೆವಲಪ್‌ಮೆಂಟ್ ಮಾಡಿರುವ ಹಾಗೆ Sheep Devolopment Project ನ್ನು World Bank Assistance ನಿಂದ ಮಾಡುವವರಿದ್ದೇವೆ. The total outlay of the project is estimated at Rs. 75 lakhs. ಇನ್ನು ೬ ವರ್ಷಗಳಲ್ಲಿ ಈ ಪ್ರಾಜೆಕ್ಟನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡುತ್ತಿದ್ದೇವೆ. ಇದಕ್ಕೆ ವಿಶ್ವಬ್ಯಾಂಕನವರು ಒಪ್ಪಿಗೆ ಕೊಡತಕ್ಕ ಆಶಾದಾಯಕ ಸೂಚನೆಯನ್ನು ಇಟ್ಟುಕೊಂಡಿದ್ದೇವೆ ಇದು ಒಂದು ಹೊಸ ಯೋಜನೆ ಬೃಹತ್ ಪ್ರಮಾಣದಲ್ಲಿ ಕುರಿ ಸಾಕಾಣಿಕೆ ಮಾಡತಕ್ಕವರಿಗೆ ಅನುಕೂಲವಾಗುತ್ತದೆ. ನಮ್ಮ ಗುರಿಯಲ್ಲಿ ಇದೊಂದು ಮೈಲಿಗಲ್ಲು ಎಂದು ಹೇಳಿದರೆ ತಪ್ಪಾಗಲಾರದು. ಕುರಿಗಳಲ್ಲೂ ಕೃತಕ ಗರ್ಭಧಾರಣೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಇದು ರಷ್ಯಾದಲ್ಲಿ ಬಿಟ್ಟರೆ ಇನ್ನೆಲ್ಲೂ ಯಶಸ್ವಿಯಾಗಿಲ್ಲ, ಒಂದು ಟಗರಿನಿಂದ ಪಡೆದಂಥ ವೀರ್ಯವನ್ನು ೬೦೦ ಹೆಣ್ಣು ಕುರಿಗಳಿಗೆ ಕೊಡಬಹುದು.

ಇನ್ನು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕೆಲಸಕಾರ್ಯಗಳ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗಿದೆ. ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಈಗಾಗಲೇ ಕೆಲಸ ಪ್ರಾರಂಭ ಮಾಡಿದೆ ನೂರು ಹಾಲಿನ ಉತ್ಪಾದಕರ ಸಹಕಾರ ಸಂಘಗಳನ್ನು ಮಾಡಿದೆ. ಬೆಂಗಳೂರು, ಮೈಸೂರು ಹಾಸನ, ತುಮಕೂರು, ಕಡೆಗಳಲ್ಲಿ ಕೆಲಸ ಪ್ರಾರಂಭ ಮಾಡಿ ೧೪,೯೦೦ ಲೀಟರ್ ಹಾಲನ್ನು ಉತ್ಪತ್ತಿ ಮಾಡಲಾಗುತ್ತಿದೆ. ಈಗಾಗಲೇ ಸೆಕೆಂಡ್ ರೂಟ್ ಬೆಂಗಳೂರು ಮೈಸೂರು, ತುಮಕೂರು, ಹಾಸನದಲ್ಲಿ ಪ್ರಾರಂಭ ಮಾಡಿದೆ. ತರ್ಡ್ ರೂಟನ್ನೂ ಪ್ರಾರಂಭ ಮಾಡಿದೆ. ೧೨ ಸೊಸೈಟಿಗಳಿವೆ. ಇದರ ಜೊತೆಗೆ ೧೦೦ ಸೊಸೈಟಿಗಳನ್ನು ಮಾಡುವುದರ ಜೊತೆಗೆ ಇನ್ನೂ ೧೨ ಸೊಸೈಟಿಗಳನ್ನು ಮಾಡುತ್ತೇವೆ. ಇದರ ಬಗ್ಗೆ ರೈತರನ್ನು ಟ್ರೈನಿಂಗ್‌ಗೆ ಕಳಿಸುವುದಕ್ಕಾಗಿ ೨೦ ಜನ ಒಂದೊಂದು ಬ್ಯಾಚ್ ಅಂಥಾದ್ದು ೪ ಬ್ಯಾಚನ್ನು ಕಳಿಸಿದ್ದೇವೆ. ೯ ಜನ ಅಧಿಕಾರಿಗಳು ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಫೀಲ್ಡ್ ವರ್ಕ್ ಮಾಡುತ್ತಾ ಇದ್ದಾರೆ ಕಾರ್ಪೊರೇಷನ್ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ ನಮಗೆ ಬೇಕಾದಂಥ ಬೆಂಗಳೂರಿನಲ್ಲಿರತಕ್ಕ ಡೈರಿ ೩ ಲಕ್ಷ ಲೀಟರ್, ಮೈಸೂರಿನಲ್ಲಿರತಕ್ಕ ಡೈರಿಯಲ್ಲಿ ೨ಲಕ್ಷ ಲೀಟರ್ ಕೆಪಾಸಿಟಿ ಹೆಚ್ಚಿಸುವುದಕ್ಕೆ ಪ್ರಾಜೆಕ್ಟ್ ರಿಪೋರ್ಟ್ ಒಂದು ವಾರದಲ್ಲಿ ಬರುತ್ತಾ ಇದೆ. ಅದು ಬಂದ ಮೇಲೆ ಅದರ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ. ರೀಜನಲ್ ಮಿಲ್ಕ್ ಟೆಸ್ಟಿಂಗ್ ಲ್ಯಾಬೊರೇಟರೀಸ್‌ನಲ್ಲಿ ಅವುಗಳನ್ನು ಟೆಸ್ಟ್ ಮಾಡಿ ಕೊಡತಕ್ಕ ಕಾರ್ಯವೂ ಸಹ ವೇಗದಲ್ಲಿ ನಡೆಯುತ್ತಾ ಇದೆ. ೧೯೭೬-೭೭ರಲ್ಲಿ ಬೆಂಗಳೂರು ಮತ್ತು ಮೈಸೂರು ಡೈರಿಯನ್ನು ಎಕ್ಸ್‌ಪ್ಯಾನ್‌ಷನ್ ಮಾಡುತ್ತೇವೆ. Establishment of Regional Diagnostic Laboratories ಇದನ್ನು ಸಹ ಮಾಡುತ್ತೇವೆ, ಮಿಲ್ಕ್ ಪ್ರೊಡ್ಯೂಸರ್ಸ್ ಯೂನಿಯನ್‌ಗಳನ್ನು ೪ ಏರಿಯಾಗಳಲ್ಲಿ ಮಾಡುತ್ತೇವೆ ಮುಂದಿನ ವರ್ಷದಲ್ಲಿ ೩೬೦ ಸೊಸೈಟಿಗಳನ್ನು ಮಾಡುತ್ತೇವೆ. ಬೆಂಗಳೂರು ಕ್ಯಾಟಲ್ ಮಾರ್ಕೆಟ್ ಮತ್ತು ಮಾಡ್ರನ್ ಸ್ಲಾಟರ್ ಹೌಸ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕಾಗಿ ಕೋರಮಂಗಲ ಪ್ರದೇಶದಲ್ಲಿ ೧೫೦ ಎಕರೆಯನ್ನು ಪಡೆದಿದ್ದೇವೆ ಇದರ ಬಗ್ಗೆ ಟೆಕ್ನಿಕಲ್ ಫೀಸಿಬಿಲಿಟಿ ರಿಪೋರ್ಟನ್ನು ಮಾಡುತ್ತಾ ಇದ್ದಾರೆ. ಕ್ಯಾಟಲ್ ಮಾರ್ಕೆಟನ್ನು ಸೂಳೆ ಪ್ರದೇಶದಲ್ಲಿ ಮಾಡುತ್ತೇನೆ. ಕಂಟೋನ್‌ಮೆಂಟ್ ಕಾರ್ಪೊರೇಷನ್ ಏರಿಯಾದಲ್ಲಿ ಮತ್ತು ಸಿಟಿ ಮಾರ್ಕೆಟ್ ಪ್ರದೇಶದಲ್ಲಿ ಸ್ಲಾಟರ್ ಹೌಸ್ ಮಾಡತಕ್ಕ ಕಾರ್ಯವನ್ನು ಬೆಂಗಳೂರು ಅನಿಮಲ್ ಫುಡ್ ಕಾರ್ಪೊರೇಷನ್‌ನವರು ವೇಗದಲ್ಲಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಇಷ್ಟನ್ನು ಹೇಳುತ್ತಾ, ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಈ ಎರಡೂ ಇಲಾಖೆಗಳು ಮಾಡಿರತಕ್ಕ ಕೆಲಸ ಮತ್ತು ಪ್ರಗತಿ ಮತ್ತು ಮುಂದೆ ಮಾಡತಕ್ಕ ಕೆಲಸಗಳ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಈ ಬೇಡಿಕೆಗಳಿಗೆ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕು ಎಂದು ಅಧ್ಯಕ್ಷರ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ತಾವು ಆನ್ಯುಯಲ್ ರಿಪೋರ್ಟನಲ್ಲಿ ಫೈನಾನ್ಸ್ ಪ್ರಾವಿಷನ್ ೧೯೭೩-೭೪ರ ಒಂದು ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದೀರಿ ಅದರಲ್ಲಿ ಪ್ರಾವಿಷನ್ ೧,೧೭೬.೧೫೭ ಎಕ್ಸ್‌ಪೆಂಡೀಚರ್ ೭೬೮.೮೮೨. ೧೯೭೪-೭೫ರಲ್ಲಿ ಪ್ರಾವಿಷನ್ ೧,೨೦೮.೫೫, ಎಕ್ಸ್‌ಪೆಂಡೀಚರ್

೧,೦೬೭-೦೦, ಇದೆ, ಅದೇ ರೀತಿ ೧೯೭೫-೭೬ರಲ್ಲಿ ಪ್ರಾವಿಷನ್ ೧,೨೭೫-೭೦, ಎಕ್ಸ್‌ಪೆಂಡೀಚರ್ ೭೮೬-೪೨ ಲಕ್ಷ ರೂಪಾಯಿಗಳು, ಎಲ್ಲಾ ವರ್ಷಗಳಲ್ಲಿಯೂ ವೆಚ್ಚ ಮಾತ್ರ ಕಡಿಮೆಯಾಗಿದೆ ಆಯಾ ವರ್ಷದಲ್ಲಿ ಪ್ರೊವೈಡ್ ಮಾಡಿದಂಥ ಎಲ್ಲಾ ಹಣವನ್ನು ಖರ್ಚು ಮಾಡತಕ್ಕಂಥ ಶಕ್ತಿ ಇಲಾಖೆಗೆ ಇಲ್ಲವೇ ? ಇದರ ಬಗ್ಗೆ ವಿವರಗಳನ್ನು ಮಾತ್ರ ಕೊಟ್ಟಿಲ್ಲ ೧೯೭೩ರಿಂದ ಇಲ್ಲಿಯವರೆಗೆ ಪ್ರೊವೈಡ್ ಮಾಡಿದಂಥ ಹಣವನ್ನು ಪೂರಾ ಖರ್ಚು ಮಾಡಲಿಲ್ಲದ್ದಕ್ಕೆ ಕಾರಣವೇನು ?

ಶ್ರೀ ಎನ್. ಚಿಕ್ಕೇಗೌಡ.—ಇದರಲ್ಲಿ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ಸ್, ಪ್ಲಾನ್ ಸ್ಕೀಂಸ್ ಎಲ್ಲಾ ಸೇರಿಕೊಂಡಿವೆ. ಮತ್ತು ೯ ತಿಂಗಳ ಲೆಕ್ಕವನ್ನು ಮಾತ್ರ ನಾವು ತೆಗೆದುಕೊಂಡಿದ್ದೇವೆ ಆಕ್ಚುಯಲಿ ಪ್ರೊವೈಡ್ ಮಾಡಿದಂಥ ಹಣ ಲ್ಯಾಪ್ಸ್ ಆಗಿಲ್ಲ. ಆಕ್ಚುಯಲಿ ಪ್ಲಾನ್ಸ್ ಸ್ಕೀಂನಲ್ಲಿ ಏನು ಹಣವನ್ನು ಒದಗಿಸಿದ್ದೇವೆ ಅದನ್ನು ಖರ್ಚು ಮಾಡದೆ ಲ್ಯಾಪ್ಸ್ ಮಾಡಿಲ್ಲ ಎನ್ನುವುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಕೆ. ಟಿ. ರಾಥೋಡ್ (ಮೀನುಗಾರಿಕೆ ಮತ್ತು ತೋಟಗಾರಿಕೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇಂದು ತೋಟಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಯ ಬೇಡಿಕೆಗಳನ್ನು ಕುರಿತು ಸದನದಲ್ಲಿ ಮಾನ್ಯ ಸದಸ್ಯರನೇಕರು ಮಾತನಾಡಿ ಕೆಲವು ಸಲಹಸೂಚನೆಗಳನ್ನು ಕೊಟ್ಟಿದ್ದಾರೆ, ಶ್ರೀಮತಿ ಫರ್ನಾಂಡಿಸ್ ಒಬ್ಬರು ಮಾತ್ರ ಸೂಕ್ಷ್ಮವಾಗಿ ಒಂದೆರಡು ಟೀಕೆಗಳನ್ನು ಕೂಡ ಮಾಡಿದ್ದಾರೆ. ಅವರ ಸಂದೇಹಕ್ಕೆ ಉತ್ತರ ಕೊಡುವುದಕ್ಕೆ ಮೊದಲು ತೋಟಗಾರಿಕೆ ಇಲಾಖೆಯು ಕಳೆದಹಲವಾರು ವರ್ಷಗಳಿಂದ ಸಾಧಿಸಿದ ಪ್ರಗತಿಯನ್ನು ಕುರಿತು ಕೆಲವೊಂದು ವಿವರಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಬೇರೆ ಬೇರೆ ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಗಳು ಸಾಧಿಸಿರುವ ಪ್ರಗತಿ ಮತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಇಲಾಖೆ ಸಾಧಿಸಿದ ಪ್ರಗತಿಯನ್ನು ನಾವು ತುಲನೆಮಾಡಿದಾಗ, ನಮ್ಮ ಇಲಾಖೆ ಬಹಳ ಸುವ್ಯವಸ್ಥಿತವಾದ ಪ್ರಗತಿಯನ್ನು ಸಾಧಿಸಿದೆ ಎನ್ನುವುದಕ್ಕೆ ನಾವೆಲ್ಲರೂ ಹೆಮ್ಮೆ ಪಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ಎಲ್ಲಾ ರಾಜ್ಯದಲ್ಲಿ ಪ್ರತ್ಯೇಕವಾದಂಥ ತೋಟಗಾರಿಕೆ ಇಲಾಖೆ ಇಲ್ಲ. ಆದರೆ ಕರ್ನಾಟಕದಲ್ಲಿ ತೋಟಗಾರಿಕೆ ಇಲಾಖೆ ಒಂದು ಪ್ರಮುಖವಾದಂಥ ಇಲಾಖೆಯಾಗಿದೆ ಮತ್ತು ಅನೇಕ ಯೋಜನೆಗಳನ್ನು ಅಳವಡಿಸಿಕೊಂಡು ಪ್ರಗತಿಯನ್ನು ಸಾಧಿಸಿದೆ ಎನ್ನುವುದನ್ನು ಕರ್ನಾಟಕ ಜನತೆ ಮನವರಿಕೆಮಾಡಿಕೊಂಡಿದೆ. ಈ ಇಲಾಖೆಯು ಕಳೆದ ನಾಲ್ಕೈದು ವರ್ಷಗಳಿಂದ ಖರ್ಚು ಮಾಡಿದಂಥ ಬಡ್ಜೆಟ್ಟಿನ ವಿವರವನ್ನು ಕೊಟ್ಟರೆ ಇಲಾಖೆಯು ಸಾಧಿಸಿದಪ್ರಗತಿಯ ಕಲ್ಪನೆ ಮಾನ್ಯ ಸದಸ್ಯರಿಗೆ ಬರಬಹುದು. ೧೯೭೨-೭೩ರ ಬಜೆಟ್ಟಿನಲ್ಲಿ ಪ್ರಾವಿಷನ್ ೧.೮೪ ಲಕ್ಷ ರೂಪಾಯಿಗಳಷ್ಟು ಇದ್ದರೂ ೧.೮೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ೧೯೭೨-೭೩ರಲ್ಲಿ ೧.೮೫ ಲಕ್ಷ ರೂಪಾಯಿಗಳ ಪ್ರಾವಿಷನ್‌ಗೆ ೧.೮೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಹಾಗೆಯೇ ೧೯೭೪-೭೫ರಲ್ಲಿ ೨೭೭.೨೨ ಲಕ್ಷ ರೂಪಾಯಿಗಳಲ್ಲಿ ೨೩೪.೯೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ೧೯೭೫-೭೬ರಲ್ಲಿ ೨೫೦ ೫೬ ಲಕ್ಷ ರೂಪಾಯಿಗಳಲ್ಲಿ ಡಿಸೆಂಬರ್‌ವರೆಗೆ ೭೬.೮೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಈ ವರ್ಷದ ಬಡ್ಜೆಟ್ ಅಂದರೆ ೧೯೭೬-೭೭ನೇ ಸಾಲಿನ ಬಡ್ಜೆಟ್‌ನಲ್ಲಿ ೨೯೬.೫೯ ಲಕ್ಷ ರೂಪಾಯಿಗಳಷ್ಟು ಒದಗಿಸಲಾಗಿದೆ. ಇಲಾಖೆಯಲ್ಲಿ ಅನೇಕ ವಿಶೇಷವಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹಣದ ವ್ಯವಸ್ಥೆ ಪೂರ್ತಿಯಾಗಿರದಿದ್ದರೂ ಕೂಡ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ, ಇನ್ನೂ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ ಇತ್ತೀಚೆಗೆ ಪ್ರಧಾನಿಯವರ ೨೦ ಅಂಶಗಳ ಕಾರ್ಯಕ್ರಮದಪ್ರಕಾರ, ಅನೇಕ ಕಾರ್ಯಕ್ರಮಗಳನ್ನು ದೇಶದಾದ್ಯಂತ ಕಾರ್ಯರೂಪಕ್ಕೆ ತರುತ್ತಿರುವಾಗ ಇದೇ ಒಂದು ಹಿನ್ನೆಲೆಯಲ್ಲಿ ತೋಟಗಾರಿಕೆ ಇಲಾಖೆಯೂ ಕೂಡ ಒಂದೆರಡು ವಿಶೇಷವಾದ ಕಾರ್ಯಕ್ರಮಗಳನ್ನು ಕೈಗೊಂಡಿದೆ ಮೊದಲನೆಯದಾಗಿ, ಫೀಲ್ ಸ್ಕೀಂ, ಟ್ರೈಬಲ್ ಏರಿಯಾಸ್‌ದಲ್ಲಿ ೨೦ ಅಂಶಗಳ ಕಾರ್ಯಕ್ರಮದ ಕೆಳಗೆ ಸುಮಾರು ೩೨ ಬ್ಯಾಕ್‌ವರ್ಡ್ ಟ್ರೈಬ್ಸ್ ಕುಟುಂಬಗಳಿಗೆ ಉಪಯೋಗವಾಗುವ ರೀತಿಯಲ್ಲಿ ಎರಡೂವರೆ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಸ್ಕೀಮನ್ನು ಅಳವಡಿಸಿಕೊಂಡು ೫ ವರ್ಷಗಳ ಅವಧಿಯಲ್ಲಿ ಕಾರ್ಯರೂಪಕ್ಕೆ ಬರುವಂತೆ ಮಾಡಿದ್ದೇವೆ. ಎರಡನೆಯ ಕಾರ್ಯಕ್ರಮ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಈ ವೀಕರ್‌ಸೆಕ್ಷನ್ಸ್ ಏನು ಇದ್ದಾರೆ, ಇವರ ೧೦೦ ಕುಟುಂಬಗಳನ್ನು ಆರಿಸಿಕೊಂಡು ಒಂದೊಂದು ಕುಟುಂಬಕ್ಕೂ ಸುಮಾರು ೫೦ ರೂಪಾಯಿಗಳ ಬೆಲೆಯಷ್ಟು ಹಣ್ಣಿನ ಸಸಿಗಳನ್ನು ಪುಕ್ಕಟೆಯಾಗಿ ಕೊಡುವ ಒಂದು ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವು ಈಗಾಗಲೇ ವಿಚಾರ ವಿನಿಮಯ ಮಾಡಿದ್ದೇವೆ. ಈ ವರ್ಷ ಈ ಉದ್ದೇಶಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವವರಿದ್ದೇವೆ. ಈ ಎರಡು ಯೋಜನೆಗಳು ಕೆಳಗೆ ದುರ್ಬಲ ವರ್ಗ

ದವರಿಗೆ ಸಹಾಯಕವಾಗುವಂತಹ ಕಾರ್ಯಕ್ರಮವನ್ನು ನಾವು ಅಳವಡಿಸಿಕೊಂಡಿದ್ದೇವೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಈಗಾಗಲೇ ನಾವು ಸುಮಾರು ೪೭,೨೭೬ ಬೀಜದ ಸಸಿಗಳನ್ನು ಪುಕ್ಕಟೆಯಾಗಿ ಕೊಟ್ಟಿದ್ದೇವೆ ಸುಮಾರು ೨೫ ಕೆ.ಜಿ.ಯಷ್ಟು ತರಕಾರಿ ಬೀಜಗಳನ್ನು ವಿತರಣೆ ಮಾಡಿದ್ದೇವೆ. ಇದರಲ್ಲಿ ಸುಮಾರು ೨೦% ಅಷ್ಟು ಸಸಿಗಳನ್ನು ದುರ್ಬಲ ವರ್ಗದವರಿಗೇ ಪುಕ್ಕಟೆಯಾಗಿ ದೊರಕುವಂತೆ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ ಇವತ್ತು ನಮ್ಮ ಬೇರೆ ಬೇರೆ ಯೋಜನೆಗಳಲ್ಲಿ ಲಭ್ಯವಾಗುವಂಥ ಹಣವನ್ನು ೧೦ ಅಂಶಗಳ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡು ಒಂದು ಹತ್ತು ಅಂಶದ ಕಾರ್ಯಕ್ರಮವನ್ನು ಸಿದ್ಧಪಡಿಸಿ ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದೇವೆ ಹತ್ತು ಅಂಶದ ಕಾರ್ಯಕ್ರಮ ಎಂದರೆ, ಒಂದನೆಯದು, ತರಕಾರಿ ಮತ್ತು ಹಣ್ಣಿನ ಬೀಜಗಳನ್ನು ದುರ್ಬಲವರ್ಗದವರಿಗೆ ಉಚಿತವಾಗಿ ಕೊಡುವುದು, ಎರಡನೆಯದು, ಡಿಪಿಎಪಿ ಜಿಲ್ಲೆಗಳೆಂದು ಸರಿರಣೆಕವಾಗಿರುವ ೧೧ ಜಿಲ್ಲೆಗಳಲ್ಲಿ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ದುರ್ಬಲ ವರ್ಗದವರಿಗೇ ಪ್ರಾತಿನಿಧ್ಯ ಕೊಡುವುದು ಮೂರನೆಯದಾಗಿ, ಪೋಷ್ಟಿಕ ಆಹಾರ ಯೋಜನೆಯ ಪ್ರಕಾರ ಹರಿಜನ ಗಿರಿಜನ ಮೊದಲಾದ ದುರ್ಬಲ ವರ್ಗದವರ ಕಾಲೋನಿಗಳಲ್ಲಿ ತರಕಾರಿ ತೋಟಗಳನ್ನು, ಜಾಗ್ರತೆ ಫಲ ಕೊಡುವ ಹಣ್ಣಿನ ಗಿಡಗಳನ್ನೂ ಕೈತೋಟಗಳಲ್ಲಿ ಬೆಳೆಸುವಂತೆ ಪ್ರೋತ್ಸಾಹಿಸುವುದು. ನಾಲ್ಕನೆಯದಾಗಿ, ತೋಟಗಾರಿಕಾ ಇಲಾಖೆಯ ತರಬೇತಿ ಕೇಂದ್ರಗಳಲ್ಲಿ ಹರಿಜನ ಗಿರಿಜನ ಹಾಗೂ ಇತರ ದುರ್ಬಲ ವರ್ಗದವರ ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ದೊರಕಿಸುವುದು ; ಐದನೆಯದಾಗಿ, ಸಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಕೃಷಿಪುನರ್ಧನ ಸಂಸ್ಥೆಯಿಂದ ತೆಂಗು, ದ್ರಾಕ್ಷಿ, ಅನಾನಸ್ ಮತ್ತು ಮಿಶ್ರಹಣ್ಣಿನ ಬೆಳೆಗಳ ಬೇಸಾಯಕ್ಕಾಗಿ ದೀರ್ಘಾವಧಿ, ಮಧ್ಯಮಾವಧಿ ಸಾಲ ಸೌಲಭ್ಯಗಳನ್ನು ಒದಗಿಸುವುದು. ಆರನೆಯದಾಗಿ ಜನತಾ ಗೃಹಗಳಿಗೆ ಪ್ರತಿ ಮನೆಗೂ ಎರಡು ತೆಂಗಿನ ಸಸಿ ಮತ್ತು ಎರಡು ಹಣ್ಣಿನ ಗಿಡಗಳನ್ನು ಉಚಿತವಾಗಿ ಹಂಚುವುದು. ಏಳನೆಯದಾಗಿ, ಇಲಾಖೆಯಲ್ಲಿರುವ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವಾಗ ಹರಿಜನ ಮತ್ತು ಗಿರಿಜನ ವರ್ಗದವರಿಗೆ ಆದ್ಯತೆ ನೀಡಲಾಗುವುದು. ಎಂಟನೆಯದಾಗಿ, ತೋಟದ ಬೆಳೆಗಳ ಸಸ್ಯ ಸಂರಕ್ಷಣೆ ಪ್ರತ್ಯಕ್ಷ ತಾಕುಗಳನ್ನು ದುರ್ಬಲ ವರ್ಗದವರ ಜಮೀನಿನಲ್ಲಿ ತೆಗೆದುಕೊಳ್ಳಲಾಗುವುದು. ಒಂಬತ್ತನೆಯದಾಗಿ ಪೌಷ್ಟಿಕ ಆಹಾರ ಯೋಜನೆಯನ್ವಯ ಶಾಲಾ ಕೈತೋಟ ಮತ್ತು ಸಾಮೂಹಿಕ ತೋಟಗಾರಿಕೆಯನ್ನು ದುರ್ಬಲ ವರ್ಗದವರು ವಾಸಿಸುವ ಪ್ರದೇಶಗಳಲ್ಲಿ ಆರಂಭಿಸುವುದು ಮತ್ತು ಹತ್ತನೆಯದಾಗಿ, ಪೋಷಕ ಆಹಾರ ನೀಡುವ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುವ ಮಾಹಿತಿ ಮತ್ತು ಹೆಚ್ಚಾಗಿ ಉಪಯೋಗಿಸುವಂತೆ ದುರ್ಬಲ ವರ್ಗದವರು ವಾಸಿಸುವ ಪ್ರದೇಶಗಳಲ್ಲಿ ಇಲಾಖೆಯ ಸಿಬ್ಬಂದಿಯವರಿಂದ ಪ್ರಚಾರ ಕಾರ್ಯಯುದ ಕೈಗೊಳ್ಳುವುದು —ಈ ರೀತಿಯಾಗಿ ೧೦ ಅಂಶಗಳ ಕಾರ್ಯಕ್ರಮವನ್ನು ಈಗ ಈ ತೋಟಗಾರಿಕೆ ಇಲಾಖೆಯು ವಿಶೇಷ ಗಮನಕೊಟ್ಟು ಅನೇಕ ಕಾರ್ಯಕ್ರಮಗಳನ್ನು ಅವಲಂಬಿಸಿಕೊಂಡಿದೆ.

ತೋಟಗಾರಿಕೆ ಇಲಾಖೆಯು ಇನ್ನೊಂದು ವಿಶೇಷ ಕಾರ್ಯಕ್ರಮವೆಂದರೆ ಪ್ರತಿ ತಾಲ್ಲೂಕಿಗೂ ಒಂದು ನರ್ಸರಿ ಮತ್ತು ಮಲ್ಟಿಪರ್ಪಸ್ ಫಾರಂ ಮಾಡುವುದು. ಇದರಪ್ರಕಾರ ಈಗಾಗಲೇ ಸುಮಾರು ೩೫೭ ಫಾರಂಗಳನ್ನು ತೋಟಗಾರಿಕೆ ಇಲಾಖೆಯವರು ಪ್ರಾರಂಭಮಾಡಿದ್ದಾರೆ. ಅದರಲ್ಲಿ ೮ ಸಾವಿರ ಎಕರೆಗಳಷ್ಟು ಜಮೀನನ್ನು ತೋಟದ ಬೆಳೆಗಳನ್ನು ಬೆಳೆಸುವುದಕ್ಕೆ ಪಡೆದು ಅಲ್ಲಿ ಈಗಾಗಲೇ ಆ ಯೋಜನೆಯನ್ನು ಪ್ರಾರಂಭಮಾಡಿದ್ದಾರೆ. ಇದರಲ್ಲಿ ಕೇವಲ ೨೭ ಫಾರಂಗಳು ಮಾತ್ರ ಸರ್ಕಾರದ ಮಂಜೂರಾತಿ ಪಡೆದಿವೆ. ಉಳಿದ ಫಾರಂಗಳಿಗೆ ನಾವು ಬೇರೆಬೇರೆ ಯೋಜನೆಗಳಿಂದ ಹಣವನ್ನು ಉಪಯೋಗಿಸಿಕೊಂಡು ಫಾರಂಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆ. ಆದರೆ ಇಲಾಖೆಯವರ ಈಗಿರುವ ಒಂದು ವ್ಯವಸ್ಥೆಯಿಂದ ನಮ್ಮ ಫಾರಂಗಳೇ ಆಗಲೀ ನರ್ಸರಿ ಆಗಲೀ ಇರುವುದಕ್ಕೂ ಮತ್ತು ಅಲ್ಲಿ ಸುವ್ಯವಸ್ಥಿತವಾಗಿ ಬೆಳೆ ಬೆಳೆಯುವುದಕ್ಕೂ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಇದೆಲ್ಲವನ್ನೂ ಸುವ್ಯವಸ್ಥಿತವಾಗಿಡುವುದಕ್ಕೆ ವಿಶೇಷವಾದಂಥ ಒಂದು ಬಡ್ಜೆಟ್ ಪ್ರಾವಿಷನ್ ಕೊಡುವ ಅಗತ್ಯವಿರುವುದರಿಂದ ಅರ್ಥ ಶಾಖೆಯವರಿಗೆ ಈಬಗ್ಗೆ ಬೇಡಿಕೆಯನ್ನು ಈಗಾಗಲೇ ಕೊಟ್ಟಿದ್ದೇವೆ. ಹಣ ದೊರೆತಮೇಲೆ ಈ ಫಾರಮ್‌ಗಳನ್ನು ಕೂಡ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸುತ್ತೇವೆ. ನಾನು ಕಳೆದ ಸಲ ಈ ಸದನದಲ್ಲಿ ಒಂದು ವಿಷಯವನ್ನು ತಿಳಿಸಿದ್ದೆ ಯಾವ್ಯಾವ ತಾಲ್ಲೂಕಿನಲ್ಲಿ ಫಾರಂಗಳು ಇಲ್ಲವೋ ಅಲ್ಲೆಲಾ ಒಂದೊಂದು ಫಾರಂಗಳನ್ನು ಪ್ರಾರಂಭಮಾಡುತ್ತೇವೆಂದು ಹೇಳಿದ್ದೆ, ಕಳೆದ ವರ್ಷ ೧೪ ಫಾರಂಗಳನ್ನು ಪ್ರಾರಂಭ ಮಾಡಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಭಟ್ಕಳ್, ಜೆಲ್ಕೆ, ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ, ಮುಂಡಗೋಡ್ ತಾಲ್ಲೂಕುಗಳಲ್ಲೂ ದಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ಕಾರ್ಜಗಿ ಗ್ರಾಮದಲ್ಲಿ,

ರಾಣೆಬೆನ್ನೂರಿನ ಚೌದಂಡಯಾನಪುರದಲ್ಲಿ, ಹುಬ್ಬಳ್ಳಿ ತಾಲ್ಲೂಕಿನ ಬೆಂಗೇರಿಯಲ್ಲೂ, ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕುಪ್ಪನಹಳ್ಳಿಯಲ್ಲೂ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಸಕ್ಕರೆಪಟ್ಟಣದಲ್ಲಿ, ಕಲ್ಘಟ್ಗಿ ತಾಲ್ಲೂಕಿನ ದಾಸ್ತಿಕೊಪ್ಪದಲ್ಲಿ ನರಗುಂದ್ ತಾಲ್ಲೂಕಿನ ಕೊಲ್ಲಾರಿನಲ್ಲೂ, ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲ್ಲೂಕಿನ ಶಿವಪೇಟೆಯಲ್ಲೂ, ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಬಿನಿಯಲ್ಲೂ ಮತ್ತು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ [illegible]ರ್‌ನಲ್ಲಿ-ಹೀಗೆ ೧೪ ಹೊಸ ಫಾರ್ಮುಗಳನ್ನು ಪ್ರಾರಂಭಮಾಡಲಾಗಿದೆ. ಇದಲ್ಲದೆ ಇನ್ನೂ ಕೆಲವು ವಿಶೇಷ ಯೋಜನೆಗಳನ್ನೂ ಕೂಡ ಇಲಾಖೆಯವರು ಅಳವಡಿಸಿಕೊಂಡಿದ್ದಾರೆ. ಅದರಲ್ಲಿ ಈಗ ಪಶ್ಚಿಮಘಟ್ಟದ ಕಡೆಗಳಲ್ಲಿ ಇಂಟೆಗ್ರೇಟೆಡ್ ಡೆವಲಪ್‌ಮೆಂಟ್ ಎಂಬುದಾಗಿ ಅನೇಕ ಕಾರ್ಯಕ್ರಮಗಳನ್ನು ಪ್ರಾರಂಭಮಾಡಿ ಅದಕ್ಕಾಗಿ ೧೦-೧೦ ಎಕರೆಗಳಷ್ಟು ಭೂಮಿಯನ್ನು ಪಡೆದು ಒಂದು ವಿಶೇಷ ಕಾರ್ಯಕ್ರಮವನ್ನು ೫ ಕಡೆಗಳಲ್ಲಿ ಪ್ರಾರಂಭಮಾಡಿದ್ದೇವೆ. ಮೊದಲನೆಯ ಕಾರ್ಯಕ್ರಮ ನುಗು ಜಲಾಶಯದ ಹತ್ತಿರ, ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ಹತ್ತಿರ ಮಲಪ್ರಭಾ ಹತ್ತಿರ ಕೊಡಗು ಜಿಲ್ಲೆಯ ಗಂಗನಕೊಪ್ಪಳ, ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕ್ ಹತ್ತಿರ-ಹೀಗೆ ಕೆಲವಾರು ಸ್ಥಳಗಳಲ್ಲಿ ಈ ಯೋಜನೆಗಳನ್ನು ಪ್ರಾರಂಭಮಾಡಿದ್ದೇವೆ. ಒಂದು ಲಕ್ಷ ೭೫ ಸಾವಿರ ರೂಪಾಯಿಗಳನ್ನು ಕಳೆದ ವರ್ಷ ಈ ಒಂದು ಕಾರ್ಯಕ್ರಮದಲ್ಲಿ ತೊಡಗಿಸಿ ಖರ್ಚುಮಾಡಿದ್ದೇವೆ. ಅದೇ ರೀತಿಯಲ್ಲಿ ಬಿಜಾಪುರ್ ಜಿಲ್ಲೆಯಲ್ಲೂ ಮತ್ತು ಇನ್ನೂ ಇತರ ೧೦ ಜಿಲ್ಲೆಗಳಲ್ಲಿಯೂ ಕಾರ್ಯಕ್ರಮಗಳನು ಹಾಕಿಕೊಂಡಿದ್ದೇವೆ ಇಂಥ ೪ ಕಾರ್ಯಕ್ರಮಗಳಲ್ಲಿ ಈಗಾಗಲೇ ಎರಡನ್ನು ಪ್ರಯತ್ನಮಾಡಿದ್ದೇವೆ. ಅಲ್ಲಿ ಕೆಲಸಕಾರ್ಯಗಳು ನಡೆಯುತ್ತಾ ಇವೆ. ರಾಯಚೂರಿನಲ್ಲಿ ಎರಡು ಇಂಟೆನ್ಸೀವ್ ಟ್ರೈನಿಂಗ್ ಎಂಬುದಾಗಿ ಹೊಸ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಅಲ್ಲಿ ನರ್ಸರಿ ಆಕ್ಟಿವಿಟೀಸ್ ಚೆನ್ನಾಗಿ ನಡೆಯುತ್ತಿವೆ. ಟ್ರೈನಿಂಗ್ ಫಾರಮ್ಸ್‌ಗಳಲ್ಲಿ ಫೀಲ್ಡ್ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕಮಾಡಿದ್ದೇವೆ. ಅಲ್ಲಿ ನಾನಾ ರೀತಿಯಲ್ಲಿ ಹೊಸಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ವಿಶೇಷ ಯೋಜನೆಗಳನ್ನೂ ಸಹ ಅಳವಡಿಸಿಕೊಂಡಿದ್ದಾರೆ, ಅಲ್ಲದೆ ಅಲ್ಲಿ ನರ್ಸರಿ ಆಕ್ಟಿವಿಟೀಸ್‌ಗಾಗಿ ೨ ಲಕ್ಷ ೯೯ ಸಾವಿರದ ೫೧ ರೂಪಾಯಿಗಳನ್ನು ಬೇರೆಬೇರೆ ಕಡೆಗೆ ಒದಗಿಸಿ ಕೊಟ್ಟಿದ್ದೇವೆ. ಈ ಸ್ಥಳಗಳಲ್ಲಿ ತರಕಾರಿಗಳನ್ನು ಬೆಳೆಸುವುದನ್ನು ಪ್ರೋತ್ಸಾಹಿಸಲು ತರಕಾರಿ ಬೀಜಗಳನ್ನು ೧,೮೪,೧೫೦ ಜನರಿಗೆ ಕೊಟ್ಟಿದ್ದೇವೆ. ಇನ್ನೂ ಅನೇಕರಿಗೆ ಹಣ್ಣಿನ ಗಿಡಗಳನ್ನೂ ಮತ್ತು ಸಸಿಗಳನ್ನೂ ಹಂಚಲಾಗಿದೆ ಈ ಇಲಾಖೆಯಲ್ಲಿ ಟ್ರೈನಿಂಗ್ ಪ್ರೋಗ್ರಾಂ ಕೂಡ ಇದೆ. ಇದು ಒಂದು ವಿಶೇಷವಾದಂಥ ಪ್ರೋಗ್ರಾಂ. ಪ್ರತಿ ತಿಂಗಳೂ ಪ್ರತಿಯೊಬ್ಬ ಟ್ರೈನಿಂಗೂ ೧೦೦ ರೂಪಾಯಿಗಳಂತೆ ಕೊಟ್ಟು ಸುಮಾರು ಒಂದು ಸಾವಿರ ಟ್ರೈನಿಂಗ್ ಉಮೇದುವಾರರಿಗೆ ತರಬೇತಿ ಕೊಡುವ ಯೋಜನೆಯನ್ನೂ ಸಹ ಮಾಡಿದ್ದೇವೆ. ಇದು ಈಗಾಗಲೇ ಕಾರ್ಯರೂಪದಲ್ಲಿದೆ ನಾನು ಈ ಇಲಾಖೆಯನ್ನು ವಹಿಸಿಕೊಂಡಮೇಲೆ ಅನೇಕ ಹೊಸ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಪ್ರತಿವರ್ಷದಲ್ಲಿಯೂ ಬೇರೆ ಬೇರೆ ಹಣ್ಣು ಮತ್ತು ತರಕಾರಿ ಬೆಳೆಯುವ ಪ್ರದೇಶಗಳು ಎಲ್ಲೆಲ್ಲಿವೆಯೋ ಅಲ್ಲಲ್ಲಿ ಅವುಗಳನು ಬೆಳೆಯುವುದಕ್ಕೆ ಅವಶ್ಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆ ಈ ಕಾರ್ಯಕ್ರಮ ಈಗ ಭದ್ರಾ ಪ್ರಾಜೆಕ್ಟ್‌ನಲ್ಲಿಯೂ ಇದೆ ಶಿವಮೊಗ್ಗಾ ಜಿಲ್ಲೆಯಲ್ಲಿ ೧೦ ಸೆಂಟರ್‌ಗಳನ್ನು ಈ ಯೋಜನೆಯ ಕೆಳಗೆ ತರಲಾಗಿದೆ ಚಿತ್ರದುರ್ಗದಲ್ಲಿ ೩೦ ಡಿಮಾನ್‌ಸ್ಟ್ರೇಷನ್ ಸೆಂಟರ್‌ಗಳನ್ನು ಹಾಗೂ ಫಾರಂಗಳನ್ನೂ ಹರಿಹರ ತಾಲ್ಲೂಕಿನಲ್ಲಿ ತೆಗೆದುಕೊಳ್ಳಲಾಗಿದೆ.

ಕಾವೇರಿಬೇಸಿನ್‌ನಲ್ಲಿಯೂ ಕೂಡ ಈ ಕಾರ್ಯಕ್ರಮ ಜಾರಿಯಲ್ಲಿದೆ ಹಾಗೆಯೇ ಬಿಜಾಪುರ ಜಿಲ್ಲೆಯಲ್ಲಿ ಡಿ.ಪಿ.ಎ.ಪಿ ಪ್ರೋಗ್ರಾಮ್ ಕೆಳಗೆ ಬಹಳ ವಿಶೇಷವಾದ ರೀತಿಯಲ್ಲಿ ಈ ಯೋಜನೆಯು ನಡೆಯುತ್ತಿದೆ. ನಮ್ಮ ಇಲಾಖೆಯ ಕಾರ್ಯಕ್ರಮಗಳಿಗೆ ಅಗ್ರಿಕಲ್ಚರ್ ರಿಫೈನಾನ್ಸ್ ಸ್ಕೀಮ್ ಕೆಳಗೂ ಸಹಾ ಸಹಾಯ ಧನ ಸಿಕ್ಕುತ್ತಾ ಇದೆ. ತೆಂಗಿನಕಾಯಿ ದ್ರಾಕ್ಷಿ, ಕಿತ್ತಳೆ, ಬಾಳೆ ಮುಂತಾದ ಹಣ್ಣುಗಳನ್ನು ಬೆಳೆಯಲು ಸುಮಾರು ಒಂಬತ್ತು ಕೋಟಿ ಎಪ್ಪತ್ತಮೂರುಲಕ್ಷ ರೂಪಾಯಿನ ಸ್ಕೀಮ್ ಒಂದನ್ನು ಅಳವಡಿಸಿಕೊಂಡಿದ್ದೇವೆ. ಇದರಲ್ಲಿ ೨೦ ಕೋಟಿ ರೂಪಾಯಿಗಳಷ್ಟು ಎಆರ್‌ಸಿ ಕೆಳಗೆ ನಮಗೆ ಸಹಾಯಧನ ಸಿಕ್ಕುವ ಆಶೆ ಇದೆ ಎಆರ್‌ಸಿ ಕೆಳಗೆ ನಮಗೆ ಇನ್ನೂ ಹೆಚ್ಚು ಹೆಚ್ಚು ಬೇರೆ ಬೇರೆ ಬೆಳೆಗಳಿಗೆ ಸಹಾಯಧನಸಿಗುವಂಥಾ ಯೋಜನೆಯೂ ಇದೆ. ಕ್ಯಾಷು ಮತ್ತು ಕೊ ಕೋನೆಟ್ ಡೆವಲಪ್‌ಮೆಂಟ್ ಗೋಸ್ಕರ ವಿಶೇಷವಾದ ಕಾರ್ಯಕ್ರಮಗಳನ್ನು ನಮ್ಮ ಇಲಾಖೆಯವರು ಹಾಕಿಕೊಂಡಿದ್ದಾರೆ.

ಇದಲ್ಲದೆ ಇಲಾಖೆಯು ಮುಂದೆ ಇತರಕ್ಕಂಥ ಎರಡು ವಿಶೇಷ ಯೋಜನೆಗಳ ಬಗ್ಗೆ ಅನೇಕ ಕಡೆ ಪ್ರತಿಕೆಯಲ್ಲಿ ತಾವು ಈಗಾಗಲೇ ಓದಿರುತ್ತೀರಿ 'ಆಗ್ರೋ-ಇಂಡಸ್ಟ್ರೀಸ್ ಕಾಂಪ್ಲೆಕ್ಸ್' ಎಂದು ಒಂದು ವಿಶೇಷವಾದ ಯೋಜನೆಯನ್ನು ಕಾರ್ಯ ರೂಪಕೆ ತರಲಿದ್ದೇವೆ ೫ ಸಹಸ್ರ ಹೆಕ್ಟೇರ್‌ಗಳಷ್ಟು ಜಮೀನು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಸುತ್ತಮುತ್ತಲು ವಿಶೇಷವಾಗಿ ಬೆಳೆಯುವಂಥ ಬೇರೆ ಬೇರೆ ತರಕಾರಿ ಮತ್ತು ಹಣ್ಣು ಬೆಳೆಗಳನ್ನು ಬಿತ್ತನೆ ಮಾಡಿ ಅವುಗಳಿಂದ ಬೆಳೆಯುವ ರೈತರಿಗೂ ಮತ್ತು ಗ್ರಾಹಕರಿಗೂ ಸಹಾಯವಾಗುವಂಥ ರೀತಿಯಲ್ಲಿ ಯೋಜನೆಯೊಂದನ್ನು ಸಿದ್ಧಪಡಿಸಿದ್ದೇವೆ. ಇದಲ್ಲದೆ ದಕ್ಷಿಣಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ೫ ಸಾವಿರ ಹೆಕ್ಟೇರುಗಳಷ್ಟು ಭೂಮಿಯನ್ನು ಅಳವಡಿಸಿಕೊಂಡು ವಿಶೇಷವಾದ ಯೋಜನೆಯೊಂದನ್ನು ತೋಟಗಾರಿಕೆ ಇಲಾಖೆ ಕೈಗೊಂಡಿದೆ ಇದರ ಜೊತೆಗೆ ಸಮಗ್ರವಾದ ಒಂದು ಬೃಹತ್ ಯೋಜನೆಯನ್ನು ನಾವು ಸಿದ್ಧಪಡಿಸುತ್ತಿದ್ದೇವೆ. ವರ್ಲ್ಡ್ ಬ್ಯಾಂಕಿನ ಸಹಾಯದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಉದ್ದೇಶವಿದೆ ಯೋಜನೆಯೂ ಸಿದ್ಧವಾಗಿದೆ ಕೇಂದ್ರ ಸರಕಾರದೊಂದಿಗೆ ವಿಚಾರ ವಿನಿಮಯ ನಡೆಯುತ್ತಿದೆ. ಈ ವಿಶೇಷವಾದ ಯೋಜನೆಗೆ ಮಂಜೂರಾತಿ ಪಡೆಯಬೇಕಾಗಿದೆ ಈ ವಿಶೇಷ ಯೋಜನೆಯ ಟೋಟಲ್ ಔಟಲೇ ೫೦ ಕೋಟಿ ರೂಪಾಯಿಗಳಷ್ಟು ಇರುತ್ತದೆ. ಬೇರೆ ಬೇರೆ ಹಣ್ಣು ತರಕಾರಿಗಳ ಅಭಿವೃದ್ಧಿಗಾಗಿ ವ್ಯಾಪಕವಾದ ಕಾರ್ಯಕ್ರಮಗಳನ್ನು ಈ ಯೋಜನೆಯಲ್ಲಿ ಕೈಗೊಳ್ಳಲಾಗಿದೆ. ಮ್ಯಾಂಗೋ ಸಪೋಟ, ಗ್ರೇಪ್ ಬನಾನ ಪೈನಾಪಲ್ ಮುಂತಾದ ಹಣ್ಣುಗಳ ಅಭಿವೃದ್ಧಿಯ ಜೊತೆಗೆ ತರಕಾರಿ ಬೆಳೆಗಳನ್ನೂ ಹೂವುಗಳನ್ನೂ ವಿಶೇಷವಾಗಿ ಬೆಳೆಯುವುದಕ್ಕೆ ಈ ಯೋಜನೆಯಲ್ಲಿ ವಿಶೇಷ ವಿಶಿಷ್ಟ ಕಾರ್ಯಕ್ರಮಗಳ ವ್ಯವಸ್ಥೆ ಇದೆ. ರೈತರುಗಳೂ ಸಹಾ ನಾನಾರೀತಿಯಲ್ಲಿ ಈ ಯೋಜನೆಯಿಂದ ಸಹಾಯ ಪಡೆಯುತ್ತಾರೆ. ಮಾರ್ಜಿನಲ್ ಫಾರ್ಮರ್ಸ್‌, ಸ್ಮಾಲ್‌ಫಾರ್ಮರ್ಸ್, ಮೀಡಿಯಮ್ ಫಾರ್ಮರ್ಸ್ ಹೀಗೆ ಎಲ್ಲ ಬಗೆಯ ರೈತರಿಗೂ ಸಬ್‌ಸಿಡಿ ಸಿಗುವಂಥಾ ವಿಶೇಷ ವ್ಯವಸ್ಥೆಯೂ ಕೂಡ ಈ ಯೋಜನೆಯಲ್ಲಿ ಇರುತ್ತದೆ. ಅಗ್ರಿಕಲ್ಚರ್ ಕಾರ್ಪೊರೇಷನ್ ಹಾರ್ಟಿಕಲ್ಚರಲ್ ಕಾರ್ಪೊರೇಷನ್‌ಗೆ ಒಂದು ಅಥಾರಿಟಿಯೊಂದನ್ನು ನಿರ್ಮಾಣ ಮಾಡಿ ಅದರಕೆಳಗೆ ಈ ಎಲ್ಲಾ ವಿಶೇಷ ಕಾರ್ಯಕ್ರಮಗಳನ್ನೂ ಬೃಹತ್ ಪ್ರಮಾಣದಲ್ಲಿ ಕಾರ್ಯಗತಗೊಳಿಸುವ ಉದ್ದೇಶವನ್ನೂ ಕೂಡ ಇಟ್ಟುಕೊಂಡಿರುತ್ತೇವೆ. ಈ ಯೋಜನೆಯು ಈಗ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಯೋಜನೆ ಕಾರ್ಯಗತವಾಗುವುದರಿಂದ ತೋಟಗಾರಿಕೆ ಇಲಾಖೆಯು ಇಡೀ ರಾಜ್ಯದಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ತನ್ನ ಕಾರ್ಯವನ್ನು ಅಭಿವೃದ್ಧಿಪಡಿಸಲು ಸಾಧ್ಯತೆ ಇದೆ ಎಂದು ಹೇಳಲು ಸಂತೋಷಿಸುತ್ತೇನೆ.

ತೋಟಗಾರಿಕೆ ಇಲಾಖೆಯ ಬಗ್ಗೆ ಇಷ್ಟು ವಿಷಯವನ್ನು ಹೇಳುತ್ತಾ, ಇನ್ನುಮುಂದೆ ಮೀನುಗಾರಿಕೆ ಇಲಾಖೆಯ ಬೇಡಿಕೆಗಳನ್ನು ಕುರಿತು ಕೆಲವು ವಿಷಯಗಳನ್ನು ತಿಳಿಸಲಿಕ್ಕೆ ಅಪೇಕ್ಷೆಪಡುತ್ತೇನೆ ಮೀನುಗಾರಿಕೆ ಇಲಾಖೆಯೂ ಸಹಾ ತುಂಬಾ ಪ್ರಗತಿಯನ್ನು ಸಾಧಿಸಿದೆ. ಈ ಬಗ್ಗೆ ಈ ಸದನದ ಅನೇಕ ಮಿತ್ರರಿಗೂ ಮತ್ತು ಕರ್ನಾಟಕರಾಜ್ಯದ ಜನತೆಗೂ ಆಗಾಗ ವಿವರಗಳು ತಿಳಿಯುತ್ತಲೇ ಇರುತ್ತವೆ ಮೀನುಗಾರಿಕೆ ಇಲಾಖೆಯು ಸಾಧಿಸಿದಂಥ ಪ್ರಗತಿಯಲ್ಲಿ ಕೆಲವನ್ನು ಮಾತ್ರ ಈಗ ಪ್ರಸ್ತಾಪವಮಾಡುವುದಾದರೆ, ಮೊದಲನೆಯದಾಗಿ ಈ ಇಲಾಖೆಯು, ಒಂದು ಸಣ್ಣ ಇಲಾಖೆಯಾಗಿ ೧೯೫೬-೫೭ ರಿಂದ ಕಾರ್ಯಾರಂಭ ಮಾಡಿತು. ೨ನೇ ಪಂಚವಾರ್ಷಿಕ ಯೋಜನೆಯನಂತರ ಈ ಇಲಾಖೆಯು ಪ್ರಗತಿಯನ್ನು ಸಾಧಿಸುವುದಕ್ಕೆ ಒಂದು ವಿಶೇಷವಾದ ರೀತಿಯಲ್ಲಿ ಯೋಜನೆಗಳನ್ನು ಹಾಕಿಕೊಂಡು ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಿತು. ಇಲಾಖೆಯ ಕಾರ್ಯಕ್ರಮಗಳು ವಿಸ್ತಾರವಾಗಿಯೂ ವ್ಯಾಪಕವಾಗಿಯೂ ಅಭಿವೃದ್ಧಿಗೊಂಡಿದನ್ನು ಗಮನಿಸಿ ಈ ಇಲಾಖೆಯನ್ನು ಒಂದು ಮೇಜರ್ ಇಲಾಖೆಯನ್ನಾಗಿ ಈಗ ಪರಿವರ್ತಿಸಲಾಗಿದೆ. ಇದಾದ ಮೇಲೆ ಇಲಾಖೆಯ ಆಡಳಿತವನ್ನು ನಾನಾರೀತಿ ಸುಧಾರಣೆ ಮಾಡುತ್ತಿದ್ದೇವೆ. ಯಾವ ಯಾವ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆ ಎನ್ನುವುದನ್ನು ಹೇಳಲು ಅಪೇಕ್ಷೆಪಡುತ್ತೇನೆ, ಮೊದಲು ಪ್ರತಿಯೊಂದು ಜಿಲ್ಲೆಯಲ್ಲೂ ಆಡಳಿತವನ್ನು ನಾನ್‌ಗೆಜೆಟೆಡ್ ಅಧಿಕಾರಿಯೊಬ್ಬರು ನೋಡಿಕೊಳ್ಳುತ್ತಿದ್ದರು. ಈಗ ಪ್ರತಿಯೊಂದು ಜಿಲ್ಲೆಗೂ ಒಬ್ಬ ಅಸಿಸ್ಟೆಂಟ್ ಡೈರೆಕ್ಟರನ್ನು ನೇಮಿಸಿದ್ದೇವೆ. ದೊಡ್ಡ ದೊಡ್ಡ ಜಿಲ್ಲೆಗಳಲ್ಲಿ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ನೇಮಕಮಾಡಿ ಆಡಳಿತ ದಕ್ಷತೆಯನ್ನು ಹೆಚ್ಚಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಅಲ್ಲದೆ ಎರಡು ರೀಜನಲ್ ಡೆಪ್ಯುಟಿ ಡೈರೆಕ್ಟರುಗಳ ಹುದ್ದೆಯನ್ನು, ಮತ್ತು ಒಬ್ಬ ಜಾಯಿಂಟ್ ಡೈರೆಕ್ಟರ್ ಹುದ್ದೆಯನ್ನೂ ಕೂಡ ಕ್ರಿಯೇಟ್ ಮಾಡಿದ್ದೇವೆ. ಹೀಗೆ ಆಡಳಿತದಲ್ಲಿ ಸುವ್ಯವಸ್ಥಿತವಾದ ಪ್ರಗತಿಯನ್ನು ಸಾಧಿಸಬೇಕಾದರೆ ಅಗತ್ಯವಿರುವ ಹಂತಹಂತದಲ್ಲಿನ ತನಿಖೆ ಮತ್ತು ಮಾರ್ಗದರ್ಶನದ ಸ್ಥಾನಗಳನ್ನು ನಿರ್ಮಿಸಿ ದಕ್ಷತೆಯಿಂದ ಅಭಿವೃದ್ಧಿ ಕಾರ್ಯಗಳು ನಡೆಯುವ

ವ್ಯವಸ್ಥೆಯನ್ನು ಈ ಎರಡು ಮೂರು ವರ್ಷದಲ್ಲಿಯೇ ಮಾಡಿದ್ದು ಆಗಿದೆ ಈ ಇಲಾಖೆಗೆ ಕಳೆದ ವರ್ಷ ಪ್ಲಾನ್ ಪ್ರಾವಿಶನ್‌ನಲ್ಲಿ ೫೦ ಲಕ್ಷರೂಪಾಯಿಗಳನ್ನು ಮಾತ್ರ ಒದಗಿಸಲಾಗಿತ್ತು. ಆದರೆ ಮುಂದಿನ ವರ್ಷಕ್ಕಾಗಿ ೭೦ ಲಕ್ಷ ರೂಪಾಯಿಗಳನ್ನು ಒದಗಿಸಿಕೊಳ್ಳಲಾಗಿದೆ ಇದರಿಂದ ಶೇಕಡಾ ೪೦ ಪರ್ಸೆಂಟ್ ನಷ್ಟ ಹೆಚ್ಚು ಪ್ರಾವಿಷನ್ನು ದೊರಕಿಸಿಕೊಳ್ಳಲಾಗಿದೆ. ಡಿಪಾರ್ಟ್‌ಮೆಂಟಿನ ಒಟ್ಟು ಬಜೆಟ್ ೩.೭೪ ಕೋಟಿ ಇರುತ್ತದೆ. ಹೋದವರ್ಷ (೭೪ ೭೫ಕ್ಕೆ) ೨.೨೧ ಕೋಟಿ ರೂಪಾಯಿಗಳು, ೭೫ ೭೬ಕ್ಕೆ ೨.೫೦ ಕೋಟಿ ರೂಪಾಯಿಗಳು, ಇದ್ದದ್ದು ಈ ವರ್ಷ ೩.೭೪ ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ದೊರಕಿದೆ ಇದೇ ಅಲ್ಲದೆ ಕೇಂದ್ರ ಸರ್ಕಾರದಿಂದಲೂ ಹೆಚ್ಚಿನ ಸಹಾಯ ಸಿಗುವಂಥ ಕೆಲವು ವಿಶೇಷ ಕಾರ್ಯಕ್ರಮಗಳನ್ನು ಸಹಾ ಕೈಗೊಂಡಿದ್ದೇವೆ. ಅವು ಯಾವುವೆಂದರೆ ಹೊನ್ನಾವರ ಮತ್ತು ಮಲ್ಪೆ ಬಂದರುಗಳ ಕಾರ್ಯಕ್ರಮಗಳಾಗಿರುತ್ತದೆ. ಹೊನ್ನಾವರ ಬಂದರಿನ ಕಾರ್ಯಕ್ರಮಕ್ಕಾಗಿ ೪೯ ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗುವುದು ಇದ್ದು ಈ ಬಂದರಿನ ನಿರ್ಮಾಣಕಾರ್ಯ ತ್ವರಿತಗತಿಯಿಂದಸಾಗಿದೆ ಇದರ ಜೊತೆಗೆ ಮಲ್ಪೆ ಬಂದರಿನ ನಿರ್ಮಾಣ ಕಾರ್ಯಕ್ರಮಕ್ಕಾಗಿ ಕಳೆದವರ್ಷ ೨.೧೭ ಕೋಟಿ ರೂಪಾಯಿಗಳ ಅಂದಾಜಿನ ಒಂದು ದೊಡ್ಡ ಯೋಜನೆ ತಯಾರಾಗಿದ್ದು ಈ ವರ್ಷ ಮತ್ತೆ ಅದು ೪.೨೬ ಕೋಟಿ ರೂಪಾಯಿ ಗಳಿಗೆ ಅಂದಾಜ ಪುನರ್ ವಿಮರ್ಶಿತವಾಗಿ ಕೇಂದ್ರ ಸರಕಾರದವರ ಪರಿಶೀಲನೆಯಲ್ಲಿತ್ತು. ಕೇಂದ್ರ ಸರ್ಕಾರದಿಂದ ಈವತ್ತು ಈ ಪುನರ್ವಿಮರ್ಶಿತ ಅಂದಾಜಕ್ಕೆ ಮಂಜೂರಾತಿ ಕೊಟ್ಟ ಬಗ್ಗೆ ಇದೀಗ ಟೆಲಿಗ್ರಾಮ್‌ಬಂದಿರುತ್ತದೆ. ಈ ವಿಷಯವನ್ನು ಈ ಸದನದಲ್ಲಿ ತಿಳಿಸಲು ಸಂತೋಷಪಡುತ್ತೇನೆ. ಈ ವಿಷಯ ಕೇಂದ್ರ ಸರ್ಕಾರದ ಪಬ್ಲಿಕ್ ಇನ್‌ವೆಸ್ಟ್‌ಮೆಂಟ್ ಬೋರ್ಡ್ ಮುಂದೆ ಇದ್ದು ೪.೨೬ ಕೋಟಿ ರೂಪಾಯಿಗಳು ಈ ಯೋಜನೆಗೆ ಮಂಜೂರಾತಿ ಕೊಟ್ಟಿದ್ದೇ ಅಲ್ಲದೆ ಈ ವರ್ಷವೇ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬಹುದೆಂದು ಒಪ್ಪಿಗೆಯ ಟೆಲಿಗ್ರಾಮ್ ಕೂಡ ಬಂದಿರುತ್ತದೆ.

ಹೀಗೆ ಎರಡು ಮೀನುಗಾರಿಕೆ ಬಂದರುಗಳ ನಿರ್ಮಾಣ ಕಾರ್ಯದತ್ತ ನಾವು ಕಾರ್ಯಪ್ರವೃತ್ತ ರಾಗಿದ್ದೇವೆ. ಅಲ್ಲದೆ ಕಾರವಾರ ಬಂದರಿನ ನಿರ್ಮಾಣ ಕಾರ್ಯವನ್ನು ಸಹಾ ಈಗಾಗಲೇ ಪೂರ್ತಿ ಮಾಡಿದ್ದೇವೆ. ಇದೂ ಅಲ್ಲದೆ ಸುಮಾರು ೧೪ ಸಣ್ಣ ಮೀನುಗಾರಿಕೆ ಬಂದರುಗಳಲ್ಲಿ ವಿಶೇಷವಾದ ಸೌಲಭ್ಯಗಳನ್ನು ಮೀನುಗಾರರಿಗೆ ಮಾಡಿಕೊಟ್ಟಿದ್ದು ಆಯಿತು. ನಾನು ಈ ಮೊದಲೇ ಹೇಳಿದಹಾಗೆ ೧೯೫೬–೫೭ರಲ್ಲಿ ನಮ್ಮರಾಜ್ಯದಲ್ಲಿ ಕೇವಲ ೨ ಯಾಂತ್ರಿಕ ದೋಣಿಗಳು ಮಾತ್ರ ಕೆಲಸ ಮಾಡುತ್ತಿದ್ದುವು ಆದರೆ ಇವತ್ತು ಈ ದಿಶೆಯಲ್ಲಿ ಸಾಧಿಕವಾಗಿರುವ ಪ್ರಗತಿಯ ಬಗ್ಗೆ ನಮಗೆ ಬಹಳ ಸಂತೋಷ ವಾಗುತ್ತದೆ. ಏಕೆಂದರೆ ಈಗ ಸುಮಾರು ೧೩೫೦ ಯಾಂತ್ರಿಕ ದೋಣಿಗಳು ೩೨೦ ಕಿಲೋ ಮೀಟರ್‌ಗಳು ಉದ್ದದ ನಮ್ಮ ಕರಾವಳಿಯಲ್ಲಿ ಹಾಲಿ ಕೆಲಸಮಾಡುತ್ತಿವೆ. ಈ ಪ್ರಗತಿಯೂ ಕೂಡ ಒಂದು ವಿಕ್ರಮವನ್ನು ನಾವು ಸಾಧಿಸಿದಂತಾಗಿದೆ. ರಾಷ್ಟ್ರದ ಇತರ ಯಾವುದೇ ರಾಜ್ಯದಲ್ಲಿ ಆಗಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮೀನುಗಾರಿಕೆಗಾಗಿ ಯಾಂತ್ರಿಕ ದೋಣಿಗಳು ಲಭ್ಯವಾಗಿಲ್ಲ. ಮೊದಲು ಕೇರಳ ರಾಜ್ಯ ದಲ್ಲಿ ಯಾಂತ್ರಿಕ ದೋಣಿಗಳು ಅಧಿಕ ಸಂಖ್ಯೆಯಲ್ಲಿ ಕೆಲಸಮಾಡುತ್ತಿದ್ದುವು ಮಹಾರಾಷ್ಟ್ರ ರಾಜ್ಯ ಎರಡನೆಯ ಸ್ಥಾನದಲ್ಲಿತ್ತು ಇವತ್ತು ಈ ಎರಡೂ ರಾಜ್ಯಗಳನ್ನು ನಮ್ಮ ಕರ್ನಾಟಕ ರಾಜ್ಯವು ಹಿಂದಕ್ಕೆ ಹಾಕಿ ಯಾಂತ್ರಿಕ ದೋಣಿಗಳನ್ನು ಮೀನುಗಾರರಿಗೆ ಒದಗಿಸುವಲ್ಲಿ ಹೊಸ ವಿಕ್ರಮವನ್ನು ಸಾಧಿಸಿದ್ದೇವೆಂದು ಹೇಳುವುದಕ್ಕೆ ಬಹಳ ಸಂತೋಷ ಎನಿಸುತ್ತದೆ.

ಮೀನುಗಾರಿಕೆ ಸಹಕಾರ ಸಂಘಗಳ ವಿವಿಧ ಕಾರ್ಯಕ್ರಮಗಳಿಗಾಗಿ ನ್ಯಾಷನಲ್ ಕೋ ಆಪರೇಟಿವ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ಡೆಲ್ಲಿ ಇವರಿಂದ ಸುಮಾರು ೧೧–೮೮ ಲಕ್ಷ ರೂಪಾಯಿಗಳ ಸಹಾಯಧನ ಸಿಕ್ಕಿದೆ. ಎನ್.ಸಿ.ಡಿ.ಸಿ. ವ್ಯವಸ್ಥೆಯ ವತಿಯಿಂದ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸಹಾಯಧನ ಪಡೆದಿರುವುದರಲ್ಲಿ ಕರ್ನಾಟಕ ರಾಜ್ಯ ಇಡಿ ರಾಷ್ಟ್ರದಲ್ಲೇ ಮೊಟ್ಟ ಮೊದಲ ನೆಯ ರಾಜ್ಯವಾಗಿದೆ. ಬೇರೆ ಬೇರೆ ರಾಜ್ಯಗಳು ಸಹ ಈಗ ಮುಂದೆ ಬಂದು ಸಹಾಯಧನವನ್ನು ಎನ್.ಸಿ.ಡಿ.ಸಿ ಯಿಂದ ಕೇಳುತ್ತಿದ್ದಾರೆ. ಶ್ರೀಮತಿ ವಿನ್ನಿಫ್ರೆಡ್ ಫರ್ನಾಂಡಿಸ್‌ವರವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಏನೆಂದರೆ ಈ ಒಂದು ಹಣ ಸಹಾಯವನ್ನು ತಮ್ಮ ಮತಕ್ಷೇತ್ರಕ್ಕೂ ದೊರಕಿಸಿಕೊಡಬೇಕು ಎಂದು ಸೂಚಿಸಿದ್ದಾರೆ. ಈ ಸಹಾಯ ಧನವನ್ನು ಕೇವಲ ಸೊಸೈಟಿಗಳ ಮುಖಾಂತರ ಮಾತ್ರ ಕೊಡಲಾಗುತ್ತದೆ. ತಮ್ಮ ಸಲಹೆಯನ್ನು ಗಮನ ದಲ್ಲಿಟ್ಟುಕೊಂಡು ಕಾರ್ಯರೂಪಕ್ಕೆ ತರುವುದಕ್ಕೆ ಅರ್ಹನಾದ ಯಾವುದಾದರೂ ಸಹಕಾರಿಸಂಘ ಇದ್ದರೆ ಪ್ರಯತ್ನಿಸಬಹುದು ಇದನ್ನು ಪರಿಶೀಲನೆ ಮಾಡಿ ಈ ಅನುಕೂಲತೆಯನ್ನು ದೊರಕಿಸಿ ಕೊಡುವ ಪ್ರಯತ್ನ ಮಾಡುತ್ತೇನೆ. ಇದೂ ಅಲ್ಲದೆ ನಾವು ಸಾಧಿಸಿದ ಮತ್ತೊಂದು ವಿಕ್ರಮವೆಂದರೆ

ಏನೆಂದರೆ ಐಸೀನಿ ಮಾದರಿ ಫಿಶ್ಶಿಂಗ್. ಈ ಒಂದು ಹೊಸ ವಿಧಾನದಿಂದ ಮೀನು ಹಿಡಿಯುವ ಹೊಸ ವಿಧಾನವನ್ನು ಪ್ರಾರಂಭ ಮಾಡಿದ್ದೇವೆ. ಈ ಹೊಸ ವಿಧಾನದಿಂದ ಹೆಚ್ಚಿನ ಕ್ಯಾಚಸ್ ಪಡೆಯಲು ಸಾಧ್ಯವಾಗಿದೆ. ಈ ವಿಧಾನವೂ ಸಹಾ ನಾವೇ ಮೊದಲು ಮಾಡಲು ಪ್ರಾರಂಭಿಸಿರುವುದು ಮೊದಲನೆಯದಾಗಿ ನಾವು ಈ ವಿಧಾನವನ್ನು ಪ್ರಾರಂಭಿಸಿದ್ದೇವೆಂದು ನಾವು ಹೇಳಲು ಸಂತೋಷಪಡುತ್ತೇವೆ.

ಇನ್ನು ಡಿ. ಪಿ. ಎ. ಪಿ. ಕಾರ್ಯಕ್ರಮಗಳಡಿಯಲ್ಲೂ ಸಹಾ ಮೀನುಗಾರಿಕೆ ಅಭಿವೃದ್ಧಿಗಾಗಿ ಹೆಚ್ಚಾಗಿ ಸಹಾಯ ಸಿಕ್ಕುತ್ತಿದೆ, ಶ್ರೀಮತಿ ವಿನ್ನಿಫ್ರೆಡ್ ಫರ್ನಾಂಡಿಸ್ ಅವರು ಮಾತನಾಡುವಾಗ ನಾನು ಬಿಜಾಪುರಕ್ಕೆ ಹೆಚ್ಚಿಗೆ ಹಣವನ್ನು ದೊರಕಿಸಿಕೊಂಡಿದ್ದೇನೆಂದು ಹೇಳಿದ್ದಾರೆ. ಅವರಿಗೆ ಈ ಒಂದು ಮಾತು ತಿಳಿಯಬೇಕಾಗುತ್ತದೆ ಕೇಂದ್ರಸರ್ಕಾರದವರು ದೇಶದಲ್ಲಿ ಡ್ರಾಟ್ ಪ್ರೋನ್ ಜಿಲ್ಲೆಗಳು ಯಾವುವು ಎಂಬುದನು ಗುರುತಿಸುವ ಕೆಲಸವನ್ನು ಮಾಡಿ ಕರ್ನಾಟಕ ರಾಜ್ಯದಲ್ಲಿ ಬಿಜಾಪುರ ಜಿಲ್ಲೆಯನ್ನು ಗುರುತಿಸಿ ಕೊಂಡಿದ್ದಾರೆ. ಈ ಕಾರಣದಿಂದ ಬಿಜಾಪುರ ಜಿಲ್ಲೆಗೆ ಈ ವಿಶೇಷ ಯೋಜನೆಯ ಸೌಲಭ್ಯ ದೊರೆತರೆ ಅದರ ಕೀರ್ತಿ ಕೇಂದ್ರ ಸರ್ಕಾರಕ್ಕೆ ಸಲ್ಲಬೇಕು.

ಶ್ರೀಮತಿ ವಿನ್ನಿಫ್ರೆಡ್ ಫರ್ನಾಂಡಿಸ್.—ನಮ್ಮದು ಫ್ಲಡ್ ಎಫೆಕ್ಟೆಡ್ ಏರಿಯಾ.

ಶ್ರೀ ಕೆ. ಟಿ. ರಾಥೋಡ್. —ಫ್ಲಡ್ ಎಫೆಕ್ಟೆಡ್ ಏರಿಯಾಕ್ಕೆ ವೆಸ್ಟರನ್ ಕಂಟ್ರೀಸ್ ತರಹ ಏನಾದರೂ ಯೋಜನೆಯಿದ್ದರೆ ಅದನ್ನು ದೊರಕಿಸಿಕೊಳ್ಳಬೇಕು ಡಿಪಿಎಪಿ ಬರಗಾಲಕ್ಕೆ ಸಂಬಂಧಿಸಿದ ವಿಶೇಷ ಯೋಜನೆ ಇದ್ದು ಅದನ್ನು ಕೇಂದ್ರ ಸರ್ಕಾರದವರು ಬಿಜಾಪುರಕ್ಕೆ ಅಲ್ಲಿಯ ಅಗತ್ಯವನ್ನು ಗುರುತಿಸಿ ಕೊಟ್ಟಿದ್ದಾರೆ. ಡಿ. ಪಿ. ಎ. ಪಿ. ಯೋಜನೆಯಡಿಯಲ್ಲಿ ಮೀನುಗಾರಿಕೆ ಮತ್ತು ತೋಟಗಾರಿಕೆ ಅಭಿವೃದ್ಧಿಗೂ ಹಣದ ಸೌಲಭ್ಯವನ್ನು ಪಡೆದುಕೊಂಡು ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಾದಷ್ಟು ನಾವು ಏನಾದರೂ ಪ್ರಾಮಾಣಿಕವಾದ ಕೆಲಸಮಾಡಿದ್ದರೆ ಅದನ್ನು ನೋಡಿ ಸಮಾಧಾನಪಟ್ಟುಕೊಳ್ಳುವುದನ್ನು ಬಿಟ್ಟು, ಇದನ್ನು ಏತಕ್ಕೆ ಮಾಡಿದಿರಿ ಎಂದು ಕೇಳಿದರೆ ಅದಕ್ಕೆ ಏನು ಉತ್ತರ ಹೇಳಬೇಕೋ ನನಗಂತೂ ಅರ್ಥವಾಗುವುದಿಲ್ಲ. ಜೊತೆಗೆ ಡ್ರಾಟ್ ಪ್ರೋನ್ ಏರಿಯಾ ಕಾರ್ಯಕ್ರಮಗಳು ಈ ಬಿಜಾಪುರ ಜಿಲ್ಲೆಯಲ್ಲಿ ವರಲ್ಡ್ ಬ್ಯಾಂಕ್ ಸಹಾಯದಿಂದ ನಡೆಯುತ್ತಿವೆ. ೪ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ನಡೆದಿದೆ. ಈ ಕಾರ್ಯಕ್ರಮದಡಿಯಲ್ಲಿ ಈ ವರ್ಷ ೪೭ ಲಕ್ಷ ರೂಪಾಯಿಗಳ ಅಲಾಟ್‌ಮೆಂಟ್ ದೊರೆಕಿದ್ದು. ಮುಂದಿನ ವರ್ಷದಲ್ಲಿ ೫೪ಲಕ್ಷ ರೂಪಾಯಿಗಳನ್ನು ದೊರಕಿಸಿಕೊಳ್ಳಲು ವ್ಯವಸ್ಥೆ ಮಾಡಿದ್ದೇವೆ. ಉಳಿದ ಜಿಲ್ಲೆಗಳಿಗೂ ಕೂಡ ಈ ಒಂದು ವಿಶೇಷ ಯೋಜನೆ ಕೆಳಗೆ ಮೀನುಗಾರಿಕೆ ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಇದೆ.

ಶ್ರೀಮತಿ ವಿನ್ನಿ ಪ್ರೆಡ್ ಫರ್ನಾಂಡಿಸ್‌ರವರಿಗೆ ಇನ್ನೂ ಒಂದು ಮಾತು ಹೇಳಬೇಕಾಗಿದೆ. ಅವರು ಒಂದು ಪ್ರಶ್ನೆಯನ್ನು ಹಾಕಿದ್ದಾರೆ. ಬಜೆಟ್‌ನಲ್ಲಿ ಇನ್‌ಲ್ಯಾಂಡ್ ಫಿಷರೀಸ್‌ಗೆ ೨೫ಲಕ್ಷ ಒದಗಿಸಿದ್ದರೆ ಮೆರೀನ್ ಫಿಷರೀಸ್‌ಗೆ ೧೩.೫೦ಲಕ್ಷವನ್ನು ಮಾತ್ರ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಹಾಗೂ ಈ ೩೧.೫೦ಲಕ್ಷ ರೂಪಾಯಿಗಳನ್ನು ಏತಕ್ಕೆ ಉಪಯೋಗ ಮಾಡುತ್ತೀರಿ ಎಂದೂ ಕೇಳಿದ್ದಾರೆ. ೩೧.೫೦ಲಕ್ಷ ರೂಪಾಯಿಗಳನ್ನು ೧೦ ಬೇರೆ ಬೇರೆ ಯೋಜನೆಗಳಿಗೆ ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಅವರಿಗೆ ಗೊತ್ತಿರುವ ಹಾಗೆ ಐಸ್‌ಪ್ಲಾಂಟ್‌ಗಳಿಗೋಸ್ಕರ ೪ಲಕ್ಷ ಇದೆ. ಐಸ್‌ಪ್ಲಾಂಟಗಳನ್ನು ಇನ್‌ಲ್ಯಾಂಡ್ ಫಿಷರೀಸ್ ಡೆವಲಪ್‌ಮೆಂಟ್‌ಗಾಗಿ ಉಪಯೋಗಮಾಡುವುದಿಲ್ಲ, ಫಿಷ್ ಮಾರ್ಕೆಟ್ಸ್ ಕಟ್ಟಿಸುವ ಯೋಜನೆಗಾಗಿ ೧.೫೦ಲಕ್ಷ ಒದಗಿಸಿದ್ದೇವೆ. ಎರಡೂ ಭಾಗದವರೂ ಮುಂದೆ ಬಂದು ಈ ಯೋಜನೆಯ ಅನುಕೂಲ ಪಡೆಯಬಹುದು. ಮುನಿಸಿಪಾಲಿಟಿಯವರಿಗೆ ಮೀನು ಮಾರುಕಟ್ಟೆ ಕಟ್ಟಲು ಸಹಾಯ ಮಾಡಲೋಸುಗ ಈ ಹಣ ಒದಗಿಸಿದ್ದೇವೆ, ಹಾಗೆಯೇ ರೀಸರ್ಚ್‌ಗೋಸ್ಕರ ೨.೫೦ಲಕ್ಷ ಇದೆ. ರೀಸರ್ಚ್‌ನ ಕೆಲಸ ಕಾರ್ಯಗಳನ್ನು ಮೆರೀನ್ ಸೈಡ್‌ನಲ್ಲಿ ಮಾಡುವುದರಿಂದ ಈ ಹಣವೂ ಸಹಾ ಮೆರೀನ್ ಫಿಷರೀಸ್‌ಗಾಗೇ ಉಪಯೋಗವಾಗುತ್ತದೆ. ಎಜುಕೇಷನ್ ಟ್ರೈನಿಂಗ್‌ಗೆಂದು ೪ ಲಕ್ಷ ಇಟ್ಟಿದ್ದೇವೆ. ಆಕ್ವೇರಿಯಂಗೆ ೨.೫೦ಲಕ್ಷ ಇದೆ. ಮತ್ತು ಡೈವರಿಫಿಕೇಷನ್ ಆಫ್ ಫಿಷರೀಸ್ ಪ್ರೋಗ್ರಾಮ್ ಕೂಡಾ ಮೆರೀನ್ ಸೈಡ್‌ನಲ್ಲೆ ಬರುತ್ತದೆ ಫಿಷರೀಸ್ ಎಕ್ಸ್‌ಟೆನ್‌ಷನ್‌ಗೋಸ್ಕರ ೨ ಭಾಗಗಳಿಗೂ ತಲಾ ಒಂದು ಲಕ್ಷ ಇಟ್ಟಿದೇವೆ. ಫಿಷರೀಸ್ ಅಡ್ಮಿನಿಸ್ಟ್ರೇಷನ್‌ಗೆ ೭ಲಕ್ಷ ಇದೆ. ಮತ್ತೆ ಹೌಸಿಂಗ್‌ಗೆ ೫ ಲಕ್ಷ ಪ್ರೊವೈಡ್ ಮಾಡಿದ್ದು, ರಿಹಾಬಿಲಿಟೇಷನ್ ಸ್ಕೀಮ್ಸ್‌ಗೆ ತಮಗೆ ಗೊತ್ತಿರುವಂತೆ ೨ ಲಕ್ಷ ಕೊಟ್ಟಿದ್ದೇವೆ. ಇದೆಲ್ಲಾ ವಿವರಗಳನ್ನು ನೋಡಿದರೆ ೩೧ಲಕ್ಷ ರೂಪಾಯಿಗಳಲ್ಲಿ ಸುಮಾರು ೧೮ಲಕ್ಷ ರೂ ಮೆರೀನ್ ಫಿಷರೀಸ್‌ಗೇ ಕಾರ್ಯಕ್ರಮಗಳಿಗೇ ಉಪಯೋಗಿಸಲ್ಪಡುವುದು ಗೊತ್ತಾಗುತ್ತದೆ. ಹೀಗೆ ಒಟ್ಟು ೭೦ಲಕ್ಷದ ಅಲಾಟ್‌ಮೆಂಟ್‌ನಲ್ಲಿ

೧೮ಲಕ್ಷ ಮತ್ತು ೧೩ಲಕ್ಷ ಸೇರಿ ೩೧ಲಕ್ಷ ರೂಪಾಯಿಗಳು, ಮೆರೀನ್‌ಫಿಷರೀಸ್‌ಗೇ ಉಪಯೋಗವಾಗುತ್ತದೆ. ಇನ್ನೊಂದು ವಿಷಯವನ್ನು ಸಹಾ ಅವರ ಗಮನಕ್ಕೆ ತರಬೇಕು. ಮೀನುಗಾರಿಕೆ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಖರ್ಚಾಗಿರುವ ಲೆಖ್ಖದ ವಿವರಗಳನ್ನು ನಾವು ತೆಗೆದರೆ ಆಗ ನಮಗೆ ಅರಿವಾಗುತ್ತದೆ. ಇಲ್ಲಿಯವರೆಗೆ ಸುಮಾರು ನೂರಕ್ಕೆ ೭೫ ರಷ್ಟು ಹಣ ಕರಾವಳಿ ಪ್ರದೇಶಕ್ಕೇ ಖರ್ಚುಮಾಡಿದೆಯೆಂದರು. ಇದರಿಂದ ಫಾರಿನ್ ಎಕ್ಸ್‌ಚೇಂಜ್ ಏನೋ ವಿಶೇಷವಾಗಿ ಬರುತ್ತಿದೆ ನಿಜ. ೩-೪ ವರ್ಷದ ಹಿಂದೆ ಈ ಫಾರಿನ್ ಎಕ್ಸ್‌ಚೇಂಜ್ ೩ ಕೋಟಿ ರೂಪಾಯಿಗಳಷ್ಟು ಸಿಕ್ಕಿದ್ದರೆ. ಈಗ ೧೦ಕೋಟಿ ರೂಪಾಯಿಗಳಷ್ಟು ಫಾರಿನ್ ಎಕ್ಸ್‌ಚೇಂಜ್ ಸಿಕ್ಕುತ್ತಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಫಾರಿನ್ ಎಕ್ಸ್‌ಚೇಂಜ್ ಲಭ್ಯವಾಗುತ್ತಿದ್ದರೆ ಇಲ್ಲಿಯವರೆಗೆ ನಾವು ಮೆರೀನ್ ಫಿಷರೀಸ್ ಅಭಿವೃದ್ಧಿಗಾಗಿ ಅಗತ್ಯವಾದ ಹಣವನ್ನು ಖರ್ಚು ಮಾಡದೇ ಇದ್ದಿದ್ದರೆ ಈ ಪ್ರಗತಿ ಸಾಧಿಸಲು ಹೇಗೆ ಸಾಧ್ಯವಾಗುತ್ತಿತ್ತು ? ಇದಕ್ಕಾಗಿ ಹೆಚ್ಚು ಹೆಚ್ಚಾಗಿ ಹಣವನ್ನು ಖರ್ಚುಮಾಡಿದ್ದೇವೆ. ಇದರಿಂದ ನಿಮಗೆ ಆಶ್ಚರ್ಯವಾಗುತ್ತದೆ. ಕೇವಲ ೭೦ಲಕ್ಷ ರೂಪಾಯಿಗಳ ಪ್ಲಾನ್ ಪ್ರಾವಿಷನ್‌ನಲ್ಲಿ ೩೦ಲಕ್ಷವನ್ನು ಮೆರೀನ್ ಫಿಷರೀಸ್‌ಗೇ ಕೊಡುತ್ತೇವೆ. ಹಾರ್‌ಬರ್ ಮತ್ತು ಸೆಂಟ್ರಲ್ ಸ್ಕೀಮ್ಸ್ ಏನಿವೆ ಅವುಗಳನ್ನು ಈ ಲೆಕ್ಕದಲ್ಲೇ ತೆಗೆದುಕೊಂಡಿಲ್ಲ. ಎನ್‌ಸಿಡಿಸಿ ವತಿಯಿಂದ ಮತ್ತು ಹಾರ್ಬರ್ಸ್ ಡೆವಲಪ್‌ಮೆಂಟಿಗೆ ಮುಂದಿನವರ್ಷ ನಮಗೆ ಸುಮಾರು ೩೧ಲಕ್ಷ ಚಿಲ್ಲರೆ ರೂಪಾಯಿಗಳು ಲಭ್ಯವಾಗಬಹುದು. ಇದೆಲ್ಲಾ ಬರೀ ಚಿಲ್ಲರೆ ಮೆರೀನ್ ಫಿಷರೀಸ್‌ಗೇ ಖರ್ಚು ಮಾಡುವಂತಾದು ಆಗಿದೆ. ಇನ್ನೂ ಒಂದು ವಿಷಯವನ್ನು ತಾವು ಕೇಳಿದ್ದೀರಿ. ೩೦ಫೀಟ್ ಬೋಟ್ಸ್‌ಗೆ ಸಬ್ಸಿಡಿ ಕೊಡುತ್ತಿಲ್ಲ, ಬದಲಾಗಿ ದೊಡ್ಡದೊಡ್ಡ ಬೋಟ್ಸ್‌ಗೆ ಕೊಡುವುದರಿಂದ ಶ್ರೀಮಂತರಿಗೆಮಾತ್ರ ಅನುಕೂಲವಾಗುತ್ತಿದೆ ಎಂಬ ಮಾತನ್ನು ಹೇಳಿದ್ದೀರಿ. ವಾಸ್ತವವಾಗಿ ಅದುಹಾಗೆ ಇಲ್ಲ. ಈ ವರ್ಷ ೩೦ ಫೀಟ್‌ವರೆಗೆ ಇರುವ ದೋಣಿಗಳಿಗೂ ಸಬ್ಸಿಡಿ ಕೊಡುತ್ತಿದ್ದೇವೆ ಈ ಬಗ್ಗೆ ಯಾರೂ ಶಂಕೆ ಪಡುವ ಅವಶ್ಯಕತೆ ಏನೂ ಇಲ್ಲ. ಈ ದಿಶೆಯಲ್ಲೂ ಸಹಾ ಇಲಾಖೆಯಲ್ಲಿ ಪ್ರಗತಿಯನ್ನು ಮಾಡಿದ್ದಾಗಿದೆ. ಇದರ ಜೊತೆಗೆ ಮುಖ್ಯವಾಗಿ ನಾವು ಒಳನಾಡು ಪ್ರದೇಶಗಲ್ಲೇ ಮೀನುಗಾರಿಕೆ ಅಭಿವೃದ್ಧಿಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಸಾಧಿಸಬೇಕಾಗಿದೆ. ನಮಗೆ ಇಡೀ ದೇಶದಲ್ಲೇ ಹೆಚ್ಚಿನ ಇನ್‌ಲ್ಯಾಂಡ್ ಫಿಷರೀಸ್ ಡೆವಲಪ್‌ಮೆಂಟ್‌ಗಾಗಿ ವಾಟರ್ ರಿಸೋರ್ಸಸ್ ಅವಾಯಲೇಬಲ್ ಇದೆ. ಮೀನುಗಾರಿಕೆಯನ್ನು ಬೆಳೆಸುವುದಕ್ಕೆ ವಾಟರ್‌ರಿಸೋರ್ಸಸ್ ಸಾಕಷ್ಟು ಸಿಕ್ಕುತ್ತಿದೆ. ಅಂದರೆ ೪ಲಕ್ಷ ಹೆಕ್ಟಾರ್‌ನಷ್ಟು ನೀರು ನಮಗೆ ಮೀನುಗಾರಿಕೆ ಅಭಿವೃದ್ಧಿಗೆ ಸಿಕ್ಕುತ್ತಿದೆ. ಆದರೆ ಇವತ್ತು ನಮಗೆ ಇರುವಂತಹ ನಿಜವಾದ ಅಡಚಣೆಯೆಂದರೆ ಮೀನುಮರಿಗಳ ಉತ್ಪತ್ತಿಯಲ್ಲಿ ಇರುವ ಕೊರತೆ ನಮಗೆ ಆಗತ್ಯವಾದಷ್ಟು ಮೀನುಮರಿಗಳ ಈ ಉತ್ಪತ್ತಿಯನ್ನು ಹೆಚ್ಚುಹೆಚ್ಚಾಗಿ ಮಾಡುವುದರಿಂದ ನಾವು ಹೆಚ್ಚು ಪ್ರಮಾಣದಲ್ಲಿ ಒಳನಾಡಿನಲ್ಲೂ ಮೀನುಗಾರಿಕೆ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಿದೆ. ಈಗಾಗಲೇ ಬೇರೆ ಕಡೆಗಳಿಂದ ಮೀನುಮರಿಗಳನ್ನು ತರಿಸುತ್ತಿದ್ದೇವೆ. ಈಗ ಇರುವ ಕೊರತೆಯನ್ನು ತುಂಬಿಸುವುದಕ್ಕೆ ಅಗತ್ಯವಿರುವ ೩ಕೋಟಿ ಮೀನುಮರಿಗಳನ್ನು ಉತ್ಪಾದನೆ ಮಾಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಮೀನುಮರಿಗಳನ್ನು ಹೆಚ್ಚುಹೆಚ್ಚಾಗಿ ಬೆಳೆಸುವುದರಿಂದ ಇನ್‌ಲ್ಯಾಂಡ್ ಫಿಷರೀಸ್ ಡೆವಲಪ್‌ಮೆಂಟ್ ಆಗುವುದಕ್ಕೆ ಸಾಧ್ಯವಿದೆ. ಈಗ ಇರುವಂಥ ಒಳನಾಡಿನ ಇಡೀ ವಾಟರ್ ರಿಸೋರ್ಸಸ್ ಸಂಪೂರ್ಣವಾಗಿ ಅಭಿವೃದ್ಧಿಪಡಿಸಬೇಕಾದರೆ ನಮಗೆ ಸುಮಾರು ೪೦ಕೋಟಿಯಷ್ಟಾದರೂ ಮೀನುಮರಿಗಳು ನಮಗೆ ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ.

ನಾಲ್ಕು ಕೋಟಿ ಮೀನು ಮರಿಗಳ ಅವಶ್ಯಕತೆ ನಮಗೆ ಇವತ್ತಿನ ದಿವಸ ಇದೆ. ಈ ಕೊರತೆಯನ್ನು ತುಂಬುವುದಕ್ಕೆ ವ್ಯಾಪಕವಾಗಿಯೂ ವ್ಯವಸ್ಥಿತವಾಗಿಯೂ ಕಾರ್ಯನಿರ್ವಹಿಸಲು "ಇನ್‌ಲ್ಯಾಂಡ್ ಫಿಷರೀಸ್ ಸೀಡ್ ಪ್ರೊಡಕ್ಷನ್ ಕಾರ್ಪೊರೇಷನ್ ಎಂಬ ಸಂಸ್ಥೆಯೊಂದನ್ನು ಹೊಸದಾಗಿ ರೂಪಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆ ಬಗ್ಗೆ ಸರ್ಕಾರ ಇಷ್ಟರಲ್ಲೇ ನಿರ್ಣಯವನ್ನು ಸಹಾ ಕೈಗೊಳ್ಳುತ್ತದೆ ಅದಕ್ಕಾಗಿ ೫ಲಕ್ಷ ರೂಪಾಯಿಯನ್ನು ಬಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದೇವೆ. ಈ ಇನ್‌ಲ್ಯಾಂಡ್ ಫಿಷರೀಸ್ ರಿಸೋರ್ಸಸ್ ಸಾಕಾದಷ್ಟಿದೆ. ಇದರಲ್ಲಿ ಪ್ರಾರಂಭದಲ್ಲಿ ಒಂದು ಲಕ್ಷ ಹೆಕ್ಟೇರಿನಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುವ ಯೋಜನೆ ಇದೆ. ನಮ್ಮ ವ್ಯವಸಾಯ ಇಲಾಖೆ ಮಾನ್ಯ ಮಂತ್ರಿಗಳು ೬೫-೬೭ ಲಕ್ಷ ಟನ್‌ನಷ್ಟು ಆಹಾರಧಾನ್ಯವನ್ನು ರಾಜ್ಯದಲ್ಲಿ ಬೆಳೆಸುತ್ತಾರೆ. ಸಾತ್ವಿಕ ಆಹಾರ, ಅಂದರೆ ಮೀನು, ಹಣ್ಣು ಇವುಗಳ ಉತ್ಪಾದನೆಯ ವಿಷಯವನ್ನು ತುಲನಾತ್ಮಕವಾಗಿ ನಾವು ಗಣನೆಗೆ ತೆಗೆದುಕೊಂಡರೆ, ೬೫ಲಕ್ಷ ಟನ್ ಆಹಾರಧಾನ್ಯವನ್ನು ಕೃಷಿ ಇಲಾಖೆ ಉತ್ಪಾದನೆ ಮಾಡುತ್ತಿದ್ದಾರೆ ನಮ್ಮ ಮೀನುಗಾರಿಕೆ ಇಲಾಖೆ ಸುಮಾರು ೨ಲಕ್ಷ ಟನ್ ಮೀನು ಉತ್ಪಾದನೆ ಮಾಡುತ್ತಿದೆ. ಅಧಿಕ

ಪ್ರೋಟೀನ್‌ನಿಂದ ಕೂಡಿದ ಆಹಾರವೆಂದು ಪರಿಗಣಿಸಿದಾಗ ೬ ಲಕ್ಷ ಟನ್ನಿನಷ್ಟು ಪ್ರೋಟೀನ್ ರಿಚ್ ಆಹಾರದಂತಾಯಿತ್ತು ಈ ಹೋಲಿಕೆಯ ಹಿನ್ನೆಲೆಯಲ್ಲಿ ಕೃಷಿ ಇಲಾಖೆಗೆ ೧೨ ಕೋಟಿ ರೂಪಾಯಿ ಬಜೆಟ್ ಆಗಿದ್ದರೆ ನಮಗೆ ಒಂದು ಕೋಟಿ ಚಿಲ್ಲರೆಯಷ್ಟಾದರೂ ದೊರೆಯಬೇಕು. ಆದರೆ ಈಗ ನಮಗೆ ೭೦ ಲಕ್ಷ ಏನೋ ಕೊಟ್ಟಿದ್ದಾರೆ ಇದು ಬಹಳ ಕಡಿಮೆಯಾಗುತ್ತದೆ. ನಮಗೆ ಒಂದು ಕೋಟಿರೂಪಾಯಿಯಷ್ಟಾದರೂ ಕೊಟ್ಟರೆ, ನಿಜವಾಗಿ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ನಮ್ರವಾಗಿ ಹೇಳ ಬಯಸುತ್ತೇನೆ. ಇಷ್ಟು ರೀತಿಯಿಂದ ಮೀನುಗಾರಿಕೆ ಅಭಿವೃದ್ಧಿ ಕೆಲಸಕಾರ್ಯಗಳು ರಾಜ್ಯದಲ್ಲಿ ನಡೆಯುತ್ತಿವೆಯೆಂದು ಈ ಮಾನ್ಯ ಸಭೆಗೆ ತಿಳಿಸಲು ಸಂತೋಷವೆನಿಸುತ್ತದೆ. ಈ ಇಲಾಖೆಯ ಬೇಡಿಕೆಯನ್ನು ಕುರಿತು ನಾಲ್ಕು ಜನ ಮಾನ್ಯ ಸದಸ್ಯರುಗಳು ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆದರಲ್ಲಿಯೂ ಶ್ರೀಮತಿ ವಿನ್ನಿಫ್ರೈಡ್ ಫರ್ನಾಂಡಿಸ್ ಅವರು ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಡುವುದರ ಜೊತೆಗೆ ಟೀಕೆಯನ್ನೂ ಮಾಡಿದರು. ನನಗನ್ನಿಸುತ್ತದೆ ಈಗ ನಾನು ಕೊಟ್ಟಿರತಕ್ಕ ಉತ್ತರದಿಂದ ಅವರು ಸಮಾಧಾನಪಟ್ಟುಕೊಂಡಿದ್ದಾರೆ ಎಂದು ತಿಳಿದುಕೊಂಡಿದ್ದೇವೆ. ಈ ಎರಡು ಇಲಾಖೆಯ ಬೇಡಿಕೆಗಳಿಗೆ ತಾವು ಸರ್ವಾನುಮತದಿಂದ ತಮ್ಮ ಮಂಜೂರಾತಿಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER ; Though a large number of Hon'ble Members participated in the discussions and offered their suggestions and also made criticisms, the only pity is that most of them are actually absent when the reply is given by the Hon'ble Ministers concerned. It is not good. It amounts to discourtesy to the House. Now I will put the demands to the vote of the house, The question is

> "That the sums not exceeding the amounts be granted to Goveramnment to defray the charges which will come in course of payment during the financial year ending 31st day of March 1977 respect of demand Nos 39, 42, 45, 46,40 and 47.

The motion was adopted and the demands will granted.

As ordered by the chair, the motion for Demands for Grants adopted by the House are reproduced below.

DEMAND NO. 39.—AGRICULTURE (EXCLUDING HORTICULTURE)

" That a sum not exceeding Rs.23, 79 67.000 be granted to the Government to defray the charges which will come in coures of payment during the financial year ending 31st day of March1977 in respect of' Demad No 39 "Agriculture (Excluding Horticulture)."

DEMAND No. 40.— HORTICULTURE

"That a sum not exceeding Rs. 2,82.23.000 be granted to the Government to defray the charges which will come in course of payment during the financinl year ending 31st day of March 1977 in respect of Demand No 40 Horticulture"

DEMAND NO. 42.—SOIL AND WATER CONSERVATION.

"That a sum not a exceeding Rs.4,58,99,000 be granted to the Government to defray the charges which willcome in course of payment during the finaneial year ening 31st day of March 1977 in respect of Demand No. 42 Soil and Water Conservation."

DEMAND NO. 45.—ANIMAL HUSBANDRY

",That a sum not exceediug Rs. 5,42.66.000 be granted to the Government to defray the charges which will in in course of payment during the financial year ending 31st day of March 1977 in respect of Demand No. 45 Animal Husbandry."

DEMAND NO. 46.—DAIRY DEVELOPMENT.

"That a sum not exceediug Rs. 9,53,99000 be granted to thr Government in defray the charges which will come in course of payment during the financial year ending 31st day of March 1977 in respect of Demand No; 46 Dairy Development"

DEMAND NO. 47.—FISHERIES

"That a sum not exceeding Rs. 2.96.49.000 be granted to the Government to defray the charges which will come in course of payment during the financial year ending 31st day of March 1977 in Demand No. 47 "Fisheries"

MR DEPUTY SPEAKER.—The House will now rise to meet again at 9 A.M. tomorrow.

The House adjourned at thirty five Minutes past Six of the Clock to meet again at Nine of the Clock on Saturday, the 20th March 1976.